
ಸಂಪುಟ 23 ಸಂಚಿಕೆ 26-27
ಜುಲೈ 8, 2001 ಬೆಲೆ ರೂ. 3.00


ದುಡಿವ ಜನರ ಪ್ರಾಣಮಿತ್ರ



ಕರುಣಾನಿಧಿ: ಭ್ರಷ್ಟಾಚಾರ-ಬಂಧನ



ಕಾರ್ಮಿಕ ಕಾಯ್ದೆಗೆ ಕರಾಳ ತಿದ್ದುಪಡಿಗಳು



ಯುರೋಪ್: ಬುಶ್ ಹೋದಲ್ಲೆಲ್ಲಾ ಪ್ರತಿಭಟನೆ

ಉತ್ತಮ ಚಿತ್ರ ಲಗಾನ್



ಮಾಸದ ನೆನಪುಗಳು
(ಒಂದು ರಾಜಕೀಯ ಆತ್ಮಕಥನ)



ಜ್ಯೋತಿಬಸು ಆತ್ಮಕಥನ

ಕನ್ನಡಕ್ಕೆ: ವಿಶ್ವಕುಂದಾಪುರ

ಧಾರಾವಾಹಿ: 68

ಹಿಂದಿನ ಸಂಚಿಕೆಯಲ್ಲಿ ಕೇರಳದಲ್ಲಿ ಎಲ್‌ಡಿಎಫ್ ಗೆಲುವು, ಪ.ಬಂಗಾಳದಲ್ಲಿ ಲೋಕಸಭಾ ಚುನಾವಣೆಯಲ್ಲಿ ಎಡರಂಗದ ಭಾರಿ ಜಯ, ಸರ್ವಾಧಿಕಾರದ ಅಪಾಯ, 9 ರಾಜ್ಯ ಸರಕಾರಗಳ ವಜಾ...ಈ ಬಗ್ಗೆ ಓದಿರುವಿರಿ. ಈ ಸಂಚಿಕೆಯಲ್ಲಿ ಪುರಸಭೆ ಚುನಾವಣೆಯಲ್ಲಿ ಎಡರಂಗ ಜಯಭೇರಿ, 18 ವರ್ಷದವರಿಗೂ ಮತದಾನದ ಹಕ್ಕು, ಬಲಗೊಂಡ ಎಡರಂಗ, 1982 ರ ವಿಧಾನಸಭಾ ಚುನಾವಣೆಯಲ್ಲಿ ಎಡರಂಗ ಜಯಭೇರಿ.... ಈ ಬಗ್ಗೆ ಓದಿ.

ಏಪ್ರಿಲ್ 7 ರಂದು ಕಲ್ಕತ್ತದಲ್ಲಿ ಮೌನ ಮೆರವಣಿಗೆ ನಡೆಸಲಾಯಿತು. ಹಳ್ಳಿ ಹಳ್ಳಿಗಳು, ಪಟ್ಟಣ ಪಟ್ಟಣಗಳು, ಫ್ಯಾಕ್ಟರಿ, ಫ್ಯಾಕ್ಟರಿಗಳಲ್ಲಿ ಪ್ರತಿಭಟನೆಯ ದನಿ ಮಾರ್ದನಿಸಿತು. ರಾಜ್ಯದಲ್ಲಿ ಅಶಾಂತಿ ಹರಡುವ ಪಿತೂರಿಯ ವಿರುದ್ಧ ಜನತೆ ಸಿಡಿದೆದ್ದಿತು. ನ್ಯಾಯಬದ್ಧವಾಗಿ ಚುನಾಯಿತವಾದ ರಾಜ್ಯ ಸರಕಾರವನ್ನು ಉರುಳಿಸುವ ಯಾವುದೇ ಪ್ರಯತ್ನ ಮಾಡಿದರೆ ಇಡೀ ರಾಜ್ಯ ಹೊತ್ತಿ ಉರಿದೀತು ಎಂಬ ಘೋಷಣೆ ರಾಜ್ಯದೆಲ್ಲೆಡೆ ಮೊಳಗಿತು. ಮುರ್ಖತನದ ಕೆಲಸಕ್ಕೆ ಕೈ ಹಾಕಬೇಡಿ ಎಂದು ಇಂದಿರಾಗಾಂಧಿಗೆ ಅವರ ಸಲಹೆಗಾರರು ಸಲಹೆ ಕೊಟ್ಟಿರಬೇಕು. ವಿವೇಕ ಮೇಲುಗೈ ಪಡೆಯಿತು. ಇಂದಿರಾಗಾಂಧಿ ಪಶ್ಚಿಮ ಬಂಗಾಳದ ತಂಟೆಗೆ ಬರಲಿಲ್ಲ.



1982 ರಲ್ಲಿ ಮತ್ತೆ ಮುಖ್ಯಮಂತ್ರಿಯಾಗಿ ಜ್ಯೋತಿಬಸು ಪ್ರಮಾಣವಚನ ಸ್ವೀಕಾರ

ಆದರೆ ಎಸ್ಮಾ (ESMZ) ಮತ್ತು ನಾಸಾ (NASA) ದಂಥ ಕರಾಳ ಕಾನೂನುಗಳನ್ನು ತರುವುದನ್ನೇನೂ ಇಂದಿರಾಗಾಂಧಿ ನಿಲ್ಲಿಸಲಿಲ್ಲ. ಅವುಗಳು ಮುಷ್ಕರಗಳನ್ನು ಮುರಿಯಲು ಅವರ ಸಾಧನಗಳಾಗಿದ್ದವು. ನಮ್ಮ ರಾಜ್ಯದಲ್ಲಿ ಈ ಕಾನೂನುಗಳ ಅನುಷ್ಠಾನಕ್ಕೆ ಅವಕಾಶ ಕೊಡುವುದಿಲ್ಲ ಎಂದು ನಾವು ಸಾರಿದೆವು. ವಿಚಾರಣೆಯಿಲ್ಲದೆ ಜನರನ್ನು ಜೈಲುಗಳಲ್ಲಿ ಕೊಳೆಹಾಕುವ ಸಂಪ್ರದಾಯವನ್ನು ನಾವು ವಿರೋಧಿಸಿದೆವು.

ಇಂದಿರಾ ನಮ್ಮ ಸರಕಾರ ಉರುಳಿಸುವುದರಿಂದ ದೂರವಿದ್ದರೇನೊ ಹೌದು. ಆದರೆ ಸರಕಾರದ ಕಾರ್ಯನಿರ್ವಹಣೆಯಲ್ಲಿ ಅಡ್ಡಿ ಆತಂಕಗಳನ್ನು ಸೃಷ್ಟಿಸಲು ಅವರು ಯತ್ನಿಸಿದರು. ಯೋಜನೆ ವೆಚ್ಚ ಹಾಗೂ ಕೈಗಾರಿಕೆ ಲೈಸೆನ್ಸ್ ವಿಚಾರದಲ್ಲಿ ರಾಜ್ಯ ತುಂಬಾ ಸಂಕಷ್ಟ ಅನುಭವಿಸಿತು. ಮುಕ್ತವಾಗಿ ಮಾಡಲು ಆಗದ್ದನ್ನು ಇಂದಿರಾಗಾಂಧಿ ಅಡ್ಡದಾರಿಯಲ್ಲಿ ಮಾಡಲು ಈಗ ಪ್ರಯತ್ನ ನಡೆಸಿದ್ದರು.

ಒಂದು ದುರದೃಷ್ಟಕರ ಘಟನೆ ನಡೆಯಿತು. ಇಂದಿರಾರ ಕಿರಿಮಗ ಸಂಜಯ 1980ರ ಜೂನ್ 23 ರಂದು ಹೆಲಿಕಾಪ್ಟರ್ ದುರಂತದಲ್ಲಿ ಮೃತಪಟ್ಟರು. ತುರ್ತು ಪರಿಸ್ಥಿತಿ ದಿನಗಳಲ್ಲಿ ಆತ ಕುಖ್ಯಾತಿಗಳಿಸಿದ್ದ ಅಧಿಕಾರವನ್ನು ಆತನಿಗೆ ವಹಿಸಿಕೊಡುವ ಉದ್ದೇಶದಿಂದ ಇಂದಿರಾಗಾಂಧಿ ಅವನನ್ನು ಬೆಳೆಸಿದ್ದರು. ಆತ ದುರಂತ ಸಾವಿಗೀಡಾದ್ದರಿಂದ ಇಂದಿರಾ ತನ್ನ ಹಿರಿಮಗ ರಾಜೀವನನ್ನು ರಂಗಕ್ಕೆ ತಂದರು. ಪೈಲಟ್ ಆಗಿದ್ದ ರಾಜೀವ್ ಅಮೇಥಿ ಕ್ಷೇತ್ರದಿಂದ ಗೆದ್ದು ಲೋಕಸಭೆ ಸದಸ್ಯರಾದರು.

ಪುರಸಭೆ ಚುನಾವಣೆಗಳು

ಅಧಿಕಾರ ಜನತೆಗೆ ತಲುಪುವಂತಾಗಲು ನಾವು ಪ್ರಜ್ಞಾಪೂರ್ವಕ ಪ್ರಯತ್ನ ನಡೆಸಿದೆವು. ಅದರ ಫಲವೇ ಪುರಸಭೆ ಚುನಾವಣೆಗಳು 1978ರಲ್ಲಿ ಒಂದು ಹೊಸ ಕಾನೂನನ್ನು ಮಾಡಿ ಪಂಚಾಯತಿಗಳ ಅಧಿಕಾರವನ್ನು ಹಲವು ಪಟ್ಟು ಹೆಚ್ಚಿಸಲಾಯಿತು. ಕಾಂಗ್ರೆಸ್ ಆಡಳಿತ ಪೌರಸಂಸ್ಥೆಗಳಲ್ಲಿ ಚುನಾಯಿತ ಸದಸ್ಯರನ್ನು ತೆಗೆದುಹಾಕಿ ಆಡಳಿತಗಾರರನ್ನು ನೇಮಿಸಿತ್ತು. ನಾವು ಅಧಿಕಾರಕ್ಕೆ ಬಂದ ಕೆಲವೇ ದಿನಗಳಲ್ಲಿ, 1977ರ ಜುಲೈ 24 ರಂದು 39 ಪುರಸಭೆ ಮಂಡಳಿಗಳ ಅಧಿಕಾರವನ್ನು ಚುನಾಯಿತ ಪ್ರತಿನಿಧಿಗಳ ಕೈಗೆ ಮರಳಿಕೊಟ್ಟೆವು.

18 ವರ್ಷದವರಿಂದ ಮತದಾನ

89 ಪುರಸಭೆಗಳ ಪೈಕಿ 86ಕ್ಕೆ 1981ರ ಮೇ 31 ರಂದು ಚುನಾವಣೆ ನಡೆಯಿತು. ದೇಶದಲ್ಲಿ ಅದೇ ಮೊದಲ ಬಾರಿಗೆ 18 ವರ್ಷದವರು ಮತ ಚಲಾಯಿಸಿದ ಚುನಾವಣೆ ಇದೆಂಬ ಹೆಗ್ಗಳಿಕೆಯಿದೆ. ಈ ವಿಷಯದಲ್ಲಿ ಕಾಂಗ್ರೆಸ್ ಪಕ್ಷ ಸುಪ್ರಿಂಕೋರ್ಟಿಗೆ ಹೋಗಿ ಸೋಲನುಭವಿಸಿತು. ಪುರಸಭೆ ಚುನಾವಣೆಗಳಲ್ಲಿ ಸೋಲಾಗುವುದನ್ನು ಮನವರಿಕೆ ಮಾಡಿಕೊಂಡ ಕಾಂಗ್ರೆಸ್, ಚುನಾವಣೆಯನ್ನೇ ಬಹಿಷ್ಕರಿಸುವ ಬೆದರಿಕೆಯೊಡ್ಡಲು ಯತ್ನಿಸಿತು. ಆದರೆ ಅದರಿಂದ ಚುನಾವಣೆ ಪ್ರಕ್ರಿಯೆ ಮೇಲೆ ಯಾವುದೇ ಪರಿಣಾಮ ಉಂಟಾಗಲಿಲ್ಲ. ಅನೇಕ ಕಾಂಗ್ರೆಸ್ ಬೆಂಬಲಿಗರು 'ಸ್ವತಂತ್ರ' ಅಭ್ಯರ್ಥಿಗಳಾಗಿ ಸ್ಪರ್ಧಿಸಿದರೂ ಅವರು ಸೋಲುಂಡರು. 68ಕ್ಕೂ ಹೆಚ್ಚು ಪುರಸಭೆಗಳಲ್ಲಿ ಎಡರಂಗ ಜಯಭೇರಿ ಬಾರಿಸಿತು.

11ನೇ ಮಹಾಧಿವೇಶನ

ಸರ್ವಾಧಿಕಾರಿ ಶಕ್ತಿಗಳು ಬೆಳೆಯುತ್ತಿರುವ ಪ್ರವೃತ್ತಿಯ ಹಿನ್ನೆಲೆಯಲ್ಲಿ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳನ್ನು ಒಗ್ಗೂಡಿಸುವುದು ತುಂಬಾ ಮುಖ್ಯವಾಗಿತ್ತು. ಆದರೆ ಕಾಂಗ್ರೆಸೇತರ ಪಕ್ಷಗಳಲ್ಲಿನ ಅಸ್ತವ್ಯಸ್ತತೆಯಿಂದಾಗಿ ಇದು ಅಷ್ಟು ಸುಲಭದ ಕೆಲಸವಾಗಿರಲಿಲ್ಲ.

ಇಂಥ ರಾಜಕೀಯ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಸಿಪಿಐ(ಎಂ)ನ 11ನೇ ಮಹಾಧಿವೇಶನ 1982ರ ಜನವರಿ 26 ರಿಂದ 31ರವರೆಗೆ ವಿಜಯವಾಡದಲ್ಲಿ ನಡೆಯಿತು. ಇದಕ್ಕೆ ಪೂರ್ವಭಾವಿಯಾಗಿ ರಾಜ್ಯ ಘಟಕಗಳ ಸಭೆಗಳು ನಡೆದವು. ಪಶ್ಚಿಮ ಬಂಗಾಳ ಘಟಕದ 14ನೇ ರಾಜ್ಯ ಸಮ್ಮೇಳನ ಹಾಗೂ ಬೃಹತ್ ರ್‍ಯಾಲಿಯೂ ನಡೆಯಿತು.

ವಿಜಯವಾಡ ಮಹಾದಿವೇಶನ ನನಗೆ ಪಕ್ಷದ ಆರನೇ ಮಹಾಧಿವೇಶನವನ್ನು ನೆನಪಿಸುತ್ತದೆ. 1961ರಲ್ಲಿ 6ನೇ ಮಹಾಧಿವೇಶನ ವಿಜಯವಾಡದಲ್ಲಿ ನಡೆದಿತ್ತು. ಅದು ಅವಿಭಾಜಿತ ಕಮ್ಯುನಿಸ್ಟ್ ಪಕ್ಷದ ಕೊನೆಯ ಮಹಾಧಿವೇಶನ.

ಸರ್ವಾಧಿಕಾರದ ವಿರುದ್ಧ ಹೋರಾಡುವುದು ಅಗತ್ಯ ಎಂದು ವಿಜಯವಾಡ ಮಹಾದಿವೇಶನ ಒತ್ತಿ ಹೇಳಿತು. ರಾಜಕೀಯ ಗೊತ್ತುವಳಿಯ ಅಂಶಗಳು ಅದನ್ನು ಪ್ರತಿಬಿಂಬಿಸುತ್ತದೆ. ಮುಷ್ಕರ ಮುರಿಯಲು ಕಾಂಗ್ರೆಸ್ ಪಕ್ಷ ಭಾರೀ ಪ್ರಯತ್ನ ನಡೆಸಿದರೂ, ಪತ್ರಿಕೆಗಳು ಹಾಗೂ ಇತರ ಮಾಧ್ಯಮ ಪ್ರತಿಕೂಲ ಪ್ರಚಾರ ನಡೆಸಿದರೂ ಜನವರಿ 19ರ ಕೈಗಾರಿಕಾ ಮುಷ್ಕರವನ್ನು ಯಶಸ್ವಿಗೊಳಿಸಿದ್ದಕ್ಕೆ ಪಕ್ಷವು ಜನತೆಯನ್ನು ಅಭಿನಂದಿಸಿತು.

ಮಾರ್ಚ್ 15ರೊಳಗೆ ಬಂಗಾಳದಲ್ಲಿ ಚುನಾವಣೆ ನಡೆಯಬೇಕೆಂದು ಕೂಡ ಮಹಾಧಿವೇಶನ ಸಲಹೆ ಮಾಡಿತು. ಕಾಂಗ್ರೆಸ್ ಪಕ್ಷ ಮುಳುಗುವ ಹಡಗಾಗಿತ್ತು. ಚುನಾವಣಾ ಆಯೋಗ ಕೂಡ ಸ್ಪಷ್ಟ ನಿರ್ದೇಶನಗಳನ್ನು ನೀಡುವಲ್ಲಿ ವಿಫಲವಾಯಿತು. ಕರಡು ರಾಜಕೀಯ ಗೊತ್ತುವಳಿಯನ್ನು ಮಂಡಿಸಿದ ಕಾಮ್ರೇಡ್ ಬಿ.ಟಿ ರಣದಿವೆ ಸರ್ವಾಧಿಕಾರದ ವಿರುದ್ಧ ಹೋರಾಟ ನಡೆಸುವಂತೆ ಬಲವಾದ ಮನವಿ ಮಾಡಿದರು. ಈ ಮಹಾಧಿವೇಶನದಲ್ಲಿ ಒಟ್ಟು 602 ಪ್ರತಿನಿಧಿಗಳು ಭಾಗವಹಿಸಿದ್ದರು. ಕಾಮ್ರೇಡ್ ಪಿ. ಸುಂದರಯ್ಯ ಸ್ವಾಗತ ಭಾಷಣ ಮಾಡಿದರು.

ಮಹಾಧಿವೇಶನದಲ್ಲಿ ಪಾಲ್ಗೊಳ್ಳಲು ವಿಜಯವಾಡಕ್ಕೆ ಬಂದಿದ್ದ ಕೇಂದ್ರ ಸಮಿತಿ ಸದಸ್ಯ ಹಾಗೂ ದೆಹಲಿ ರಾಜ್ಯ ಸಮಿತಿ ಕಾರ್ಯದರ್ಶಿ ಕಾಂ। ಮೇಜರ್ ಜೈಪಾಲ್ ಸಿಂಗ್ ಅಧಿವೇಶನ ಆರಂಭದ ಮುನ್ನ ದಿನ ಹೃದಯಾಘಾತದಿಂದ ನಿಧನರಾದರು. ಸೋವಿಯತ್ ಒಕ್ಕೂಟ ಕಮ್ಯುನಿಸ್ಟ್ ಪಕ್ಷದ ಪಾಲಿಟ್‌ಬ್ಯೂರೊ ಸದಸ್ಯ ಮಿಖಾಯಿಲ್ ಸುಶೋಲೊವ್ ಕೂಡ ನಿಧನರಾದರು. ಅವರು ಸೋವಿಯತ್ ನಿಯೋಗದ ಮುಖ್ಯಸ್ಥರಾಗಿ ನಮ್ಮ 1961ರ ಮಹಾಧಿವೇಶನದಲ್ಲಿ ಪಾಲ್ಗೊಂಡಿದ್ದರು.

ಹೊಸ ಕೇಂದ್ರ ಸಮಿತಿಗೆ 42 ಪ್ರತಿನಿಧಿಗಳು ಆಯ್ಕೆಯಾದರು. ಅದು ಒಂಬತ್ತು ಸದಸ್ಯರ ಹೊಸ ಪಾಲಿಟ್ ಬ್ಯೂರೋವನ್ನು ಆರಿಸಿತು. ಕಾಮ್ರೇಡ್ ಇಎಂಎಸ್ ನಂಬೂದರಿಪಾಡ್ ಪ್ರಧಾನ ಕಾರ್ಯದರ್ಶಿಯಾಗಿ ಮುಂದುವರಿದರು. ಕೃಷ್ಣಾ ನದಿ ದಂಡೆ ಮೇಲೆ ಬೃಹತ್ ಸಾರ್ವಜನಿಕ ರ್‍ಯಾಲಿ ನಡೆದು ಮಹಾಧಿವೇಶನ ಯುಕ್ತವಾಗಿ ಮುಕ್ತಯಗೊಂಡಿತು.

ಎರಡನೇ ಎಡರಂಗ ಸರಕಾರ

1982 ಮೇ 19 ರಂದು ಪಶ್ಚಿಮ ಬಂಗಾಳ ವಿಧಾನಸಭೆಗೆ ಚುನಾವಣೆ ನಡೆಯಿತು. ಇಂದಿರಾಗಾಂಧಿ ಇನ್ನು ಸರ್ವಾಧಿಕಾರಿ ಪ್ರವೃತ್ತಿಯ ಗುಂಗಿನಲ್ಲೇ ಇದ್ದರು. ದೇಶದಲ್ಲಿ ಪ್ರತ್ಯೇಕತಾವಾದಿ ಪ್ರವೃತ್ತಿ ತಲೆಯೆತ್ತುತ್ತಿತ್ತು. ಜನತಾಪಕ್ಷ ವಿಭಜನೆಗೊಂಡಿತು. ಹಿಂದಿನ ಜನಸಂಘ ಅಟಲ್ ಬಿಹಾರಿ ವಾಜಪೇಯಿ ನೇತೃತ್ವದಲ್ಲಿ ಭಾರತೀಯ ಜನತಾ ಪಕ್ಷ ಎಂಬ ಹೊಸ ಹೆಸರಿನಲ್ಲಿ ಮರುಹುಟ್ಟು ಪಡೆಯಿತು.

ಇಂಥ ಸನ್ನಿವೇಶದಲ್ಲಿ ಎಡರಂಗ ಸರಕಾರ ತನ್ನ ಕಾರ್ಯಗಳನ್ನು ಮುಂದುವರಿಸಬೇಕಿತ್ತು. ಜನರು ನಮ್ಮ ಕಾರ್ಯನಿರ್ವಹಣೆಯನ್ನು ನೋಡಿದ್ದರು ಹಾಗೂ ಅಂದಾಜು ಮಾಡಿದ್ದರು ನಾವು ಗಳಿಸಿದ ಮತಗಳಲ್ಲಿ ಅದು ಪ್ರತಿಬಿಂಬಿತವಾಗಿತ್ತು. ಹಿಂದಿನ 36 ಅಂಶ ಕಾರ್ಯಕ್ರಮದ ವೈಫಲ್ಯ ಹಾಗೂ ಯಶಸ್ಸುಗಳಿಗೆ ಕಾರಣಗಳನ್ನು ಪರಿಶೀಲಿಸಿದ ನಾವು ಈಗ ನಮ್ಮ ಪ್ರಣಾಳಿಕೆಯಲ್ಲಿ 34 ಅಂಶ ಕಾರ್ಯಕ್ರಮವನ್ನು ಮಂಡಿಸಿದೆವು.

ಗುಡ್ಡಗಾಡು ಪ್ರದೇಶಗಳಿಗೆ ಹೆಚ್ಚಿನ ಸ್ವಾಯತ್ತತೆ ನೀಡುವುದು ಹಾಗೂ ಈ ಪ್ರದೇಶಗಳ ಆಡಳಿತಕ್ಕೆ ಪ್ರತ್ಯೇಕ ಸಂಸ್ಥೆಯನ್ನು ಸ್ಥಾಪಿಸುವುದು ಈ ಎರಡು ಆಶಯಗಳು ಪ್ರಣಾಳಿಕೆಯಲ್ಲಿ ಮುಖ್ಯವಾಗಿದ್ದವು. ಕೇಂದ್ರ ರಾಜ್ಯ ಸಂಬಂಧಗಳ ಮರುಪರಿಶೀಲನೆಯ ಅಗತ್ಯವನ್ನು ಪ್ರತಿಪಾದಿಸುವ ಪ್ರಧಾನ ಅಂಶವನ್ನುಳ್ಳ 18 ಅಂಶಗಳ ಬೇಡಿಕೆ ಪಟ್ಟಿಯೊಂದನ್ನು ಕೂಡ ನಾವು ಕೇಂದ್ರ ಸರಕಾರದ ಮುಂದೆ ಇಟ್ಟೆವು.

1977ರಲ್ಲಿ ಎಡರಂಗದಲ್ಲಿ ಆರು ಪಕ್ಷಗಳಿದ್ದವು ಈ ಬಾರಿ ಅಂದರೆ 1982ರಲ್ಲಿ ಒಂಬತ್ತು ಪಕ್ಷಗಳ ಕೂಟವಾಗಿ ಎಡರಂಗ ಸ್ಪರ್ಧೆಕಣಕ್ಕೆ ಇಳಿಯಿತು. ಸಿಪಿಐ(ಎಂ) ಆರ್.ಎಸ್.ಪಿ., ಫಾರ್ವರ್ಡ್‌ಬ್ಲಾಕ್, ಡಬ್ಲ್ಯೂಬಿಎಸ್‌ಪಿ, ಸಿಪಿಐ, ಡಿಎಸ್‌ಪಿ, ಆರ್‌ಸಿಪಿಐ, ಫಾರ್ವರ್ಡ್ ಬ್ಲಾಕ್ ಮಾರ್ಕ್ಸಿಸ್ಟ್ ಹಾಗೂ ವಿಪ್ಲವ ಬಾಂಗ್ಲಾಕಾಂಗ್ರೆಸ್ ಎಡರಂಗದ ಅಂಗ ಪಕ್ಷಗಳಾಗಿದ್ದವು.

ಬಿಜೆಪಿಗೆ ಠೇವಣಿ ನಷ್ಟ

ಒಟ್ಟು 294 ಸ್ಥಾನಗಳಲ್ಲಿ ನಾವು 238 ಸ್ಥಾನಗಳಲ್ಲಿ ಗೆದ್ದೆವು. ಇದು ಕಳೆದ ಸಾರಿಗಿಂತ ಏಳು ಹೆಚ್ಚು ಸ್ಥಾನಗಳಾಗಿದ್ದವು. ನಮ್ಮ ವಿರೋಧಿಗಳಿಗೆ ಕೇವಲ 56 ಸ್ಥಾನಗಳು ದಕ್ಕಿದವು. ಅದರಲ್ಲಿ ಕಾಂಗ್ರೆಸ್ ಪಾಲು 49 ಕಾಂಗ್ರೆಸ್(ಎಸ್) ನಾಲ್ಕು ಗುರ್ಖಾಲೀಗ್ ಒಂದು ಹಾಗೂ ಎಸ್‌ಯುಸಿಐ ಎರಡು ಸ್ಥಾನಗಳಲ್ಲಿ ಗೆದ್ದವು. 93 ಕ್ಷೇತ್ರಗಳಲ್ಲಿ ಸ್ಪರ್ದಿಸಿದ್ದ ಜನಾತಾ ಪಕ್ಷ ಖಾತೆಯನ್ನೇ ತೆರೆಯಲಿಲ್ಲ ಬಿಜೆಪಿ 54 ರಲ್ಲಿ ಸ್ಪರ್ಧಿಸಿತ್ತು. ಒಂದರಲ್ಲಿ ಬಿಟ್ಟು ಉಳಿದೆಲ್ಲಾ ಕಡೆ ಅದು ಠೇವಣಿ ಕಳೆದುಕೊಂಡಿತು.

ಎಡರಂಗದ ಯಶಸ್ಸಿನ ಪಟ್ಟಿ ಹೀಗಿದೆ. ಸಿಪಿಐ(ಎಂ) 174, ಫಾರ್ವರ್ಡ್‌ಬ್ಲಾರ್ಕ್ 28, ಆರ್‌ಎಸ್‌ಪಿ-19, ಸಿಪಿಐ-07, ಡಬ್ಲ್ಯೂಬಿಎಸ್ಪಿ-03, ಡಿಎಸ್‌ಪಿ-03, ಆರ್‌ಸಿಪಿಐ-2, ಮತ್ತು ಫಾರ್ವರ್ಡ್ ಬ್ಲಾಕ್ ಮಾರ್ಕ್ಸಿಸ್ಟ್-02.

ಚಲಾವಣೆಯಾದ ಮತಗಳಲ್ಲಿ ಎಡರಂಗ ಶೇಕಡ 52.6 ಮತ ಗಳಿಸಿತು. ಇದು ಕಳೆದ ಸಲಕ್ಕಿಂತ ಶೇ. 6.3 ಹೆಚ್ಚು. ಎಡರಂಗ ಮತ್ತು ಕಾಂಗ್ರೆಸ್ ನಡುವೆ ಜನರ ಧ್ರುವೀಕರಣ ಆಗಿದ್ದು ಫಲಿತಾಂಶದಿಂದ ಸ್ಪಷ್ಟವಾಗಿತ್ತು. ನಾನು ಪುನಃ ಸತ್ಗಾಚಿಯಾ ಕ್ಷೇತ್ರದಿಂದ ಗೆದ್ದು ಬಂದೆ.

ಮೇ 26 ರಂದು ಎಡರಂಗ ಸರಕಾರ ಎರಡನೇ ಬಾರಿಗೆ ಅಧಿಕಾರ ಸ್ವೀಕರಿಸಿತು. ಆಗ ಬಿ.ಡಿ.ಪಾಂಡೆ ರಾಜ್ಯಪಾಲರಾಗಿದ್ದರು. ಹಿಂದಿನ ಸಂಪುಟದ ಇಬ್ಬರು ಪ್ರಮುಖ ಸದಸ್ಯರು ಈ ಬಾರಿ ಸಂಪುಟದಲ್ಲಿ ಇರಲಿಲ್ಲ. ಅವರೆಂದರೆ ಡಾ। ಅಶೋಕ ಮಿತ್ರ ಮತ್ತು ಬುದ್ಧದೇವ ಭಟ್ಟಾಚಾರ್ಯ. ಡಾ. ಮಿತ್ರ ರಾಸ್ ಬಿಹಾರಿ ಕ್ಷೇತ್ರದಲ್ಲಿ ಹಾಗೂ ಭಟ್ಟಾಚಾರ್ಯ ಕಾಶಿಪುರ ಕ್ಷೇತ್ರದಲ್ಲಿ ಸೋತರು.

ಡಾ. ಮಿತ್ರ ಆನಂತರ ಉಪಚುನಾವಣೆಯಲ್ಲಿ ಗೆದ್ದು ಸಂಪುಟ ಸೇರಿದರು. ಆದರೆ ಭಟ್ಟಾಚಾರ್ಯ ಪಕ್ಷದ ಕೆಲಸಕ್ಕೆ ಗಮನ ಕೊಟ್ಟಿದ್ದು ಅವರು 1987ರಲ್ಲಿ ಮಂತ್ರಿಯಾಗಿ ಮರಳಿದರು.

ಈ ಬಾರಿ ನಾವು ದೊಡ್ಡ ಸವಾಲನ್ನು ಎದುರಿಸಿದೆವು. ಹೆಚ್ಚು ಹೆಚ್ಚು ಹತಾಶೆಗೆ ಒಳಗಾದ ಇಂದಿರಾಗಾಂಧಿ ಪಕ್ಷಪಾತದ ತಂತ್ರವನ್ನು ಅಳವಡಿಸಿಕೊಂಡರು. ಆದರೆ ನಾವು ಜನತೆಯ ಬಳಿ ಹೋದೆವು. ಆತ್ಮ ತೃಪ್ತಿಗೆ ಅವಕಾಶ ಕೊಡಲಿಲ್ಲ. ರಾಷ್ಟ್ರಮಟ್ಟದಲ್ಲಿ ಎಲ್ಲಾ ಕಾಂಗ್ರೆಸೇತರ ಶಕ್ತಿಗಳನ್ನು ಒಗ್ಗೂಡಿಸುವ ಯತ್ನದಲ್ಲಿ ನಾವು ಮುಂಚೂಣಿಯಲ್ಲಿದ್ದೆವು.

ಎರಡನೇ ಬಾರಿ ಅಧಿಕಾರಕ್ಕೆ ಬಂದ ಮೂರೇ ತಿಂಗಳಲ್ಲಿ ಭೀಕರ ಬರಗಾಲ ಎದುರಾಯಿತು. ಪ್ರಕೃತಿಯೇ ನಮ್ಮ ಪರೀಕ್ಷೆಗೆ ಮುಂದಾದಂತೆ ಇತ್ತು. 1977ರಲ್ಲಿ ಮಹಾಪೂರ ಬಂದಿತ್ತು. ಈ ಬಾರಿ ಕ್ಷಾಮ! ಎಂದಿನಂತೆ ಕೀಳುಮಟ್ಟದ ರಾಜಕೀಯಕ್ಕೆ ಕಾಂಗ್ರೆಸ್ ಇಳಿಯಿತು. ಆದರೆ ಆ ವೇಳೆಗೆ ಬಿಕ್ಕಟ್ಟು ನಿಭಾಯಿಸಲು ನಾವು ಸಮರ್ಥರಾಗಿದ್ದೆವು. ಪಂಚಾಯತಿಗಳನ್ನು ಸಕ್ರಿಯಗೊಳಿಸಿದೆವು. ಕೇಂದ್ರ ಸರಕಾರ ಮಾಡುತ್ತಿದ್ದ ಪಕ್ಷಪಾತದ ಕ್ರಮವನ್ನು ನಮ್ಮದೇ ಪ್ರಯತ್ನಗಳ ಮೂಲಕ ಜನರಿಗೆ ನೆರವಾಗಿ ಗಮನಕ್ಕೆ ತಂದೆವು.

(ಮುಂದಿನವಾರಕ್ಕೆ)


Printed & Published by Communist Party ...

ಕರುಣಾನಿಧಿ ಭ್ರಷ್ಟಾಚಾರ ಮತ್ತು ಬಂಧನ

ತಮಿಳುನಾಡಿನ ಮಾಜಿ ಮುಖ್ಯಮಂತ್ರಿ ಎಂ.ಕರುಣಾನಿಧಿಯವರೀಗ ಬಂಧನದಲ್ಲಿದ್ದಾರೆ.ಹಾಗೆಯೇ ಅವರ ಸಂಪುಟದ ಸದಸ್ಯರಾಗಿದ್ದ ಕೆ.ಇ.ಸಿ. ಮಣಿ, ಮಾಜಿ ಮುಖ್ಯ ಕಾರ್ಯದರ್ಶಿ ಕೆ.ಎ.ನಂಬ್ಯಾರ್‌ರವರನ್ನು ಬಂಧಿಸಿ ವಿವಿಧ ಜೈಲುಗಳಿಗೆ ರವಾನಿಸಲಾಗಿದೆ. ಕರುಣಾನಿಧಿಯವರ ಪುತ್ರ, ಚೆನ್ನೈನ ಮೇಯರ್ ಸ್ಟಾಲಿನ್ ಶರಣಾಗಿದ್ದಾರೆ. ಅವರನ್ನು ವೆಲ್ಲೂರಿನ ಜೈಲಿಗೆ ಕಳಿಸಲಾಗಿದೆ. ಕರುಣಾನಿಧಿಯವರಿಗೆ ಒಂದು ವಾರದ ಕಾಲ ನ್ಯಾಯಾಂಗ ಕಸ್ಟಡಿಯಲ್ಲಿಡಲು ನ್ಯಾಯಾಧೀಶರು ಆದೇಶಿಸಿದ್ದಾರೆ.

ಫ್ಲೈಓವರ್ ಬ್ರಿಡ್ಜ್‌ನ ನಿರ್ಮಾಣದಲ್ಲಿ ಭಾರಿ ಹಗರಣ ನಡೆದಿದೆ ಎನ್ನಲಾದ ಭ್ರಷ್ಟಾಚಾರದ ಮೊಕದ್ದಮೆಯಲ್ಲಿ ಇವರನ್ನು ಬಂಧಿಸಲಾಗಿದೆ. ಜೂನ್ 30 ರ ಬೆಳಗಿನ ಜಾವ ಸುಮಾರು 2.30 ಕ್ಕೆ ಕರುಣಾನಿಧಿಯವರ ಮನೆಗೆ ಪ್ರವೇಶಿಸಿದ ಪೋಲೀಸರು ಅವರ ಪ್ರತಿರೋಧದ ನಡುವೆ ಬಂಧಿಸಿದರು. ಈಗ ಪ್ರತಿಭಟನೆ, ಬಂದ್ ನಂತಹ ಘಟನೆಗಳು ಆರಂಭಗೊಂಡಿವೆ. ಭಾವೋದ್ರೇಕಕ್ಕೆ ಕಾರಣವಾಗಿವೆ.

ಇದು ಜಾಗತೀಕರಣದ ಯುಗ. ಭವ್ಯ ಭಾರತವನ್ನು ನಿರ್ಮಿಸಲು, ಕೈಗಾರಿಕೋದ್ಯಮ ಬೆಳೆಸಲು ಮೂಲಭೂತ ಸೌಕರ್ಯಗಳು, ಸುಗಮ ಸಂಚಾರಕ್ಕಾಗಿ ರಸ್ತೆ - ಮೇಲು-ಕೆಳ ಸೇತುವೆಗಳು ಕೂಡಲೇ ನಿರ್ಮಾಣಗೊಂಡು ಸಜ್ಜಾಗಬೇಕಲ್ಲವೇ? ಇವನ್ನೆಲ್ಲಾ ಆಧುನೀಕರಿಸಿ, ವಾಶಿಂಗ್ಟನ್, ಸಿಂಗಾಪೂರ್ ಗಳಿಗೆ ಸಮನಾಗಿ ಮಿಂಚಲು ಜುಟ್ಟಿಗೆ ಮಲ್ಲಿಗೆ ಮುಡಿದು ಶೃಂಗಾರಗೊಳ್ಳಬೇಕಲ್ಲ! ಹಣ ನಮ್ಮಲ್ಲಿ ಇಲ್ಲದಿದ್ದರೇನಂತೆ! ಇದಕ್ಕಾಗಿ ಶರತ್ತು ವಿಧಿಸಿ





ಸಾವಿರಾರು ಕೋಟಿಗಳ ಸಾಲ ನೀಡಲು ಸಿದ್ಧವಾಗಿವೆ ವಿಶ್ವಬ್ಯಾಂಕ್, ಐಎಂಎಫ್‌ಗಳು. ಈ ಉದಾರೀಕರಣ ಸಾಲದ ಸವಾರಿಯಲ್ಲಿ ಎದ್ದೇಳುವ ಪ್ರತಿ ಕಟ್ಟಡ,ರಸ್ತೆ, ಸೇತುವೆ ಇತ್ಯಾದಿಗಳ ನಿರ್ಮಾಣದ 'ಸೇವಾಶುಲ್ಕ'ವೆಂದು ಸಾವಿರಾರು ಕೋಟಿ ಹರಿದಾಡುತ್ತಿರುವಾಗ ಅದರಲ್ಲಿ ಕೊಂಚ ಪಾಲು ಆಳುವ ರಾಜಕಾರಣಿಗಳಿಗೆ, ಅಧಿಕಾರಿಗಳಿಗೆ, ಕಂಟ್ರಾಕ್ಟರ್‌ಗಳಿಗೆ, ಕ್ರಿಮಿನಲ್‌ಗಳಿಗೆ ಸಿಕ್ಕದೇ ಹೋದೀತೆ? ಇವರೆಲ್ಲಾ ಸಿಕ್ಕಿದ್ದನ್ನು ದಕ್ಕಿಸಿಕೊಳ್ಳುವ, ಬಳಿದುಕೊಳ್ಳುವ ಭ್ರಷ್ಟತೆಯಲ್ಲಿ ಶಾಮೀಲಾಗಿರುವುದು ಎಲ್ಲರಿಗೂ ತಿಳಿದದ್ದೇ. ಉದಾರೀಕರಣ ಜಾರಿಯಾಗುತ್ತಿರುವಂತೆ ದೇಶದುದ್ದಗಲ ಎಷ್ಟೆಲ್ಲಾ ಹಗರಣಗಳು ಸ್ಫೋಟಗೊಂಡಿವೆ. ಇನ್ನೂ ಸ್ಫೋಟಗೊಳ್ಳಲಿವೆ. ಇದು ಜಂಟಿ-ಅಂಟುರೋಗ, ಮಹಾವ್ಯಾಧಿ.

ಭ್ರಷ್ಟಾಚಾರದ ವಿರುದ್ಧ ಏನೆಲ್ಲಾ ಮಾತನಾಡಿದರೂ, ಕರುಣಾನಿಧಿಯವರ ಆಡಳಿತದಲ್ಲಿಯೂ ಮೇಲಿನಿಂದ ಕೆಳಗಿನವರೆಗೆ ಅನೇಕ ಭ್ರಷ್ಟಾಚಾರಗಳ ಹಗರಣಗಳು ನಡೆದಿರುವ ಆರೋಪಗಳಿವೆ. ಕೆಲವು ಬಯಲಿಗೆ ಬಂದಿವೆ. ಇವುಗಳ ವಿಚಾರಣೆ ಆಗಬೇಕು. ತಪ್ಪಿತಸ್ಥರಿಗೆ ಶಿಕ್ಷೆ ಸಿಗಲೇಬೇಕು. ಇದರಲ್ಲಿ ಎರಡು ಮಾತಿಲ್ಲ. **ಸಾರ್ವಜನಿಕ ರಂಗದ ಯಾವುದೇ ರಾಜಕಾರಣಿ, ಸರ್ಕಾರದ ಅಧಿಕಾರಿಗಳು.. ಇದಕ್ಕೆ ಒಳಗಾಗಲೇಬೇಕು. ಹಿಂದಿನ ಕರುಣಾನಿಧಿ ಸರ್ಕಾರದ ಭ್ರಷ್ಟಾಚಾರದ ಪ್ರಕರಣಗಳು ಈ ವ್ಯಾಪ್ತಿಯ, ಶಿಕ್ಷೆಗೊಳಗಾಗಬೇಕಾದ ಕಾನೂನಿನ ಕ್ರಮದ ಸ್ವರೂಪದವುಗಳು.**

ಆದರೆ ಕರುಣಾನಿಧಿ, ಮತ್ತಿತರರನ್ನು ಬಂಧಿಸಿದ ರೀತಿ ಮತ್ತು ನಂತರದ ಘಟನೆಗಳು ಜನಸಾಮಾನ್ಯರನ್ನು ರೊಚ್ಚಿಗೆಬ್ಬಿಸಿವೆ. ಮೊಕದ್ದಮೆ ಜಾರಿಯಾಗಬೇಕು ನಿಜ. ಆದರೆ **ಒಬ್ಬ ಮಾಜಿ ಮುಖ್ಯಮಂತ್ರಿಯವರೊಂದಿಗೆ ಪೋಲೀಸ್ ಅಧಿಕಾರಿಗಳು ನಡೆದುಕೊಂಡ ಬಗೆ, ಅನುಸರಿಸಿದ ವಿಧಾನ ಒಪ್ಪಲಾಗದು. ಮತ್ತು ಅದು ಅಗೌರವದಿಂದ ಕೂಡಿದೆ. ಇಂತಹ ಕ್ರಮಗಳು ರಾಜಕೀಯ ಸೇಡಿನಿಂದ ಕೂಡಿರತಕ್ಕದ್ದಲ್ಲ.** ಮುಂದೆ ಕ್ರಮವಹಿಸುವಾಗ ಸರ್ಕಾರ ಎಚ್ಚರಿಕೆ ವಹಿಸಬೇಕು. ಹಾಗೆ ನಡೆಯದಂತೆ ನೋಡಿಕೊಳ್ಳಬೇಕು.

ಈ ಘಟನೆಯನ್ನೇ ಅತಿ ರಂಜಿತವಾಗಿ ಪ್ರದರ್ಶಿಸಿ, ಹುಯಿಲೆಬ್ಬಿಸಲು ಕೆಲವು ಟಿ.ವಿ.ಚಾನಲ್, ಪತ್ರಿಕೆಗಳು ತೊಡಗಿವೆ. ಆರೋಪಿಗಳು ಇಂತಹ ಸನ್ನಿವೇಶವನ್ನು ತಮ್ಮ ಪರವಾಗಿ ಬಳಸಬಹುದು. ಈ ಸಂಗತಿಯಲ್ಲೇ ಮೂಲ ಪ್ರಕರಣ ಮರೆಯಾಗಿ ಜನರಲ್ಲಿ ಗೊಂದಲ ಮೂಡಿ ಆರೋಪಿಗಳಿಗೆ ರಕ್ಷಣಾ ಕವಚವಾಗಿ ಬಳಕೆಯಾಗಬಹುದು.ಈ ಬಗ್ಗೆ ಎಚ್ಚರ, ತಾಳ್ಮೆ ಅತ್ಯಗತ್ಯ.

ಎನ್‌ಡಿಎ ಮಿತ್ರರು, ಬಿಜೆಪಿ ವಕ್ತಾರರು ಇದು 1975 ರ ತುರ್ತುಪರಿಸ್ಥಿತಿಯನ್ನು ನೆನಪಿಸುತ್ತಿದೆ ಎಂದು ಚೀರುತ್ತಿದ್ದಾರೆ. ಸರ್ಕಾರ ವಜಾಗೊಳಿಸಲು ಜನತಂತ್ರವಾದಿಗಳು ಆಗ್ರಹಿಸುತ್ತಿದ್ದಾರೆ. ಇದು ಹಾಸ್ಯಾಸ್ಪದ ಪ್ರಜಾಪ್ರಭುತ್ವವಿರೋಧಿ ನಿಲುವಾಗಿದೆ. ವೈರುಧ್ಯಗಳ ಗೂಡಾಗಿರುವ ಎನ್‌ಡಿಎ ಭಾಗಿದಾರರನ್ನು ಒಲೈಸುವುದು ಹೇಗೆ ಎಂಬುದರಲ್ಲಿ ವಾಜಪೇಯಿ ನಿರತರಾಗಿದ್ದಾರೆ.

- ಎಸ್.ವೈ.ಗುರುಶಾಂತ್

ಸಾರಾಯಿ ಲಾಬಿಗೆ ಶರಣಾದ ಗುಲ್ಬರ್ಗಾ ಜಿಲ್ಲಾಧಿಕಾರಿ

ಆಡಳಿತಾತ್ಮಕವಾಗಿ ಅತ್ಯಂತ ಗೌರವ ಸ್ಥಾನ ಹೊಂದಿರುವ ಜಿಲ್ಲಾಧಿಕಾರಿಗಳ ಹುದ್ದೆ, ಜಿಲ್ಲೆಯ ಎಲ್ಲಾ ಜನರ ಮೇಲೆ ಅತ್ಯಂತ ಪ್ರಭಾವ ಬೀರುವಂಥದ್ದು. ಈ ಹುದ್ದೆಯಲ್ಲಿದ್ದವರಿಗೆ ಗೌರವ, ಘನತೆ ಜನರಿಂದ ಲಭಿಸಿವೆ. ಇದನ್ನು ಉಪಯೋಗಿಸಿಕೊಂಡು ಆ ಅಧಿಕಾರಿ ಇಡೀ ಜಿಲ್ಲೆಯಲ್ಲಿ ನಡೆಯುವ ಕಳ್ಳ ದಂಧೆ, ವ್ಯಭಿಚಾರ, ಭಟ್ಟಿಸಾರಾಯಿ ತಯಾರಿ, ಮಟ್ಕಾ ಹಾಗೂ ಸೆಕೆಂಡ್ಸ್ ವ್ಯವಹಾರ ಮಟ್ಟ ಹಾಕುವಲ್ಲಿ ಮುಂದಾಗುತ್ತಾ, ತನ್ನ ಆಡಳಿತಾತ್ಮಕ ಅಧಿಕಾರ ಉಪಯೋಗಿಸುತ್ತಾನೆ. ಇವರು ಜಿಲ್ಲಾ ದಂಡಾಧಿಕಾರಿ ಸಹ. ಆದರೆ ಇದೇ ಹುದ್ದೆಯಲ್ಲಿದ್ದ ಕೆಲವು



ಉದ್ಘಾಟನಾ ಸಮಾರಂಭದ ಕರಪತ್ರ ಮತ್ತು ಅದರಲ್ಲಿ ಭಾಗವಹಿಸಿದ್ದ ಮಹನೀಯರುಗಳು

ಅಧಿಕಾರಿಗಳು ತಮ್ಮ ಘನತೆ ಗೌರವ ಹೊಣೆಗಳನ್ನು ಆಳುವ ಪಕ್ಷದವರೊಂದಿಗೆ ಮತ್ತು ಸಾರಾಯಿ ಗುತ್ತಿಗೆದಾರರೊಂದಿಗೆ ಕಲೆತು ಮಾರಿಕೊಳ್ಳಲು ಮುಂದಾಗುತ್ತಿರುವುದು ಅತ್ಯಂತ ಕಳವಳಕಾರಿ ಸಂಗತಿ.

ಇಂಥ ಕೆಲಸಕ್ಕೆ ಇಳಿದಿರುವವರು ಗುಲ್ಬರ್ಗಾ ಜಿಲ್ಲಾಧಿಕಾರಿಗಳಾದ ಶ್ರೀ ಲಕ್ಷ್ಮಿ ನಾರಾಯಣ ಎಂಬುವ ಐ.ಎ.ಎಸ್. ಅಧಿಕಾರಿ. ಈತ ತಾನೊಬ್ಬ ಸರಕಾರ ನೇಮಕ ಮಾಡಿದ ಅಧಿಕಾರಿ ಜನರಿಗೆ ನಿಷ್ಠನಾಗಿರಬೇಕು ಎಂಬುವುದನ್ನು ಮರೆತು ಆಳುವವರ್ಗದ ಅದರಲ್ಲಿಯೂ ಸಾರಾಯಿ ಗುತ್ತಿಗೆದಾರರಾಗಿ ಸುಪಾರಿ ಕೊಲೆಗಳಿಂದ ಕುಖ್ಯಾತರಾಗಿರುವ ಸೆಕೆಂಡ್ಸ್ ವ್ಯವಹಾರದ ಮೂಲಕವೇ ಅಕ್ರಮವಾಗಿ ಅಪಾರ ಆಸ್ತಿ ಮಾಡಿರುವವರ ಜೊತೆಗೆ ಸೇರಿರುವುದು ಅತ್ಯಂತ ಗಂಭೀರ ವಿಚಾರ.

ಅಧಿಕಾರದಲ್ಲಿರುವ ಪಕ್ಷಕ್ಕೆ ಹಾರುತ್ತಾ ತಮ್ಮ ದಂಧೆಗೆ ಧಕ್ಕೆ ಬರದಂತೆ ಜನಮನದ ಮೇಲೆ ಭಯ ಹುಟ್ಟಿಸಿದ ಸುಪಾರಿ ಕೊಲೆಗಾರರೆಂದು ಹೆಸರುವಾಸಿಯಾಗಿರುವ ಮಾಲಿಕಯ್ಯ ಗುತ್ತೇದಾರರ ಬಾರ್ ಮತ್ತು ರೆಸ್ಟೋರೆಂಟ್ 'ಕ್ರಿಸ್ಟಲ್ ಪ್ಯಾಲೇಸ್' ಉದ್ಘಾಟನೆಗೆ ಈ ಡಿ.ಸಿ.ಸಾಹೇಬರು ತಮ್ಮ ಫೋಟೋ ಕೊಟ್ಟು ಈ ಗುತ್ತೇದಾರರ ಜೊತೆಗೆ ಎಲ್ಲಾ ಪೇಪರಿನಲ್ಲಿ ಬಣ್ಣದಲ್ಲಿ ಅಚ್ಚಾಗಿಸಿದ್ದಾರೆ. ಅಷ್ಟೇ ಅಲ್ಲದೆ ಈ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿದ್ದಾರೆ.

ಹೆಂಡ ಸಾರಾಯಿ ಕುಡಿತದಿಂದ ಅಪಾರ ಜನಸಾಮಾನ್ಯರ ಬದುಕು ಹಾಳಾಗುತ್ತಿರುವಾಗ ಅದನ್ನು ನಿಗ್ರಹಿಸುವುದರ ಹೊರತು ಅದನ್ನು ಪ್ರಚಾರಗೊಳಿಸುವ ಕೆಲಸಕ್ಕೆ ಈ ಡಿ.ಸಿ. ಸಾಹೇಬರು ತಯಾರಾಗಿರುವುದು ವಿಪರ್ಯಾಸ. ಆದ್ದರಿಂದ ಭಾರತ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಜಿಲ್ಲಾ ಘಟಕ ಈಗಾಗಲೇ ಇಂಥವರ ವಿರುದ್ಧ ಕ್ರಮ ಕೈಗೊಳ್ಳುವಂತೆ ರಾಜ್ಯದ ರಾಜ್ಯಪಾಲರಿಗೆ ಪತ್ರ ಬರೆದು ಸೂಕ್ತ ಕ್ರಮ ಕೈಗೊಳ್ಳಲು ಕೇಳಿಕೊಂಡಿದೆ.

ಜನಸಮಾನ್ಯರ ಸೇವೆಗಾಗಿ, ಜನರ ಅಭಿವೃದ್ಧಿಗಾಗಿ ಕೈಗೊಳ್ಳುವ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವ ಬದಲಾಗಿ ಜನರನ್ನು ನರಕದ ಯಾತನೆಗೆ ತಳ್ಳುವಂತ ದುಶ್ಚಟಕ್ಕೆ ಅಳವಡಿಸಿಕೊಳ್ಳುವ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿರುವುದರ ವಿರುದ್ಧ ಜನಸಾಮಾನ್ಯರ ಪ್ರತಿಭಟನೆಗೆ ಮುಂದಾಗಬೇಕು ಮತ್ತು ಜನಜಾಗೃತಿಗೊಳ್ಳಬೇಕಾಗಿದೆ.

ಸಾಕ್ಷರತೆಯಲ್ಲಿ ಅತ್ಯಂತ ಹಿಂದುಳಿದ ಜಿಲ್ಲೆಯಾದ ಗುಲ್ಬರ್ಗಾ ಅದರಿಂದ ಹೊರಬರಲು ನಡೆಯುತ್ತಿರುವ ಸಾಕ್ಷರತಾ ಚಟುವಟಿಕೆ ಅದರಲ್ಲೂ 'ಚಿಣ್ಣರ ಅಂಗಳ'ದಂಥ ಕಾರ್ಯಕ್ರಮದ ಬಗ್ಗೆ ಎಳ್ಳಷ್ಟೂ ಗಮನ ಹರಿಸದ ಈ ಡಿ.ಸಿ. ಸಾಹೇಬ ಬಾರ್ ಉದ್ಘಾಟನೆಗೆ ಮುಂದಾಗಿರುವುದು ಇವರ ಜನವಿರೋಧಿ ಭಾವನೆ ತೋರಿಸುತ್ತದೆ. ಇನ್ನೊಂದೆಡೆ ರೈತಾಪಿ ಜನ ಕಳಪೆ ಗೊಬ್ಬರ, ರಸಾಯನಿಕಗಳಿಂದ ಸಾಲಕ್ಕೆ ತುತ್ತಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವಾಗ ಅದಕ್ಕೆ ಸೂಕ್ತ ಕಾರಣ ಹುಡುಕದೆ, ಪರಿಹಾರದ ಕಡೆಗೆ ಗಮನ ಹರಿಸದೆ ಇಂಥ ಕೆಲಸದಲ್ಲಿ ತೊಡಗಿರುವುದು ವಿಷಾದನೀಯ ಸಂಗತಿ.

ಸದಾ ಪರಲೋಕದ ಪಾಪಪುಣ್ಯದ ಬಗ್ಗೆ ಬೋಧನೆ ಮಾಡುತ್ತಾ ಸನ್ಮಾರ್ಗ ತೋರಿಸುವ ಸ್ವಾಮಿಗಳು ಈ ಬಾರ್ ಉದ್ಘಾಟನೆಯಲ್ಲಿ ಹಾಜರಿದ್ದದ್ದು ಅವಮಾನಕಾರಿಯಾಗಿದೆ. ಹಾಗೂ ಅಧಿಕಾರಿಗಳು, ಸ್ವಾಮಿಗಳು, ಗುತ್ತೇದಾರರು ಒಂದೆಡೆ ಸೇರಿದ್ದು ನಿಜ ಸ್ಥಿತಿಯ ಚಿತ್ರಣವಾಗಿದೆ. ಇನ್ನು ತಡಮಾಡದೆ ಇಂತಹ ಅಧಿಕಾರಿಗಳ ಮೇಲೆ ಸರ್ಕಾರ ಕ್ರಮವಹಿಸಿ ಕಡಿವಾಣ ಹಾಕಬೇಕು.

- ವರದಿಗಾರ

ಪೊಲೀಸ್ ಠಾಣೆಗೆ ದೂರು ಕೊಡಲು ಹೋದರೆ ಇಲ್ಲಿಯ ಪೋಲೀಸರು ಅನ್ಯಾಯಕ್ಕೊಳಗಾದವನ ಮೇಲೆ ದೈಹಿಕ ಹಲ್ಲೆ ನಡೆಸುವುದು, ದುಡ್ಡು ಕೀಳುವುದು ಮಾಮೂಲಾಗಿದೆ. ಈ ಪೋಲೀಸರ ಬಾಯಿಂದ ಹೊರಬೀಳುವ ಮಾತುಗಳು ಕಟ್ಟಾ ಪೋಲಿಗಳದೇ ಆಗಿದೆ.

ವಿರಾಜಪೇಟೆ

ಇದು ಪೋಲೀಸ್ ಠಾಣೆಯೋ ಅಥವಾ ಗೂಂಡಾಗಳ ಗೂಡೋ?

ಕೊಡಗು ಜಿಲ್ಲೆಯ ವೀರಾಜಪೇಟೆ ತಾಲೂಕು ಸ್ವತಃ ಯೋಜನೆ ಸಚಿವೆ ಸುಮಾ ವಸಂತ್‌ರವರ ಊರು. ಕೊಡಗು ಜಿಲ್ಲಾ ಪಂಚಾಯ್ತಿಗೆ ಅಧ್ಯಕ್ಷರು ಕೂಡ ಚಂದ್ರಕಲಾ ಎಂಬ ಮಹಿಳೆ. ಕಳೆದ ತಿಂಗಳವರೆಗೆ ಎಂ.ವಿ.ಜಯಂತಿ ಎಂಬ ಭ್ರಷ್ಟ ಜಿಲ್ಲಾಧಿಕಾರಿಯೊಬ್ಬಳಿದ್ದಳು. ಜಿಲ್ಲೆಯ ಬಹುತೇಕ ಕಡೆ ಮಹಿಳೆಯರದೇ ಉಸ್ತುವಾರಿ. ಆದರೂ ಇಲ್ಲಿಯ ಸಾಮಾನ್ಯ ಮಹಿಳೆಯರಿಗೆ ಮಾತ್ರ ನ್ಯಾಯ ದೊರಕುತ್ತಿಲ್ಲ. ಅನ್ಯಾಯ, ದೌರ್ಜನ್ಯಕ್ಕೆ ಒಳಗಾದ ಮಹಿಳೆಯರ ಕೂಗು ಕೇಳುವವರು, ಕಣ್ಣೀರು ಒರೆಸುವವರು ಆಳುವ ರಾಜಕಾರಣಿಗಳಲ್ಲಿ, ಆಡಳಿತಾಧಿಕಾರಿಗಳಲ್ಲಿ ಯಾರೂ ಇಲ್ಲ.

ವೀರಾಜಪೇಟೆ ತಾಲೂಕಿನ ಬೇಟೋಳಿ ಗ್ರಾಮ ಪಂಚಾಯ್ತಿಗೆ ಸೇರಿದ ಪೆರುಂಬಾಡಿ ಎಂಬ ಪ್ರದೇಶದಲ್ಲಿ ಹಲವಾರು ನಿರ್ಗತಿಕ ಬಡಕೂಲಿ ಕಾರ್ಮಿಕರೇ ವಾಸವಾಗಿರುವ ಪ್ರದೇಶವಾಗಿದ್ದು, ಇಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಅಲ್ಪಸಂಖ್ಯಾತವರ್ಗವಾದ ಮುಸ್ಲಿಮರಿದ್ದಾರೆ.

ಕಳೆದ ಗ್ರಾಮ ಪಂಚಾಯ್ತಿ ಚುನಾವಣೆಯಲ್ಲಿ ಇಲ್ಲಿಯ ಕೆಲವು ಬಿಜೆಪಿ ಮಂದಿಗಳು ಪೌರ ಸಮಿತಿ ಎಂಬ ಹೆಸರಿನಲ್ಲಿ ಒಂದು ಸಮಿತಿಯನ್ನು ಸ್ಥಾಪಿಸಿ ಆ ಮೂಲಕ ಕೆಲವು ಬಿಜೆಪಿ ಹಾಗೂ ಆರ್‌ಎಸ್‌ಎಸ್‌ನ ಮುಖಂಡರುಗಳು ಅಧಿಕಾರಕ್ಕೆ ಬಂದಿದ್ದಾರೆ. ಬೇಟೋಳಿ ಗ್ರಾಮ ಪಂಚಾಯ್ತಿಯ ಉಪಾಧ್ಯಕ್ಷರಾಗಿ ವೀರಾಜಪೇಟೆ ನಗರದಲ್ಲಿ ಎಲೆಕ್ಟ್ರಿಕಲ್ಸ್ ವ್ಯಾಪಾರ ಮಾಡುತ್ತಿರುವ ಗಣೇಶ್ ಎಂಬುವರು ಆಯ್ಕೆಯಾದರು. ಈ ವ್ಯಕ್ತಿ ಬೇಟೋಳಿ ಗ್ರಾಮ ಪಂಚಾಯ್ತಿಯ ಉಪಾಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ನಂತರ ಈ ಪ್ರದೇಶದ ಜನರಿಗೆ ಗ್ರಹಚಾರ ಪ್ರಾರಂಭವಾಯಿತು. ಗಣೇಶ್ ಗ್ರಾಮ ಪಂಚಾಯ್ತಿ ಉಪಾಧ್ಯಕ್ಷರಾಗಿ ಘನ ಸೇವೆ ಸಲ್ಲಿಸುವುದರೊಂದಿಗೆ ಊರಿನಲ್ಲಿ ಗೂಂಡಾಗಿರಿ ಪಡೆಯೊಂದನ್ನು ಕಟ್ಟಿಕೊಂಡು ಅಬಲೆ ಮಹಿಳೆಯರ ಮೇಲೆ ದೌರ್ಜನ್ಯ ನಡೆಸಲು ಪ್ರಾರಂಭಿಸಿದರು.

ಇದರ ಮಧ್ಯೆ ಕೆ.ಇ.ಬಿ. ಕಂಟ್ರಾಕ್ಟ್‌ದಾರರಾಗಿ ಕೆಲಸ ಮಾಡುತ್ತಿರುವ ಗಣೇಶ್ ಮತ್ತು ಸಂಗಡಿಗರು ಈ ಪ್ರದೇಶದಲ್ಲಿ ಸರ್ಕಾರದಿಂದ ಸಿಗುವ ಭಾಗ್ಯಜ್ಯೋತಿ ಯೋಜನೆಯ ಅನ್ವಯ ಇಲ್ಲಿಯ ಬಡಬಗ್ಗರ ಮನೆಗೆ ಉಚಿತ ವಿದ್ಯುತ್ ಅಳವಡಿಸುವ ಸಲುವಾಗಿ ಕಂಟ್ರಾಕ್ಟ್ ಪಡೆದುಕೊಂಡರು. ಇವರು ಪ್ರತಿ ಮನೆಯಿಂದ 1000 ರೂ ನಂತೆ ವಸೂಲಿ ಮಾಡುತ್ತಿದ್ದು, ಇದನ್ನು ಸ್ಥಳೀಯ ಡಿವೈಎಫ್‌ಐ ಕಾರ್ಯಕರ್ತರು ತಿಳಿದು ಸಂಬಂಧಪಟ್ಟವರಿಗೆ ದೂರು ಸಲ್ಲಿಸಿ ಈ ಭ್ರಷ್ಟಾಚಾರದ ಬಗ್ಗೆ ತನಿಖೆ ನಡೆಸುವಂತೆ ಒತ್ತಾಯಿಸಿದರು. ಇದೇ ಸಂದರ್ಭದಲ್ಲಿ ಸ್ಥಳಕ್ಕೆ ತೆರಳಿದ ಪೀಟರ್ ಲೋಬೋ ಇವರ ಮೇಲೆ ಈ ಗೂಂಡಾ ಪಡೆಗಳು ಹಲ್ಲೆ ನಡೆಸಿ ಈ ಪ್ರದೇಶದ ಸಮಸ್ಯೆಗಳನ್ನು ನಾವೇ ಪರಿಹರಿಸುತ್ತೇವೆ, ಹೊರಗಿನವರು ಇಲ್ಲಿ ಪ್ರವೇಶಿಸಬಾರದೆಂಬ ಹಿಟ್ಲರ್ ನೀತಿಯನ್ನು ವಾದಿಸಿದರು. ಈ ಬಗ್ಗೆ ಪೋಲೀಸ್ ಠಾಣೆಯಲ್ಲಿ ದೂರನ್ನು ಕೊಟ್ಟರು, ಪೋಲೀಸರು ಈ ಗೂಂಡಾ ಪಡೆಗಳೊಂದಿಗೆ ಸೇರಿ ಕೇಸನ್ನು ಮುಚ್ಚಲು ಪ್ರಯತ್ನಪಟ್ಟರು. ಇದರಲ್ಲಿ ಇಲ್ಲಿಯ

ಸತತ ದೌರ್ಜನ್ಯಕ್ಕೊಳಗಾಗುತ್ತಿರುವ ಮಹಿಳೆಯರು

ಇನ್ಸ್‌ಪೆಕ್ಟರ್ ಮಿತ್ರ ಹೆರಾಜೆ ಎಂಬುವರ ಪಾತ್ರ ಬಹು ದೊಡ್ಡದು. ಮಿತ್ರ ಹೆರಾಜೆಯವರು ಗಣೇಶ್ ಮತ್ತವನ ಗೂಂಡಾಗಳೊಂದಿಗೆ ಸಹಭಾಗಿಯಾಗಿದ್ದಾರೆ. ಇಲ್ಲಿಯ ಕೆಲವು ಮಹಿಳೆಯರು ಈ ಬಗ್ಗೆ ಪ್ರಸ್ತಾಪಿಸಿದಾಗ ಇಲ್ಲಿಯ ಬಡ ಮುಸ್ಲಿಂ ಹೆಂಗಸಾದ ಶ್ರೀಮತಿ ಪಾತುಮ್ಮ ಮತ್ತವರ ಮಗಳು ಸಂಜೆ ಕಾಡಿಗೆ ಬಹಿರ್ದೆಸೆಗೆ ಹೋದಾಗ ಕಿರಣ ಮತ್ತು ಸಂಗಡಿಗರು ಅವರೊಡನೆ ತುಚ್ಛವಾಗಿ ವರ್ತಿಸಿ ಹಲ್ಲೆ ನಡೆಸಿದ್ದಾರೆ. ತೀವ್ರ ಹಲ್ಲೆಗೊಳಗಾದ ಅವರು ವೀರಾಜಪೇಟೆ ಸರ್ಕಾರಿ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲಾಗಿದ್ದು ಈ ಬಗ್ಗೆ ಪೋಲೀಸರಿಗೆ ದೂರು ಕೊಡಲಾಯಿತು. ರಾಕ್ಷಸರ ರೀತಿಯಲ್ಲಿ ವರ್ತಿಸುವ ವಿರಾಜಪೇಟೆಯ ನಗರ ಠಾಣೆಯ ನರರಾಕ್ಷಸರು ಈ ದೂರನ್ನು ದಾಖಲಿಸಿಕೊಳ್ಳದೇ ಗಣೇಶನ ಗುಂಪನ್ನೇ ಬೆಂಬಲಿಸಿದರು.

ಇಂತಹುದೇ ಇನ್ನೊಂದು ಪ್ರಕರಣ ಶ್ರೀಮತಿ ಡೈಸಿ ಪೂವಯ್ಯ ಎಂಬ ಮಹಿಳೆಯ ಮೇಲೆ ಪೆರುಂಬಾಡಿಯ ಇದೇ ಗುಂಪಿನವರಾದ ಗಣೇಶ್, ಕಬ್ಬಚಿಡ ಲವ, ಸಂತೋಷ್, ಪ್ರತಾಪ್, ಜೀವನ್ ಅನಿತ್, ಬಾಬು, ಪ್ರಭು, ಮಣಿ, ವೇಣು ಮುಂತಾದವರು ಸೇರಿ ಹಲ್ಲೆ ನಡೆಸಿದರು. ಈ ಬಗ್ಗೆ ಡೈಸಿಯವರು ಪೋಲೀಸರಿಗೆ ದೂರು ನೀಡಿದ್ದರು. ಪೋಲೀಸರು ದೂರು ಸ್ವೀಕರಿಸದಿದ್ದಾಗ ಡೈಸಿಯೊಂದಿಗೆ ಇತರ ಮಹಿಳೆಯರು ಪೋಲೀಸ್ ಠಾಣೆಯ ಮುಂದೆ ಧರಣಿ ಸತ್ಯಾಗ್ರಹವನ್ನು ಪ್ರಾರಂಭಿಸಿದರು. ಇದರಿಂದ ಹೆದರಿದ ಪೋಲೀಸರು ಈ ಮೇಲಿನ ಗೂಂಡಾಗಳ ದೂರನ್ನು ದಾಖಲಿಸಿಕೊಂಡರು.

ಈ ಪ್ರದೇಶದ ಅಂಗನವಾಡಿಗೆ ಪಾರ್ವತಿ ಎಂಬ ಮಹಿಳೆ ಕಾರ್ಯಕರ್ತೆಯಾಗಿದ್ದು ಈ ಮೇಲಿನ ವ್ಯಕ್ತಿಗಳ ದೌರ್ಜನ್ಯದ ಬಗ್ಗೆ ಧ್ವನಿ ಎತ್ತಿದ್ದಕ್ಕೆ ಅಂಗನವಾಡಿ ಕಾರ್ಯಕರ್ತೆಯ ಮೇಲೆ ಹಲ್ಲೆ ನಡೆಸಿ ಅವರನ್ನು ಈ ಪ್ರದೇಶದಿಂದ ವರ್ಗಾವಣೆ ಮಾಡಲು ಪ್ರಯತ್ನಪಟ್ಟರು. ಈ ಹಲ್ಲೆಯ ಬಗ್ಗೆ ಪಾರ್ವತಿಯವರು ಪೋಲೀಸರಿಗೆ ದೂರನ್ನು ಕೊಟ್ಟರು. ಯಾವುದೇ ಪ್ರಯೋಜನ ಆಗಲಿಲ್ಲ.

ಹೀಗೆ ನಿರಂತರವಾಗಿ ಈ ಪ್ರದೇಶದಲ್ಲಿ ಅನ್ಯಾಯ, ಅಕ್ರಮ, ದೌರ್ಜನ್ಯ ನಡೆಸುವ ಈ ವ್ಯಕ್ತಿಗಳ ಜೊತೆ ಪೋಲೀಸರು ಶಾಮೀಲಾಗಿದ್ದು ಇದರಿಂದ ಪ್ರೇರೇಪಣೆಗೊಂಡ ಈ ಗೂಂಡಾಗಳು ಕಾನೂನನ್ನೇ ಗಾಳಿಗೆ ತೂರಿ ದೌರ್ಜನ್ಯ ನಡೆಸುತ್ತಿದ್ದಾರೆ. ಇದಕ್ಕೆ ಉದಾಹರಣೆ ಎಂಬಂತೆ ತಾರೀಖು 19.5.2001 ರಂದು ಪೆರುಂಬಾಡಿಯ ಶ್ರೀಮತಿ ಲಲಿತ ಎಂಬುವರು ಪೆರುಂಬಾಡಿ ಪೈಸಾರಿ ಜಾಗದಲ್ಲಿ ಒಂದು ಗುಡಿಸಲನ್ನು ಕಟ್ಟಿ ವಾಸ ಮಾಡಲು ಪ್ರಾರಂಭ ಮಾಡಿದರು. ಇವರ ಗುಡಿಸಲಿನ ಪಕ್ಕದಲ್ಲಿ ಅಬ್ದುಲ್ಲಾ ಎಂಬುವರು ಒಂದು ಗುಡಿಸಲನ್ನು ಕಟ್ಟಿ ವಾಸ ಮಾಡಲು ಪ್ರಾರಂಭಿಸಿದರು.

ಈ ಬಗ್ಗೆ ಸ್ಥಳೀಯ ಪುಂಡ ಪೋಕರಿ ಗೂಂಡಾಗಳಿಂದ ಈ ಮೇಲಿನ ಗಣೇಶನ ಕಡೆಯವರು ಈ ಗುಡಿಸಲನ್ನು ತೆರವುಗೊಳಿಸಬೇಕೆಂದು ಇಲ್ಲದೇ ಹೋದರೆ ಕೊಲೆ ಮಾಡುವುದಾಗಿ ಬೆದರಿಸಿದರು.

ದಿ. 19.5.2001 ರಂದು ಈ ಗೂಂಡಾಪಡೆಗಳು ಶ್ರೀಮತಿ ಲಲಿತ ಹಾಗೂ ವಾಜೀದಳ ಮೇಲೆ ಹಲ್ಲೆ ನಡೆಸಿ ತೀವ್ರವಾದ ಗಾಯಗಳೊಂದಿಗೆ ಲಲಿತಳು ಆಸ್ಪತ್ರೆಗೆ ದಾಖಲಾದಳು. ಆದರೆ ಈ ಬಗ್ಗೆ ಪೋಲೀಸರು ಯಾವುದೇ ದೂರನ್ನು ಆರೋಪಿಗಳ ವಿರುದ್ಧ ದಾಖಲಿಸಿಕೊಂಡಿರುವುದಿಲ್ಲ. ಈ ಬಗ್ಗೆ ಶ್ರೀಮತಿ ಲಲಿತ ಮತ್ತು ಶ್ರೀಮತಿ ವಾಜಿದಾ ಇವರು ರಾಜ್ಯ ಮಹಿಳಾ ಆಯೋಗಕ್ಕೆ ದೂರು ಸಲ್ಲಿಸಿದ್ದಾರೆ.

ತಾ. 2.6.2001 ರಂದು ರಾತ್ರಿ ಒಂದು ಗಂಟೆಗೆ ಸಂತೋಷ್ ಮತ್ತು ಮತ್ತಿತರರು ವಾಜಿದಳ ಗುಡಿಸಲಿಗೆ ಬೆಂಕಿ ಕೊಟ್ಟು, ಸ್ವತಃ ಸಂತೋಷನೇ ಮೈಗೆ ಗಾಯ ಮಾಡಿಕೊಂಡು ಸರ್ಕಾರಿ ಆಸ್ಪತ್ರೆಯಲ್ಲಿ ದಾಖಲಾಗಿದ್ದು, ಕಟ್ಟಚ್ಚಿರ, ಎ.ಪೂವಯ್ಯ, ಮೊಣ್ಣಪ್ಪ, ವಾಸು ಎಂಬುವರ ಮೇಲೆ ಸುಳ್ಳು ದೂರು ಕೊಟ್ಟಿದ್ದಾನೆ. ಸ್ಥಳೀಯ ಇನ್ಸ್‌ಪೆಕ್ಟರ್ ಮಿತ್ರ ಹೆರಾಜೆ ಯಾವುದೇ ಪೂರ್ವಾಪರ ವಿವೇಚನೆ ಮಾಡದೆ ನಿರಪರಾಧಿಗಳಾದ ಈ ಮೇಲಿನ ವ್ಯಕ್ತಿಗಳ ಮೇಲೆ ದೂರನ್ನು ದಾಖಲಿಸಿದ್ದಾರೆ.

ರಾತ್ರಿ ವಾಜಿದಳ ಗುಡಿಸಲಿಗೆ ಬೆಂಕಿ ಇಡುವುದನ್ನು ಲಲಿತಾ ಕಣ್ಣಾರೆ ಕಂಡಿದ್ದರೂ ಆ ಬಗ್ಗೆ ದೂರು ಕೊಟ್ಟರೂ, ಪೋಲೀಸರು ಯಾವುದೇ ಕ್ರಮ ಕೈಗೊಂಡಿಲ್ಲ.

ವೀರಾಜಪೇಟೆ ನಗರ ಠಾಣೆ ಭ್ರಷ್ಟಾಚಾರದಿಂದ ಕೊಳೆತು ನಾರುತ್ತಿದೆ. ಇಲ್ಲಿಗೆ ಶ್ರೀಧರ ಎಂಬ ನರಸತ್ತ ಪಿ.ಎಸ್.ಐ. ಇದ್ದು ಈ ವ್ಯಕ್ತಿಯಿಂದ ಇಲ್ಲಿ ಯಾವುದೇ ಕಾನೂನು ರಕ್ಷಣೆ ಇಲ್ಲ. ಪೋಲೀಸ್ ಠಾಣೆಗೆ ದೂರು ಕೊಡಲು ಹೋದರೆ ಇಲ್ಲಿಯ ಪೋಲೀಸರು ಅನ್ಯಾಯಕ್ಕೊಳ ಗಾದವನ ಮೇಲೆ ದೈಹಿಕ ಹಲ್ಲೆ ನಡೆಸುವುದು, ದುಡ್ಡು ಕೀಳುವುದು ಮಾಮೂಲಾಗಿದೆ. ಈ ಪೋಲೀಸರ ಬಾಯಿಂದ ಹೊರಬೀಳುವ ಮಾತುಗಳು ಕಟ್ಟಾ ಪೋಲಿಗಳದೇ ಆಗಿದೆ. ಈ ಪೋಲೀಸರ ದೊರೆ ಮಿತ್ರ ಹೆರಾಜೆ ಎಂಜಲು ಕಾಸಿಗೆ ಕೈಯೊಡ್ಡುವ ನೀಚನಾಗಿದ್ದಾನೆ.

ಈ ಮೇಲಿನ ಗೂಂಡಾಗಳಿಂದ ಈ ಗ್ರಾಮದ ಜನ ನೆಮ್ಮದಿ ಕಳೆದುಕೊಂಡಿದ್ದಾರೆ. ಗಣೇಶನಂತಹ ಉಪಾಧ್ಯಕ್ಷನನ್ನು ಪಡೆದ ಈ ಗ್ರಾಮದ ಗ್ರಾಮಸ್ಥರ ಗೋಳನ್ನು, ಕಣ್ಣೀರನ್ನು ಕಂಡು ಕಾಣದಂತೆ ಸ್ಥಳೀಯ ರಾಜಕಾರಣಿಗಳು ವರ್ತಿಸುತ್ತಿದ್ದಾರೆ. ಇಂತಹ ಪ್ರಕರಣಗಳ ವಿರುದ್ಧ ಹಿಂದೆ ಡಿವೈಎಫ್‌ಐ ಪ್ರತಿಭಟಿಸಿದೆ.

ಈ ಘಟನೆ ನಡೆದ ಸ್ಥಳಕ್ಕೆ ಜನವಾದಿ ಮಹಿಳಾ ಸಂಘಟನೆಯ ವಾರಿಜಾ ಮತ್ತು ಕಾವೇರಿ ಭೇಟಿ ನೀಡಿದ್ದು 15 ದಿನದೊಳಗೆ ಈ ಗೂಂಡಾಗಳ ವಿರುದ್ಧ ಕ್ರಮ ಕೈಗೊಳ್ಳದೇ ಇದ್ದರೆ ಧರಣಿ ಮುಷ್ಕರ ಹೂಡುವುದಾಗಿ ಎಚ್ಚರಿಸಿದ್ದಾರೆ.

ವರದಿ: **ಸುನೀಲ್**

ಭಾರತದ ಸೈನಿಕ ನೆಲೆಗಳ ಬಳಕೆಗೆ ಅಮೇರಿಕಾಕ್ಕೆ ಅವಕಾಶ - ಭಾರೀ ಅಪಾಯಕಾರಿ

— **ಯೆಚೂರಿ**


ಭಾರತದ ವಿದೇಶಾಂಗ ಸಚಿವರಾದ ಜಸ್ವಂತ್‌ಸಿಂಗ್‌ರವರು ತಮ್ಮ ಆಸ್ಟೇಲಿಯಾ ಪ್ರವಾಸದಲ್ಲಿದ್ದಾಗ, ಅಡಿಲೇಡ್‌ನಲ್ಲಿ ವರದಿಗಾರರೊಂದಿಗೆ ಮಾತನಾಡುತ್ತಾ ಸೈನ್ಯ ಸೈನ್ಯದ ನಡುವಿನ ಸಹಕಾರ, ಭಾರತ ಹಾಗೂ ಅಮೇರಿಕಾ ನಡುವಿನ ಸಹಕಾರದ ಪ್ರಮುಖ ಅಂಶವಾಗಿದೆ, ಎಂದಿದ್ದಾರೆ. ಈ ಹೇಳಿಕೆಯು ಭಾರತ ಅಮೇರಿಕಾದ ನಡುವಿನ ರಕ್ಷಣಾ ಹೊಂದಾಣಿಕೆಯನ್ನು ಅಮೇರಿಕಾದ ಪರವಾಗಿ ಸಂಯೋಜಿಸುವ ನಿಟ್ಟಿನಲ್ಲಿ ಭಾರತದ ವಿದೇಶಾಂಗ ನೀತಿಯನ್ನು ಮಾರ್ಪಡಿಸುವ ದ್ಯೋತಕವಾಗಿದೆ. ವಾಜಪೇಯಿ ಸರ್ಕಾರ ಅಮೇರಿಕನ್ ಸಾಮ್ರಾಜ್ಯಶಾಹಿಗೆ ಸಂಪೂರ್ಣ ಶರಣಾಗುತ್ತಿರುವುದನ್ನು ಇದು ತೋರಿಸುತ್ತದೆ.

ಭಾರತಕ್ಕೆ ಮಾರಕ ಸಂಬಂಧ

ಅಮೇರಿಕಾ-ಭಾರತದ ನಡುವಿನ ರಕ್ಷಣಾ ಹೊಂದಾಣಿಕೆಯ ಪ್ರಕ್ರಿಯೆ ಪಿ.ವಿ. ನರಸಿಂಹ ರಾವ್‌ರ ಕಾಲದಿಂದ ಪ್ರಾರಂಭವಾಗಿದ್ದರೂ ವಾಜಪೇಯಿ ಸರ್ಕಾರವು ಈ ಹೊಂದಾಣಿಕೆಯನ್ನು ಭದ್ರಗೊಳಿಸಿ ಮುಂದುವರೆಸಲು ಬಯಸಿರುವುದು ಭಾರತದ ರಕ್ಷಣಾ ಹಿತಾಸಕ್ತಿಗೆ ಮಾರಕವಾಗಲಿದೆ. ಈ ಹಿಂದೆ ಜಂಟಿ ಸೈನಿಕ ಕಸರತ್ತುಗಳು ನಡೆದಿದ್ದುವು. ಪ್ರಮುಖವಾಗಿ ಅಮೇರಿಕಾದ ನೌಕಾ ಸೈನ್ಯದೊಂದಿಗೆ ಜಂಟಿ ಕಸರತ್ತುಗಳು ನಡೆದಿವೆ.

ಸಮಾನ ಶತ್ರು ಎಲ್ಲಿ? ಯಾರು?

ವಾಸ್ತವದಲ್ಲಿ ಎರಡೂ ದೇಶಗಳಿಗೂ ಇರುವ ಮೂರನೆ ಸಮಾನ ಶತ್ರು ದೇಶವನ್ನು ಎದುರಿಸಲು ಇಂತಹ ಜಂಟಿ ಸೈನಿಕ ಕಸರತ್ತುಗಳು ನಡೆಯುತ್ತಿವೆ. ಆದರೆ ಭಾರತ ಮತ್ತು ಅಮೇರಿಕಾ ಇಬ್ಬರಿಗೂ ಸಮಾನ ಶತ್ರು ಸದ್ಯದಲ್ಲಿ ಯಾರೂ ಇಲ್ಲ. ಭಾರತಕ್ಕೆ ಶತ್ರುವಾಗಿದ್ದ ಪಾಕಿಸ್ಥಾನಕ್ಕೆ ಈ ಹಿಂದಿನಿಂದಲೂ ಅಮೇರಿಕಾ ಶಸ್ತ್ರಾಸ್ತ್ರಗಳನ್ನು ಸರಬರಾಜು ಮಾಡುತ್ತಾ ಬಂದಿದೆ. ಪ್ರಪಂಚದ ವಿವಿಧೆಡೆ ಅಮೇರಿಕಾದ ನೇರ ಮಧ್ಯ ಪ್ರವೇಶಿಸುವಿಕೆ ಹಾಗೂ ಸೈನಿಕ ಕಾರ್ಯಾಚರಣೆಗಳು ದೊಡ್ಡ ರೀತಿಯಾದ ದೇಶ ದೇಶಗಳ ನಡುವಿನ ಬಿಕ್ಕಟ್ಟನ್ನು ಸೃಷ್ಟಿಸಿದೆ. ಭಾರತವು ಈ



ಜಸ್ವಂತ್ ಸಿಂಗ್

ಹಿಂದಿನಿಂದಲೂ ಪ್ಯಾಲಿಸ್ಟೇನಿನ ಹೋರಾಟವನ್ನು ಬೆಂಬಲಿಸುತ್ತಾ ಬಂದಿದೆ. ಆದರೆ ಅಮೇರಿಕಾವು ಇಸ್ರೇಲಿಗೆ ಬೆಂಬಲ ನೀಡುತ್ತಾ ಬಂದಿರುವ ಕಾರಣದಿಂದಾಗಿ, ಪ್ಯಾಲಿಸ್ಟೇನಿನ ಹೋರಾಟವು ಯಶಸ್ವಿಯಾಗಲು ಸಾಧ್ಯವಾಗಿಲ್ಲ.

ರಕ್ಷಣಾ ಹಿತಾಸಕ್ತಿಯು ಒತ್ತೆ

ಜಸವಂತ್ ಸಿಂಗ್‌ರವರು ಮೇಲಿನ ಹೇಳಿಕೆಯನ್ನು ನೀಡುತ್ತಾ ಭಾರತದ ಸೈನ್ಯಾ ನೆಲೆಗಳನ್ನು ಅಮೇರಿಕಾ ತನ್ನ ಅನೀತಿಯುತ ಕಾರ್ಯಗಳಿಗೆ ಬಳಸುವ ಸಾಧ್ಯತೆ ಕುರಿತು ನಿರಾಕರಿಸದಿರುವುದು ಮತ್ತಷ್ಟು ಅಘಾತಕಾರಿಯಾದ ವಿಷಯ. ಈ ಹಿಂದೆ ಕೊಲ್ಲಿ ಯುದ್ಧದ ಸಮಯದಲ್ಲಿ ಚಂದ್ರಶೇಖರ್‌ರವರು ಪ್ರಧಾನಮಂತ್ರಿಯಾಗಿದ್ದಾಗ, ಅಮೇರಿಕಾ ಸೈನಿಕ ವಿಮಾನಗಳಿಗೆ ತೈಲ ತುಂಬಲು ಅವಕಾಶ ಕಲ್ಪಿಸಿದ್ದರ ವಿರುದ್ಧ ರಾಷ್ಟ್ರದ ಜನತೆ ಒಂದಾಗಿ ಪ್ರತಿಭಟಿಸಿದ್ದನ್ನು ಈ ಸಮಯದಲ್ಲಿ ನೆನೆಯಬೇಕಿದೆ.

ಅಮೇರಿಕಾದಿಂದಲೇ ಬೆದರಿಕೆ

ಆದರೆ ವಾಜಪೇಯಿ ನೇತೃತ್ವದಲ್ಲಿ ಭಾರತದ ರಕ್ಷಣಾ ಹಿತಾಸಕ್ತಿಯನ್ನು ಅಮೇರಿಕಾಕ್ಕೆ ಸಂಪೂರ್ಣವಾಗಿ ಒತ್ತೆ ಇಟ್ಟಿರುವ ದ್ಯೋತಕವಾಗಿ

ಮುಂದಿನ ಪುಟಕ್ಕೆ

ಭಾರತ-ಪಾಕ್ ವ್ಯವಹಾರಗಳಲ್ಲಿ ಕೈಹಾಕುತ್ತಿರುವ ಅಮೆರಿಕ

ಭಾರತ-ಪಾಕಿಸ್ತಾನ ಶೃಂಗಸಭೆಗೆ ಅಮೆರಿಕಾದ ಒತ್ತಡವೇ ಕಾರಣ ಎಂಬುದು ಎಲ್ಲೆಡೆಯಿಂದ ಬರುತ್ತಿರುವ ಸುದ್ದಿ. ಅದಕ್ಕೆ ಪುಷ್ಟಿ ನೀಡುತ್ತಿರುವ ಹಲವಾರು ಘಟನೆಗಳು ಘಟಿಸಿವೆ.

ಶೃಂಗಸಭೆ ಜುಲೈ 14 ಕ್ಕೆ ನಡೆಯಲಿದೆ ಎಂದು ಭಾರತ ಸರಕಾರ ಜಗತ್ತಿಗೆ ತಿಳಿಸುವ ಮೊದಲೇ ಅಮೆರಿಕಾಕ್ಕೆ ಅದು ಗೊತ್ತಾಗಿದೆ. ಜೂನ್ 19 ರಂದು ಭಾರತದ ಪ್ರಧಾನಮಂತ್ರಿ ಬೀಚ್ ಕ್ಯಾಂಡಿ ಆಸ್ಪತ್ರೆಯಿಂದ ಹೊರಬಂದು ಪತ್ರಕರ್ತರು ಕೇಳಿದ ಪ್ರಶ್ನೆಗಳಿಗೆ ಉತ್ತರಿಸುತ್ತಾ ಇನ್ನು ಕೆಲವೇ ದಿನಗಳಲ್ಲಿ ಶೃಂಗಸಭೆಯ ದಿನಾಂಕ ನಿಗದಿಗೊಳಿಸಲಾಗುವುದು ಎಂದು ತಿಳಿಸುತ್ತಿರುವಾಗಲೇ, ಅಮೆರಿಕಾದ ಶ್ವೇತ ಭವನದ ವಕ್ತಾರರು 'ಜುಲೈ 14 ರ ಭಾರತ-ಪಾಕ್ ಮಾತುಕತೆಯನ್ನು ಅಮೆರಿಕಾ ಬೆಂಬಲಿಸುತ್ತದೆ' ಎಂಬ ಹೇಳಿಕೆ ನೀಡಿದರು. ಜುಲೈ 14ರಂದೇ ಮಾತುಕತೆ ನಡೆಯುತ್ತದೆ ಎಂದು ಅಮೆರಿಕಾಕ್ಕೆ ಹೇಗೆ ತಿಳಿಯಿತು? ಅಂದರೆ ಮಾತುಕತೆಗೆ ನಿರ್ಧಾರ ನವದೆಹಲಿಯಿಂದ ಆರಂಭವಾಗದೆ, ವಾಷಿಂಗ್‌ಟನ್‌ನಿಂದ ಉದ್ಭವವಾಗಿದೆ ಎಂಬುದು ಸ್ಪಷ್ಟ.

ಜೂನ್ 28 ರ ಪತ್ರಿಕೆಗಳ ಮುಖಪುಟದ ಸುದ್ದಿಗಳಲ್ಲಿ ಭಾರತ-ಪಾಕ್ ಮಾತುಕತೆಗೆ ಅಮೇರಿಕಾದ ಒತ್ತಡವೇ ಕಾರಣ ಎಂಬುದನ್ನು ಪಾಕಿಸ್ತಾನದ ಮಿಲಿಟರಿ ಆಡಳಿತಗಾರ ಅಧ್ಯಕ್ಷ ಜನರಲ್ ಮುಷರಫ್ ಒಪ್ಪಿಕೊಂಡಿದ್ದಾರೆ. ಅದನ್ನು ವರದಿ ಮಾಡಿದ ಇಸ್ಲಾಮಾಬಾದ್‌ನ 'ಡಾನ್' ಪತ್ರಿಕೆ ಮರುದಿನ ಸುದ್ದಿಯನ್ನು ಅಲ್ಲಗಳೆದರೂ, ಆ ಪತ್ರಿಕೆ ಮಿಲಿಟರಿ ಆಡಳಿತದ ಅಡಿಯಲ್ಲಿದೆ ಎಂಬುದನ್ನು ಗಮನಿಸಬೇಕು.

ಶಾಂತಿ ಸ್ಥಾಪನೆಗೋಸ್ಕರ ಭಾರತದ ಪ್ರಧಾನ ಮಂತ್ರಿ ವಾಜಪೇಯಿ ಮುತುವರ್ಜಿ ವಹಿಸಿದ ಭಾರತ-ಪಾಕ್ ಮಾತುಕತೆಯು ಇದಲ್ಲ. ಬದಲಾಗಿ ಕಾಶ್ಮೀರ ಸಮಸ್ಯೆಯಲ್ಲಿ ಮಧ್ಯ ಪ್ರವೇಶ ಮಾಡಿ ತನ್ನ ಬೇಳೆ ಬೇಯಿಸಿಕೊಳ್ಳಲು ಪ್ರಯತ್ನಿಸುತ್ತಿರುವ ಅಮೆರಿಕಾದ ಕುತಂತ್ರದ ಕೂಪಕ್ಕೆ ಭಾರತವನ್ನು ತಳ್ಳುವ 'ಮಹಾಯೋಜನೆ'ಯ ಭಾಗವೇ ಎಂಬ ಸಂಶಯ ಸಹಜವಾಗಿಯೇ ಮೂಡುತ್ತದೆ.

ಈ ಸಂದರ್ಭದಲ್ಲಿ ಅಮೆರಿಕಾದ ಉಪ ಕಾರ್ಯದರ್ಶಿ ರಿಚರ್ಡ್ ಅರ್ಮಿಟೇಜ್ 'ಹಿಂದೂ' ಪತ್ರಿಕೆಗೆ ನೀಡಿದ ಸಂದರ್ಶನದಲ್ಲಿ (ಜೂನ್ 18) ಹೇಳಿದ ಮಾತುಗಳು ಗಮನಾರ್ಹವಾದುದು "ನಾವು ಪಾಕಿಸ್ತಾನದೊಂದಿಗೆ ಶ್ರೇಷ್ಠ ಬಾಂಧವ್ಯ ಹೊಂದಿದ್ದೇವೆ ಎಂದು ಜನರು ಆಡಿಕೊಳ್ಳುತ್ತಿದ್ದಾರೆ. ಅದು ಶ್ರೇಷ್ಠ ಬಾಂಧವ್ಯವೇನೂ ಆಗಿರಲಿಲ್ಲ. ಬದಲಾಗಿ ಅದೊಂದು ಸುಳ್ಳಿನ ಬಾಂಧವ್ಯ. ಹಲವಾರು ವರ್ಷಗಳಿಂದ ದಕ್ಷಿಣ ಏಶ್ಯಾದಲ್ಲಿ ಸಮತೋಲನವಲ್ಲದ ವಿದೇಶಾಂಗ ನೀತಿಯನ್ನು ಅನುಸರಿಸಿದ್ದೆವು. ಮೊದಲು ಭಾರತ-ಸೋವಿಯತ್ ರಷ್ಯಾ ಸಂಬಂಧದ ಹಿನ್ನೆಲೆಯಲ್ಲಿ ಅದನ್ನು ನಡೆಸಿದ್ದರೆ, ನಂತರ ಅಫಘಾನಿಸ್ತಾನದಲ್ಲಿ ಸೋವಿಯತ್ ನೆಲೆ ನೆಲೆಸಿದ್ದರಿಂದ ಪಾಕಿಸ್ತಾನದೊಂದಿಗೆ ಸಂಬಂಧ ಬೆಳೆಸಬೇಕಾಯಿತು. ಅಂದರೆ ಅಂದಿನ ನಮ್ಮ ನೀತಿ ಬೇರೊಬ್ಬರ ವಿರುದ್ಧ ಬಳಸುವುದಕ್ಕಾಗಿ ಇತ್ತು"




ಅಂದರೆ ಇಂದು ಭಾರತದ ಜತೆ ಬೆಳೆಸುತ್ತಿರುವ ಸಂಬಂಧ ನಿಜವಾದ ಸಂಬಂಧವೋ, ಸುಳ್ಳಿನ ಸಂಬಂಧವೋ ಎಂಬುದನ್ನು ಭಾರತದ ಜನತೆ ತೀವ್ರವಾಗಿ ಆಲೋಚಿಸಬೇಕಾಗಿದೆ.

ಉಪಕಾರ್ಯದರ್ಶಿ ಅರ್ಮಿಟೇಜ್ ಸಣ್ಣ ವ್ಯಕ್ತಿಯೇನಲ್ಲ. ಇಂದಿನ ಅಮೆರಿಕಾದ ಅಧ್ಯಕ್ಷ ಜಾರ್ಜ್‌ಬುಶ್ ಅವರ ತಂದೆ ಜಾರ್ಜ್ ಬುಷ್ ಸೀನಿಯರ್ ಅವರ ಅಧ್ಯಕ್ಷ ಅವಧಿಯಲ್ಲಿಯೂ ಏಶ್ಯಾ ದೇಶದ ನೀತಿಯ ಬಗ್ಗೆ ಅವರಿಗೆ ಸಲಹೆಗಾರರಾಗಿದ್ದರು.

ಭಾರತ-ಪಾಕಿಸ್ತಾನ ವ್ಯವಹಾರದಲ್ಲಿ ಅಮೆರಿಕಾ ಭಾಗಿಯಾಗಿದೆ ಎಂಬುದನು ಮಾಜಿ ಅಧ್ಯಕ್ಷ ಬಿಲ್ ಕ್ಲಿಂಟನ್ ಕೂಡಾ ಒಪ್ಪಿಕೊಂಡಿದ್ದಾರೆ. ಇಂಗ್ಲೆಂಡ್‌ನಲ್ಲಿ ಬ್ರಿಟಿಷ್ ಸುದ್ದಿ ಸಂಸ್ಥೆ(ಬಿಬಿಸಿ) ಏರ್ಪಡಿಸಿದ ಸಭೆಯಲ್ಲಿ ಮಾತನಾಡುತ್ತಾ 'ತನ್ನ ಒತ್ತಾಯದ ಮೇರೆಗೆ ಪಾಕಿಸ್ತಾನದ ಅಂದಿನ ಪ್ರಧಾನಮಂತ್ರಿ ನವಾಜ್ ಶರೀಫ್ ಗಡಿಯಲ್ಲಿನ ಸೇನೆಯನ್ನು ಹಿಂತೆಗೆದುಕೊಂಡಿದ್ದರು' ಎಂಬುದನ್ನು ಒಪ್ಪಿಕೊಂಡಿದ್ದಾರೆ.

ಏಪ್ರಿಲ್ ತಿಂಗಳಲ್ಲಿ ಭಾರತದ ವಿದೇಶಾಂಗ ಸಚಿವ ಹಾಗೂ ರಕ್ಷಣಾ ಸಚಿವರಾಗಿರುವ ಜಸವಂತ್ ಸಿಂಗ್ ವಾಷಿಂಗ್‌ಟನ್‌ಗೆ ಭೇಟಿ ಕೊಟ್ಟಿದ್ದರು. ಈ ಸಂದರ್ಭದಲ್ಲಿ ಅಧ್ಯಕ್ಷ ಬುಶ್ ಅವರನ್ನು ಭೇಟಿಯಾಗುವ ಯಾವುದೇ ಪೂರ್ವಯೋಜಿತ ಕಾರ್ಯಕ್ರಮ ಇರಲಿಲ್ಲ, ವಾಷಿಂಗ್‌ಟನ್‌ಗೆ ತೆರಳಿದ ನಂತರ ಬುಶ್, ಜಸವಂತ್ ಸಿಂಗ್ ಅವರನ್ನು ಬರಮಾಡಿಕೊಂಡರು. ಆದರದ ಸ್ವಾಗತ ನೀಡಿದರು. ಹಲವು ಹೊತ್ತು ಮಾತುಕತೆ ನಡೆಸಿದರು. ಇದು ಯಾಕೆ?

ಚೀನಾದ ಗಡಿ ತೀರದಲ್ಲಿ ಅಮೆರಿಕದ ಗೂಢಾಚಾರ ವಿಮಾನವನ್ನು ಕೈದಿಯಾಗಿರಿಸಿದ ವಿವಾದದ ಹಿನ್ನೆಲೆಯಲ್ಲಿ ಜಸ್ವಂತ್ ಸಿಂಗ್ ಅವರ ಭೇಟಿಗೆ ಹೆಚ್ಚಿನ ಆದರ ದೊರಕಿದೆ ಎಂದು ಮಾಧ್ಯಮಗಳು ವರದಿ ಮಾಡಿವೆ.

ವಾಜಪೇಯಿ ಸರಕಾರವು ಅಧಿಕಾರಕ್ಕೆ ಬಂದ ನಂತರ ಭಾರತದ ವಿದೇಶಾಂಗ ನೀತಿಯಲ್ಲಿ ತೀವ್ರ ಬದಲಾವಣೆಗಳು ಆಗುತ್ತಿವೆ. ಅಲಿಪ್ತ ನೀತಿಯಿಂದ ಅಮೆರಿಕ ಪರ ನೀತಿಯೆಡೆಗೆ ಸಾಗುತ್ತಿದೆ.

ಚುನಾವಣೆ ಸಂದರ್ಭದಲ್ಲಿ ಸ್ವದೇಶಿ ಮತ್ತು ಸ್ವಾಭಿಮಾನದ ಘೋಷಣೆ ಕೊಡುತ್ತಾ ಅಧಿಕಾರಕ್ಕೆ ಬಂದ ಮೇಲೆ 'ವಿದೇಶಿ ಮತ್ತು ಶರಣಾಗತಿ' ಯ ಮೊರೆ ಹೋಗುತ್ತಿದೆ.

ದೇಶದ ರಕ್ಷಣೆಯ ಕ್ಷೇತ್ರದಲ್ಲೂ ಅಮೆರಿಕಾದ ಹಸ್ತಕ್ಷೇಪ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಅಮೆರಿಕಾದ ಮಿಲಿಟರಿ ಅಧಿಕಾರಿಗೆ, ಬರ್ಮಾ ಮತ್ತು ಚೀನಾ ಗಡಿ ಪ್ರದೇಶದಲ್ಲಿರುವ ಮಿಜೋರಾಮ್ ತರಬೇತಿ ಕಾಲೇಜ್‌ನಲ್ಲಿ ಒಂದು ತಿಂಗಳ ಕಾಲ 'ತರಬೇತಿ' ಪಡೆಯಲು ಅವಕಾಶ ನೀಡಲಾಗಿದೆ. ಇದನ್ನು ಭಾರತ ಸರಕಾರದ ಪ್ರತಿನಿಧಿಗಳೇ ಒಪ್ಪಿಕೊಂಡಿರುತ್ತಾರೆ.

ಆದ್ದರಿಂದಲೇ ಭಾರತ-ಪಾಕಿಸ್ತಾನ ಮಾತುಕತೆಯಲ್ಲಿ ಅಮೆರಿಕದ ಉತ್ಸುಕತೆಯನ್ನು ಜಾಗ್ರತೆಯಿಂದ ನೋಡಬೇಕಾಗಿದೆ.

ಭಾರತ-ಪಾಕ್ ಜನರ ನಡುವಿನ ಸಂಶಯ ದೂರಗೊಳಿಸಲು ಬಾಂಧವ್ಯ ಹೆಚ್ಚಿಸಲು, ಆ ಮೂಲಕ ಉಭಯ ದೇಶಗಳ ಅಭಿವೃದ್ಧಿಗೆ ನಾಂದಿ ಹಾಡಲು ಮಾತುಕತೆ ಖಂಡಿತಾ ಸ್ವಾಗತಾರ್ಹ. ಆದರೆ ಅದು ಅಮೆರಿಕದ ಇಚ್ಛೆಯ ಪ್ರಕಾರ ಖಂಡಿತಾ ಅಲ್ಲ.

ಬ್ರಿಟಿಷ್ ಸಾಮ್ರಾಜ್ಯಶಾಹಿಯ ವಿರುದ್ಧ ಸ್ವಾತಂತ್ರ್ಯ ಹೋರಾಟದಲ್ಲಿ ಯಾವುದೇ ಕಾಣಿಕೆ ನೀಡದ ಆರ್.ಎಸ್.ಎಸ್.ನ ಮುಖವಾಡ ಬಿಜೆಪಿ ಇದೀಗ ಅಮೆರಿಕನ್ ಸಾಮ್ರಾಜ್ಯಶಾಹಿಯ ಮುಂದೆ ಶರಣಾಗುತ್ತಿದೆ. ಭಾರತದ ಮುಗ್ಧ ಜನತೆಯ ಬೆನ್ನಿಗೆ ಚೂರಿ ಹಾಕುತ್ತಿದೆ.

ಭಾರತವು, ಅಮೆರಿಕಾದ ಬಾಲಬಡುಕ ಆಗುವುದನ್ನು ಭಾರತದ ಜನತೆ ಸಹಿಸುವುದಿಲ್ಲ. ವಾಜಪೇಯಿ ಸರಕಾರ ಬಾಲಬಡುಕ ನೀತಿಯನ್ನು ಮುಂದು ವರಿಸಿದ್ದೇ ಆದರೆ ಖುರ್ಚಿ ಖಾಲಿ ಮಾಡಿ ಎಂದು ಹೇಳದೆ ಬೇರೆ ದಾರಿಯೇ ಇಲ್ಲ.

- ಬಾಲಕೃಷ್ಣ ಶೆಟ್ಟಿ

.......ಅಮೇರಿಕಾಕ್ಕೆ ಅವಕಾಶ - ಭಾರೀ ಅಪಾಯಕಾರಿ

ಜಸವಂತ್‌ರ ಹೇಳಿಕೆ ಹೊರಬಂದಿದೆ. ಭಾರತಕ್ಕೆ ಸಮೀಪದಲ್ಲಿರುವ ಹಿಂದೂ ಮಹಾ ಸಾಗರದಲ್ಲಿನ ದ್ವೀಪವಾದ ಡಿಗೋಗಾರ್ಸಿಯಾದಲ್ಲಿನ ಅಮೇರಿಕಾದ ಅಣ್ವಸ್ತ್ರ ಸೈನಿಕ ನೆಲೆಯನ್ನು ದಿನದಿಂದ ದಿನಕ್ಕೆ ಅಭಿವೃದ್ಧಿಪಡಿಸುತ್ತಾ ಬಂದಿದೆ. ಈ ನೆಲೆಯಲ್ಲಿರುವ ಅಸ್ತ್ರಗಳ ಗುರಿಯ ವ್ಯಾಪ್ತಿಗೆ, ಇಡೀ ಭಾರತ ಒಳ ಪಡುತ್ತದೆ. ಹಾಗಾಗಿ ಭಾರತದ ರಕ್ಷಣೆಗೋಸ್ಕರವಾದರೂ ದಕ್ಕೆ ಇದ್ದಲ್ಲಿ ಅದು ಡಿಗೋಗಾರ್ಸಿಯಾದಿಂದ, ಪ್ರಪಂಚದ ವಿವಿದೆಡೆಗಳಲ್ಲಿರುವ ವಿದೇಶಿ ಸೈನ್ಯನೆಲೆಗಳನ್ನು ಅದರ ಭಾಗವಾಗಿರುವ ಡಿ-ಗೋ ಗಾರ್ಸಿಯಾ ನೆಲೆಯನ್ನು ಕಳಚಿಹಾಕಬೇಕೆಂದು ಭಾರತ ಹಾಗೂ ಇತರ ಅಲಿಪ್ತ ರಾಷ್ಟ್ರಗಳು ಅಮೇರಿಕಾವನ್ನು ಒತ್ತಾಯಿಸುತ್ತಲೇ ಬಂದಿವೆ. ಈ ಒತ್ತಾಯದ ಭಾಗವಾಗಿ ವಿಶ್ವ ಸಂಸ್ಥೆಯ ಸಮ್ಮೇಳನದಲ್ಲಿ ಭಾರತವು ಹಿಂದೂ ಮಹಾಸಾಗರವನ್ನು ಶಾಂತಿಯ ನೆಲೆ ಎಂದು ಘೋಷಿಸಬೇಕೆಂದು ಪ್ರಸ್ತಾಪವಿಟ್ಟಿತ್ತು. ಆದರೆ ಅಮೇರಿಕಾವು ಶೀತಲ ಸಮರದ ಹೆಸರಿನಲ್ಲಿ ಇಂತಹ ಯಾವುದೇ ಪ್ರಸ್ತಾಪಗಳನ್ನು ಲೆಕ್ಕಿಸಿಲ್ಲ.

ವಾಜಪೇಯಿ ದಾಸ್ಯದ ನಿಲುವು

ಈಗ ಹಿಂದಿನಂತೆ ಶೀತಲ ಸಮರದ ದುಸ್ಥಿತಿಯು ಇರದಿದ್ದರೂ ಅಮೇರಿಕಾ ಮಾತ್ರ ಸೈನಿಕ ಹೊಂದಾಣಿಕೆಗಳಾದ ನ್ಯಾಟೋ ದಂತಹ ಒಕ್ಕೂಟಗಳನ್ನ ಸೈನಿಕ ನೆಲೆಗಳನ್ನು ಹಾಗೇ ಉಳಿಸಿಕೊಂಡಿದೆ. ಅದನ್ನು ಕಳಚಿಲ್ಲ ಮಾತ್ರವಲ್ಲ, ಹೊಸ ನ್ಯಾಟೋ ಹೆಸರಿನಲ್ಲಿ ಹೊಸ ಸಿದ್ದಾಂತವನ್ನೇ ತನ್ನ ಹಿತಾಸಕ್ತಿಗನುಗುಣವಾಗಿ ಸೃಷ್ಟಿಸುತ್ತಿದೆ. ಅಂತರಾಷ್ಟ್ರೀಯ ಕಾನೂನನ್ನು ಉಲ್ಲಂಘಿಸಿ ಚೈನಾದೊಳಗೆ ತನ್ನ ಗೂಢಚರ್ಯ ಯುದ್ಧ ವಿಮಾನವನ್ನು ನುಸುಳಿಸಿದಾಗ ಅದನ್ನು ಖಂಡಿಸದೇ ಇದ್ದ ಭಾರತ ಸರ್ಕಾರದ ನಿಲುವು ಹಾಗೂ ಅಮೇರಿಕಾದ ನೂತನ ಪಕ್ಷಪಾತವಾದ ಅಣ್ವಸ್ತ್ರ ಕ್ಷಿಪಣಿ ರಕ್ಷಣೆ' ವ್ಯವಸ್ಥೆಯನ್ನು (ಎನ್.ಎಂ.ಡಿ) ಆತುರ ಆತುರದಲ್ಲಿ ಸ್ವಾಗತಿಸಿದ್ದು, ವಾಜಪೇಯಿ ಸರ್ಕಾರವು ಅಮೇರಿಕಾ ಹಿತಾಸಕ್ತಿ ಕಾಪಾಡಲು ಎಂತಹುದೇ ದಾಸ್ಯಕ್ಕಾದರೂ ಒಳಗಾಗಲು ಹಿಂಜರಿಯುವುದಿಲ್ಲ ಎಂಬುದನ್ನು ತೋರುತ್ತದೆ.


ಬಯಲುಗೊಂಡ ಬೋಟಾ ದೇಶಪ್ರೇಮ

ರಾಜಕೀಯ ಹಿತಾಸಕ್ತಿಗಳಿಗಾಗಿ ಆಗೊಮ್ಮೆ ಈಗೊಮ್ಮೆ ಒಟ್ಟಾರೆ ಹುರಿದುಂಬಿಸುವ ದೇಶಪ್ರೇಮವು ಭಾರತದೇಶ ಅಮೇರಿಕಾದ ಏಜೆಂಟನ್ನಾಗಿಸುವಲ್ಲಿ ಪರ್ಯಾವಸನ ಗೊಳಿಸುವುದರಲ್ಲಿ ಅಡಗಿದಂತಿದೆ. ಅಮೇರಿಕಾವು ಭಾರತದ ಅಂತರಿಕ ವಿಷಯಗಳಲ್ಲಿ ತಲೆ ಹಾಕುವ ಪ್ರಯತ್ನಗಳೇನು ಗೌಪ್ಯವಾಗಿಲ್ಲ.

ಭಾರತದಲ್ಲಿದ್ದ ಅಮೇರಿಕಾದ ರಾಯಭಾರಿ ಮೋಯ್ನಿಹಾನ್ಸ್‌ರವರೇ ಬಹಿರಂಗ ಪಡಿಸಿರುವಂತೆ ನಮ್ಮ ದೇಶದಲ್ಲಿ ಕಮ್ಯುನಿಸ್ಟರನ್ನು ಸೋಲಿಸಲು ಸಿ.ಐ.ಎ. ಯಾವ ರೀತಿ ಚುನಾವಣೆಗಳಲ್ಲಿ ಹಣ ಒದಗಿಸಿತು ಹಾಗೂ ಎನ್ರಾನ್ ವಿಷಯದಲ್ಲಿ ಅಮೇರಿಕಾ ಹೇಗೆ ಬೆದರಿಕೆ ಒಡ್ಡಿತು ಎಂಬ ಅಂಶಗಳು ರಾಷ್ಟ್ರದ ಜನತೆಗೆ ಬಹಿರಂಗಗೊಂಡಿದೆ. ಇಂತಹ ಸಂದರ್ಭದಲ್ಲಿ ಅಮೇರಿಕಾದ ಸೈನ್ಯಾಧಿಕಾರಿಯಾದ ಜನರಲ್ ಹೆನ್ರಿ ಹೆಚ್ ಶೆಲ್ಟನ್ ಮುಂಬರುವ ದಿನಗಳಲ್ಲಿ ಭಾರತಕ್ಕೆ ಭೇಟಿ ನೀಡಲಿದ್ದಾರೆ. ಭಾರತ ಅಮೇರಿಕಾ ಸೈನ್ಯ ಸಹಕಾರದ ಹೆಸರಿನಲ್ಲಿ ರಾಷ್ಟ್ರದ ರಕ್ಷಣೆಯೊಂದಿಗೆ ರಾಜಿ ಮಾಡಿಕೊಳ್ಳಲು ಸಾಧ್ಯವಿಲ್ಲ. ವಾಜಪೇಯಿ ಸರ್ಕಾರ ಅಮೇರಿಕನ್ ಸಾಮ್ರಾಜ್ಯಶಾಹಿಗಳ ಒತ್ತಡಕ್ಕೆ ಶರಣಾಗುವಾಗ ಅಮೇರಿಕನ್ ಸಾಮ್ರಾಜ್ಯಶಾಹಿಗಳ ಒತ್ತಡವನ್ನು ಪ್ರತಿರೋಧಿಸುವ ಕರ್ತವ್ಯವನ್ನು ರಾಷ್ಟ್ರದ ಪ್ರತಿಯೊಬ್ಬ ದೇಶಪ್ರೇಮಿಯು ತೋರಿಸಬೇಕಿದೆ.



ಕಾರ್ಮಿಕ ವರ್ಗ ತ್ಯಾಗ ಬಲಿದಾನಗಳ ಹೋರಾಟದಿಂದ ಪಡೆದ ಕನಿಷ್ಟ ಹಕ್ಕುಗಳನ್ನು ಕಿತ್ತುಕೊಳ್ಳಲು ಕೇಂದ್ರ ಮತ್ತು ರಾಜ್ಯಸರ್ಕಾರಗಳು ಹೊರಟಿವೆ. 1947 ರ ಔದ್ಯಮಿಕ ವಿವಾದಗಳ ಕಾಯ್ದೆಗೆ ತಿದ್ದುಪಡಿ ತರುವ ಮೂಲಕ ಬಹುರಾಷ್ಟ್ರೀಯ ಕಂಪನಿಗಳು ಬಂಡವಾಳಗಾರರ ಸುಲಿಗೆ-ದೌರ್ಜನ್ಯ ಇನ್ನೂ ಹೆಚ್ಚಿಸಲು ಕರಾಳ ತಿದ್ದುಪಡಿಗಳನ್ನು ತರಲಾಗುತ್ತದೆ. ಮನಬಂದಂತೆ ಬಳಸಲು ಹೆಚ್ಚಿನ ಅವಕಾಶ ಕಲ್ಪಿಸಲಿದೆ. ಒಂದೆಡೆ ದೇಶದ ಅಮೂಲ್ಯ ಸಂಪತ್ತನ್ನು ಲೂಟಿ ಮಾಡಲು ಮುಕ್ತ ಅವಕಾಶ ಇನ್ನೊಂದೆಡೆ ದೇಶ ಉಳಿಸಲು ತಮ್ಮ ಹಿತ ರಕ್ಷಿಸಿಕೊಳ್ಳಲು ಸತತ ಹೋರಾಡುವ ಕಾರ್ಮಿಕ ವರ್ಗದಮೇಲೆ ಸತತ ಧಾಳಿಗಳು. ಜಾಗತೀಕರಣದ ಕರಿ ನೆರಳಿನಲ್ಲಿ ಈಗ ತರಲಾಗುತ್ತಿರುವ ಈ ತಿದ್ದುಪಡಿಗಳು ಎಂತಹವು? ಮತ್ತು ಇವುಗಳನ್ನು ಹಿಮ್ಮೆಟ್ಟಿಸುವ ಅಗತ್ಯದ ಬಗ್ಗೆ ವಿವರಿಸಿದ ಲೇಖನ



ಕೇಂದ್ರ ರಾಜ್ಯ ಸರ್ಕಾರಗ

ಕಾರ್ಮಿಕ ಕಾಯ್ದೆಗಳಿಗೆ ಕರಾಳ ತಿ

ಇಂಡಿಯನ್ ಲೇಬರ್ ಕಾನ್ಫರೆನ್ಸ್ (ಐಎಲ್‌ಸಿ) 37ನೇ ಸಭೆ, 18, 19ಮೇ 2001ರಂದು ನವದೆಹಲಿಯಲ್ಲಿ ನಡೆಯಿತು. ಇದು ಭಾರತದ ಕಾರ್ಮಿಕ ವಿಚಾರಗಳ ಅತ್ಯುನ್ನತ ದ್ವಿಪಕ್ಷೀಯ ವೇದಿಕೆಯಾಗಿದೆ. ಐ.ಎಲ್.ಸಿ. ಸಭೆಗೆ ಒಂದು ವಾರದ ಮೊದಲು ಪ್ರಧಾನ ಮಂತ್ರಿ ವಾಜಪೇಯಿಯವರು ಎಲ್ಲಾ ಕಾರ್ಮಿಕ ಸಂಘಗಳ ಮುಖಂಡರ ಸಭೆ ಕರೆದಿದ್ದರು. ಈ ಸಭೆಯಲ್ಲಿ ಸರಕಾರ ತರಲು ಉದ್ದೇಶಿಸಿರುವ ಔದ್ಯಮಿಕ ವಿವಾದ ಕಾನೂನು, ಗುತ್ತಿಗೆ ಕಾರ್ಮಿಕರ ರದ್ದತಿ ಮತ್ತು ನಿಯಂತ್ರಣ ಕಾನೂನು, ಕಂಪನಿ ಕಾನೂನಿಗೆ ತಿದ್ದುಪಡಿಗಳು, ಭವಿಷ್ಯ ನಿಧಿ ಕಡಿತ ಹಾಗೂ ಇತರ ಕಾರ್ಮಿಕ ವರ್ಗದ ಮೇಲೆ ಉಂಟುಮಾಡುವ ಅತ್ಯಂತ ದುಷ್ಪರಿಣಾಮಗಳು ಮತ್ತು ಆತಂಕಗಳನ್ನು ಪ್ರಧಾನಿಯವರಿಗೆ ಕಾರ್ಮಿಕ ಮುಖಂಡರು ವಿವರಿಸಿದರು. ಎಲ್ಲಾ ವಿಷಯಗಳ ಬಗ್ಗೆ ಕೇಳಿದ ಪ್ರಧಾನಿ ವಾಜಪೇಯಿ ಐ.ಎಲ್.ಸಿ. ಸಭೆಯಲ್ಲಿ ಪ್ರತಿಕ್ರಿಯಿಸುವುದಾಗಿ ಹೇಳಿದರು.

ಪ್ರಧಾನಿಗಳ ಕಪಟ ನಾಟಕ

ಆದರೆ ಐಎಲ್‌ಸಿ ಸಭೆಯಲ್ಲಿ ವಾಜಪೇಯಿ ಅತ್ಯಂತ ಕಾರ್ಮಿಕ ವಿರೋಧಿ ಅಕ್ರಮಣಕಾರಿಯಾದ ಭಾಷಣ ಮಾಡಿದರು. ವಿದೇಶಿ ಬಹುರಾಷ್ಟ್ರೀಯ ಸಂಸ್ಥೆಗಳ ಹಾಗೂ ಹಿರೇ ಬಂಡವಾಳಿಗರಿಗೆ ಅನುಕೂಲ ಮಾಡುವ, ಮುಂದುವರೆದ ದೇಶಗಳಾದ ಅಮೇರಿಕಾ, ಜಪಾನ್ ಮುಂತಾದ ದೇಶಗಳ ಕಪಿ ಮುಷ್ಠಿಯಲ್ಲಿ ಕಾರ್ಯನಿರತವಾಗಿರುವ ಡಬ್ಲ್ಯೂ.ಟಿ.ಓ. ವಿಶ್ವ ಬ್ಯಾಂಕ್, ಐ.ಎಂ.ಎಫ್ ನಿರ್ದೇಶಿತ ಜಾಗತೀಕರಣ-ಖಾಸಗೀಕರಣ -ಉದಾರೀಕರಣ ನೀತಿಗಳನ್ನು ಜಾರಿಗೊಳಿಸುವುದಾಗಿ ಹೇಳಿದರು. ಪ್ರಧಾನ ಮಂತ್ರಿಗಳು ಅವರ ಭಾಷಣದಲ್ಲಿ ಭಾರತದ ಕಾರ್ಮಿಕರ ಹಾಗೂ ಜನತೆಯ ಬಗ್ಗೆ ಮೊಸಳೆ ಕಣ್ಣೀರು ಸುರಿಸುವುದನ್ನು ಮರೆಯಲಿಲ್ಲ. ಅವರು ಹೀಗೆಂದರು "ಮಿಲಿಯಗಟ್ಟಲೆ ಭಾರತೀಯರು ಹೊಟ್ಟೆಗೆ ಕೂಳಿಲ್ಲದೆ ಮಲಗುತ್ತಿದ್ದಾರೆ. ಅವರ ತಲೆಯ ಮೇಲೆ ಒಂದೂ ಸೂರು ಇಲ್ಲ ಮತ್ತು ಮೂಲಭೂತ ಕನಿಷ್ಟ ಅವಶ್ಯಕತೆಗಳಿಂದ ವಂಚಿತರಾಗಿದ್ದಾರೆ. ಅಲ್ಲದೇ ಅದರಲ್ಲೂ ಯುವಜನತೆ ನಿರುದ್ಯೋಗದ ಪೆಡಂಭೂತದ ಪೀಡೆಯಿಂದ ನರಳುತ್ತಿದ್ದಾರೆ."

ಇದೇ ಸಭೆಯಲ್ಲಿ ಹಾಜರಿದ್ದ ಕೇಂದ್ರ ಸರಕಾರದ ಕಾರ್ಮಿಕ ಸಚಿವರಾದ ಸತ್ಯನಾರಾಯಣ ಜತಿಯಾ ಅವರು ಪ್ರಧಾನಮಂತ್ರಿಗಳ ಸಮಕ್ಷಮದಲ್ಲೇ ಮಾತನಾಡುತ್ತಾ ಅವರ ಕಪಟ ಅನುಕಂಪವನ್ನು ವ್ಯಕ್ತಪಡಿಸಿದರು. "ದೇಶದಲ್ಲಿ ಕಾರ್ಮಿಕರನ್ನು ದಿನಗೂಲಿಗಳಾಗಿ ಮತ್ತು ಗುತ್ತಿಗೆ ಆಧಾರಿತ ಪದ್ಧತಿಗಳಲ್ಲಿ ದುಡಿಸಿಕೊಳ್ಳುತ್ತಿರುವುದು ದಿನೇ ದಿನೇ ಹೆಚ್ಚಾಗುತ್ತಿದ್ದು ಆತಂಕ ಉಂಟುಮಾಡುತ್ತಿದೆ.

ಕೆಲಸದಿಂದ ರಿಟ್ರೆಂಚ್ ಆದ ಕಾರ್ಮಿಕರಿಗೆ ವರ್ಷದ ಸೇವೆಗೆ 15 ದಿನ ಬದಲಾಗಿ 45 ದಿನಗಳ ಪರಿಹಾರದ ಮೂಗಿಗೆ ತುಪ್ಪ ಹಚ್ಚುವ ತಂತ್ರವನ್ನು ಘೋಷಿಸಲಾಗಿದೆ. ಮತ್ತೊಂದೆಡೆ **ರೂ. 6500/- ವೇತನ ಪಡೆಯುವವರು ಕಾರ್ಮಿಕರೇ ಅಲ್ಲ ಎಂಬ ತಿದ್ದುಪಡಿಯನ್ನು ಔದ್ಯಮಿಕ ವಿವಾದಗಳ ಕಾನೂನಿನ ಕಲಂ 2(5)ಗೆ ತರಲು ಉದ್ದೇಶಿಸಲಾಗಿದೆ.**

ಬಳಸಿ ಬಿಸಾಡುವ ಕಾನೂನು

ಗುತ್ತಿಗೆ ಕಾರ್ಮಿಕರ (ರದ್ದತಿ ಹಾಗೂ ನಿಯಂತ್ರಣ) ಕಾನೂನಿಗೆ ತಿದ್ದಪಡಿ ಮಾಡಿ ಈಗ ವರ್ಷ ವಿಡೀ ನಿರ್ವಹಿಸಬೇಕಾದ ಸ್ವರೂಪ ವಿರುವ ಕೆಲಸಗಳನ್ನು ಗುತ್ತಿಗೆ ಅಧಾರದಲ್ಲಿ ಮಾಡಬಾರದೆಂಬ ನಿಯಮ ಮನವಿಯನ್ನು ಕಸದ ಬುಟ್ಟಿಗೆ ಹಾಕಿ ಕೇಂದ್ರ ಸರಕಾರ ಆಕ್ರಮಣಕಾರಿ ಸರ್ವಾಧಿಕಾರಿ ಧೋರಣೆಯಲ್ಲಿ ನಡೆದಿದೆ.

ಕೇಂದ್ರ ಸರಕಾರ ಭವಿಷ್ಯನಿಧಿಯ ಮೇಲಿನ ಬಡ್ಡಿದರವನ್ನು ಪ್ರತಿವರ್ಷ ಕಡಿತ ಮಾಡುತ್ತಿದೆ. ಕಳೆದ ವರ್ಷ ಶೇ. 12 ರಿಂದ ಶೇ. 11ಕ್ಕೆ ಕಡಿತಮಾಡಲಾಗಿತ್ತು. ಆ ಸಂದರ್ಭದಲ್ಲೂ ಇಡೀ ಕೇಂದ್ರ ಭವಿಷ್ಯನಿಧಿ ಧರ್ಮದರ್ಶಿಗಳ ಸಭೆ ಕಾರ್ಮಿಕ ಮಂತ್ರಿಗಳ ಅಧ್ಯಕ್ಷತೆಯಲ್ಲೇ ಸರ್ವಾನುಮತದಿಂದ ಈ ಕಡಿತದ ದುಷ್ಕೃತ್ಯವನ್ನು ವಿರೋಧಿಸಲಾಗಿತ್ತು. ಆಗಲೂ ಅತ್ಯಂತ ಸರ್ವಾಧಿಕಾರಿ ರೀತಿಯಲ್ಲಿ ಕಡೆಗಣಿಸಲಾಗಿತ್ತು. ಆರ್ಥಿಕ ಮಂತ್ರಿಗಳೇ ಕಾರ್ಮಿಕ ಖಾತೆಯ ನೀತಿ ನಿರ್ಧಾರಗಳನ್ನು ಪ್ರಕಟಿಸುತ್ತಿದ್ದಾರೆ.

ಹಕ್ಕು ಕಿತ್ತುಕೊಳ್ಳುವ ಪಿತೂರಿಗಳ ವಿರುದ್ಧ ಹೆಜ್ಜೆ ಹೆಜ್ಜೆಗೂ ಹೋರಾಡಲು ಎಲ್ಲ ದುಡಿವ ಜನರ ನಿರ್ಧಾರ


ಸುರಕ್ಷಿತ ಹಾಗೂ ಸುಭದ್ರ ಕೆಲಸದ ಪರಿಸ್ಥಿತಿಗಳು ಕಡಿಮೆ ಆಗುತ್ತಿವೆ. ಅಲ್ಲದೇ ಅಸಾಂಪ್ರದಾಯಿಕ ರಂಗದಲ್ಲಿ ಕೆಲಸದ ಅಭದ್ರತೆ ಹಾಗೂ ಸುರಕ್ಷಿತವಲ್ಲದ ಕೆಲಸದ ಸ್ಥಿತಿ ಬೆಳೆಯುತ್ತಿದೆ. ಅತ್ಯಂತ ಹೆಚ್ಚು ಅಸಂಘಟಿತ ದುಡಿಯುವ ಜನರು ವಾಸಮಾಡುವ ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚು ಗಂಭೀರವಾಗಿದೆ ಮತ್ತು ಖಾಯಂ ಕೆಲಸ ಎಂಬುದು ಅತ್ಯಂತ ವಿರಳವಾಗುತ್ತಿದೆ. ನಮ್ಮ ದುಡಿಯುವ ಜನ ಜಗತ್ತಿನ ಅತ್ಯಂತ ಕೆಟ್ಟ ದುಸ್ಥಿತಿಗಳನ್ನು ಎದುರಿಸುತ್ತಿದ್ದಾರೆ" ಎಂದಿದ್ದಾರೆ.

ಈ ಹಿನ್ನಲೆಯಲ್ಲೆ ಮಾತನಾಡಿದ ಪ್ರಧಾನ ಮಂತ್ರಿಗಳು ಇಂತಹ ಸ್ಥಿತಿಯಿಂದ ಪರಿಹಾರ ಕಾಣಲು ನಾವು "ಜಾಗತೀಕರಣದ ನೀತಿಗಳನ್ನು ಮುಂದುವರೆಸಿ ಸುಧಾರಣೆಗಳನ್ನು ಜಾರಿಗೊಳಿಸುವುದು ಬಹಳ ಅಗತ್ಯ ಹಾಗೂ ತುರ್ತಾಗಿ ತೀವ್ರಗೊಳಿಸುವುದನ್ನು ಕಡೆಗಣಿಸಬಾರದು. ಜಗತ್ತು ನಮಗಾಗಿ ಕಾಯುವುದಿಲ್ಲ. ಆದ್ದರಿಂದ ಈ ಸುಧಾರಣೆಗಳನ್ನು ಅರ್ಧಮನಸ್ಸಿನಿಂದ ಮತ್ತು ನಿಧಾನವಾಗಿ ಜಾರಿಗೊಳಿಸುವುದು ಸಲ್ಲದು ಎಂದು ಹಲಿಬಿದ್ದಾರೆ.

ಪ್ರಸನ್ನಕುಮಾರ್

ಔದ್ಯಮಿಕ ವಿವಾದಗಳ ಕಾಯ್ದೆಗೆ ತಿದ್ದುಪಡಿ

ಈ ಕಾರಣಕ್ಕಾಗಿಯೇ ಕೇಂದ್ರ ಸರಕಾರ ಮಾಡಲು ಉದ್ದೇಶಿಸಿರುವ ಔದ್ಯಮಿಕ ವಿವಾದಗಳ ಕಾಯ್ದೆ 1947ರ ಅದ್ಯಾಯ 5 ಬಿ. ಕಲಂ 25 ಕೆ ತಿದ್ದುಪಡಿ. *ಈಗ 100 ಕ್ಕೂ ಹೆಚ್ಚು ಕಾರ್ಮಿಕ ಕೆಲಸ ಮಾಡುವ ಕಾರ್ಖಾನೆಗಳು, ಸಂಸ್ಥೆಗಳು ಲೇ- ಆಫ್ ಮಾಡಲು, ರಿಟ್ರೆಂಚ್‌ಮೆಂಟ್ ಮಾಡಲು, ಮುಚ್ಚಲು ಕಡ್ಡಾಯವಾಗಿ ಪರವಾನಿಗೆ ಪಡೆಯಬೇಕಾಗಿ ರುವುದನ್ನು ಬದಲಾಯಿಸಿ 1000ಕ್ಕೂ ಹೆಚ್ಚು ಕಾರ್ಮಿಕರಿ ರುವ ಕಾರ್ಖಾನೆ ಸಂಸ್ಥೆಗಳಿಗೆ ಮಾತ್ರ ಅನ್ವಯ ವಾಗುವಂತೆ ಮಾಡಲು ಹೊರಟಿದ್ದಾರೆ.* ಆದರೆ ಇಡೀ ಕರ್ನಾಟಕದಲ್ಲಿ ಕೇವಲ 50 ಸಂಸ್ಥೆಗಳಿಗೆ ಮಾತ್ರ ಇದು ಅನ್ವಯವಾಗುತ್ತದೆ. ಇದರ ಜೊತೆ ಬದಲಾಯಿಸಿ ಎಲ್ಲ ತರಹದ ಖಾಯಂ ಕೆಲಸಗಳನ್ನು ಗುತ್ತಿಗೆ ಆಧಾರದಲ್ಲಿ ಮಾಡಲು ಮುಕ್ತ ಅವಕಾಶ ನೀಡುವ ತಿದ್ದುಪಡಿ ತರಲಾಗುತ್ತಿದೆ. ಈ ತಿದ್ದುಪಡಿಯಿಂದ ಹೈರ್ ಅ್ಯಂಡ್ ಫೈರ್ (ಬಳಸಿ-ಬಿಸಾಕು) ಮಾಡಲು ಮಾಲೀಕವರ್ಗಕ್ಕೆ ಸ್ವಾತಂತ್ರ್ಯ ನೀಡಿದಂತಾಗುತ್ತದೆ.



ಈ ಕಾರ್ಮಿಕ ವಿರೋಧಿ ತಿದ್ದುಪಡಿಗಳನ್ನು ತಡೆಹಿಡಿಯಲು ಕೇಂದ್ರಸರಕಾರ ಒಪ್ಪಿದೆ ಎಂದು ಬಿ.ಎಂ.ಎಸ್. ಮುಖಂಡರು ಹೇಳಿಕೊಂಡಿರುವುದನ್ನು ಪ್ರಧಾನಮಂತ್ರಿ ಹಾಗೂ ಕಾರ್ಮಿಕ ಮಂತ್ರಿಗಳು ಈ ಸಂದರ್ಭದಲ್ಲೇ ಸ್ಪಷ್ಟವಾಗಿ ನಿರಾಕರಿಸಿದ್ದಾರೆ. ಎನ್.ಡಿ.ಎ ಕೇಂದ್ರ ಸರಕಾರವೇ ನೇಮಿಸಿದ ರವೀಂದ್ರವರ್ಮ ಅಧ್ಯಕ್ಷತೆಯ 2ನೇ ರಾಷ್ಟ್ರೀಯ ಕಾರ್ಮಿಕ ಆಯೋಗವು ಇನ್ನೂ ಅಧ್ಯಯನ ಮಾಡುತ್ತಿರುವ ಮೊದಲೇ ತರಾತುರಿಯಲ್ಲಿ ಕಾನೂನು ತಿದ್ದುಪಡಿಗಳನ್ನು ಪಾರ್ಲಿಮೆಂಟಿನಲ್ಲಿ ನುಗ್ಗಿಸಿ ಪಾಸು ಮಾಡಲು ಹವಣಿಸಲಾಗುತ್ತಿದೆ.

ಕಾರ್ಮಿಕರ ಉಳಿತಾಯಕ್ಕೆ ಕತ್ತರಿ

ಕಾರ್ಮಿಕರು ಬೆವರು ಸುರಿಸಿ ದುಡಿದ ಹಣದಲ್ಲಿ ಉಳಿತಾಯ ಮಾಡಲಾಗುವ ಭವಿಷ್ಯ ನಿಧಿ ಹಣಕ್ಕೆ ಇದುವರೆಗೆ ನೀಡುತ್ತಿರುವ ಶೇ. 12ರ ಬಡ್ಡಿಯನ್ನು ಶೇ. 2.5 ಕಡಿತಮಾಡಿ ಶೇ. 9.5ಕ್ಕೆ ಇಳಿಸಲಾಗಿದೆ. ಇದೇ ಕೇಂದ್ರ ಸರಕಾರದ ಕಾರ್ಮಿಕ ಮಂತ್ರಿಯ ಅಧ್ಯಕ್ಷತೆಯಲ್ಲಿರುವ ಕೇಂದ್ರೀಯ ಭವಿಷ್ಯನಿಧಿ ಧರ್ಮದರ್ಶಿಗಳ ಸಮಿತಿ ಈ ಕಡತವನ್ನು ವಿರೋಧಿಸಿ ಕನಿಷ್ಠ ಶೇ.10.25 ರಷ್ಟಾದರೂ ಬಡ್ಡಿ ಕೊಡಬೇಕೆಂದು

ಕಾರ್ಮಿಕ ಖಾತೆ ಮತ್ತು ಅದಕ್ಕೊಂದು ಮಂತ್ರಿ ಕೇವಲ ಭಾಷಣಕ್ಕೆ ಮಾತ್ರ ಉಳಿಸಲಾಗಿದೆ. ಸರಕಾರದ ಈ ಧೋರಣೆಯನ್ನು ಪ್ರಶ್ನಿಸಿ ಪಾರ್ಲಿಮೆಂಟಿನ ಸಬಾರ್ಡಿನೇಟ್ ಲೆಜಿಸ್ಲೇಷನ್ ಕಮಿಟಿಯ ಮುಂದೆ ಎಲ್ಲ ಟ್ರೇಡ್ ಯೂನಿಯನ್‌ಗಳು ಅರ್ಜಿಸಲ್ಲಿಸಿ ಸವಾಲು ಹಾಕಿವೆ.

ಅಮೂಲ್ಯ ಆಸ್ತಿಗಳ ಮಾರಾಟ

ಅಲ್ಲದೇ ಸಾರ್ವಜನಿಕ ಕ್ಷೇತ್ರದ ಕೈಗಾರಿಕೆಗಳನ್ನು ಹುಚ್ಚಾಪಟ್ಟೆ ಖಾಸಗೀಕರಣಗೊಳಿಸಲು ಹಗರಣಕಾರಿ ರೀತಿಯಲ್ಲಿ ಎನ್.ಡಿ.ಎ. ಸರಕಾರ ಪ್ರಯತ್ನಿಸುತ್ತಿದೆ. ಈ ಹಿಂದೆ ರೋಗ ಗ್ರಸ್ತ ಕೈಗಾರಿಕೆಗಳನ್ನು ಖಾಸಗೀಕರಿಸುವುದಾಗಿ ಭಾಷಣ ಮಾಡುತ್ತಿದ್ದ ಸರಕಾರ ಈಗ ಲಾಭದಾಯಕ ಸಂಸ್ಥೆಗಳನ್ನು ಅತ್ಯಂತ ಅಗ್ಗದ ಧರಕ್ಕೆ ಬ್ಯಾಲ್ಕೊ ಹಾಗೂ ಕಂಪನಿ ಮಾರ್ಡನ್ ಫುಡ್ ಕಂಪನಿಗಳನ್ನು ಹಗರಣಕಾರಿ ರೀತಿಯಲ್ಲಿ ಖಾಸಗೀ ಮಾಲಿಕರಿಗೆ ಒಪ್ಪಿಸಲಾಗುತ್ತಿದೆ. ಸಾರ್ವಜನಿಕ ಕ್ಷೇತ್ರಗಳನ್ನು ಹುಚ್ಚಾಪಟ್ಟೆ ಮಾರುವ ಕೇಂದ್ರ ಸರಕಾರ ಆ ಸಂಸ್ಥೆಗಳಿಂದ ವರ್ಷಕ್ಕೆ ರೂ. 44000 ಕೋಟಿ ಖಜಾನೆಗೆ ಬರುವ ಆದಾಯವನ್ನು ಯಾವ ರೀತಿ ತುಂಬುತ್ತದೆ? ಖಂಡಿತ



Printed & Published by Communist Party of India(Marxist), ...

...ಮಾನ್ಯರ ತಲೆಯಮೇಲೆ ಹೊರೆ ಹಾಕುವ ...ವಷ್ಟೇ ಸಾಧ್ಯ.

...ಕಡಿತದ ಕರಾಳ ನಿರ್ಧಾರ

...ರ್ಷಕ್ಕೆ ಒಂದು ಕೋಟಿ ಉದ್ಯೋಗ ...ವ ಭರವಸೆ ಮೇರೆಗೆ ಅಧಿಕಾರಕ್ಕೆ ಬಂದ ...ಪೇಯಿ ಸರಕಾರವು ಕೇಂದ್ರ ಸರಕಾರದ ...ರ ಶೇ. 10 ಅಂದರೆ 35 ಲಕ್ಷ ...ಗಳನ್ನು ರದ್ದುಗೊಳಿಸುತ್ತಿದೆ. ಕೇಂದ್ರ ...ರದ ವೆಚ್ಚಗಳ ನಿರ್ವಹಣಾ ಆಯೋಗಕ್ಕೆ ...ಸರಕಾರವು ಹಲವು ಸೂಚನೆಗಳನ್ನು ನೀಡಿ ...ಡಿಮೆಮಾಡಲು ಉದ್ದೇಶಿಸಿದೆ. ಅದರಲ್ಲಿ ...ರದ ನೇಮಕಾತಿ ನಿಯಮಗಳಿಗೆ ತಿದ್ದುಪಡಿ ... ಇನ್ನುಮುಂದೆ ನೇಮಕವಾಗುವ ನೌಕರನು

...ಸವಲತ್ತು ...ಪಡಿಗಳು

...ಲ ಹತ್ತು ವರ್ಷಗಳಿಗೆ ಮಾತ್ರ ನೇಮಕ. ...ಂತರ ಸಂಭಳವಿಲ್ಲದೇ 5 ವರ್ಷ ...ಯುಲ್ಲಿರಬೇಕು. ಆ ನಂತರ ಆ ನೌಕರನ ಗತಿ ... ಸಂಭಳವಿಲ್ಲದೆ ರಜೆ ಇದೊಂದು ಹೊಸ ...ದರಿಯ ಕಲ್ಯಾಣ ಕಾರ್ಯಕ್ರಮವಾಗಿದೆ. ಬೆಲೆ ...ಯಾಗುವುದರಿಂದ ದುಡಿಯುವ ಜನರ ಜೀವನ ...ಷ್ಟ ಭದ್ರತೆಗಾಗಿ ಹಲವಾರು ಹೋರಾಟಗಳಿಂದ ...ದುಕೊಂಡ ಬೆಲೆ ಏರಿಕೆಯ ಹೊರೆಗೆ ...ಹಾರವಾಗಿ 'ತುಟ್ಟಿಭತ್ಯೆ' ನೀಡುವ ವ್ಯವಸ್ಥೆ ...ಯಲ್ಲಿದೆ. ಬೆಲೆ ಏರಿಕೆಯನ್ನು ನಿಯಂತ್ರಣ ...ಡಲು ಯಾವುದೇ ಪ್ರಯತ್ನ ಮಾಡದೇ ಸರಕಾರ ...ನ್ನು ಮುಂದೆ ತುಟ್ಟಿಭತ್ಯೆ 5 ವರ್ಷ ಇಲ್ಲ. ಮುಂದೆ ...ತನ ಆಯೋಗಗಳೇ ಬೇಡ ಹಾಗೂ ಪಿಂಚಣಿ ... ಮುಂತಾಗಿ ಅಕ್ರಮಣವನ್ನು ಕಾರ್ಮಿಕರ ಮೇಲೆ ...ಡಲಾಗುತ್ತಿದೆ. ರಕ್ಷಣ ಕೈಗಾರಿಕೆಯನ್ನು ...ಸಗೀಕರಣಗೊಳಿಸಿ ದೇಶದ ಸ್ವಾತಂತ್ರ್ಯಕ್ಕೆ ...ಂಕದ ಸ್ಥಿತಿ ನಿರ್ಮಾಣ ಮಾಡಲಾಗಿದೆ.

... ಭಾರೀ ಸ್ವದೇಶಿ ಬೊಬ್ಬೆಯೊಂದಿಗೆ ಅಧಿಕಾರಕ್ಕೆ ...ದ ಬಿಜೆಪಿಯ ಸರಕಾರದ ಸಾಮ್ರಾಜ್ಯಶಾಹಿಗೆ ...ಣಾಗುವ ನೀತಿ ಇದಾಗಿದೆ. ಕೇವಲ ಆರ್ಥಿಕ ...ಸಾಮಗಿರಿಯಷ್ಟೇ ಅಲ್ಲ ರಾಜಕೀಯ ಹಾಗೂ ...ಶದ ಸ್ವಾತಂತ್ರ್ಯ ಸ್ವಾವಲಂಬನೆಯನ್ನೇ ಸಾಮ್ರಾಜ್ಯ ...ಹಿಗಳ ಪಾದಕ್ಕೆ ಅರ್ಪಣೆ ಮಾಡಲಾಗುತ್ತಿದೆ.

...ದಾರೀಕರಣದಲ್ಲಿ ಹಿಂದೆ ಬೀಳದ ಕೃಷ್ಣ

... ಕರ್ನಾಟಕ ರಾಜ್ಯ ಸರಕಾರವು ನಾನೇನು ಕಡಿಮೆ ...ಲ್ಲ. 1991ರಲ್ಲಿ ಆರ್ಥಿಕ ಉದಾರೀಕರಣ ...ರಂಭಿಸಿದವರು ಹಾಗೂ WTO ಗೆ ...ಮಾಡಿದವರು ನಾವು ಕಾಂಗ್ರೇಸಿಗರು ಆದ್ದರಿಂದ ...ವು ಕೇಂದ್ರ ಸರಕಾರಕ್ಕಿಂತಲೂ ಹೆಚ್ಚು ಧಾಳಿ ...ಡುವುದು ಗೊತ್ತಿದೆ ಎಂಬ ಮಾರ್ಗದಲ್ಲಿ ...ಸ್.ಎಂ.ಕೃಷ್ಣ ಸರಕಾರ ಹೊಸ ಕೈಗಾರಿಕಾ ...ತಿಯನ್ನು ಪ್ರಕಟಿಸಿದೆ.

... ಅದರಂತೆ ಶೇ. 8 ರಿಂದ 9ರ ಬೆಳವಣಿಗೆ ...ರವನ್ನು ಮುಂದಿನ ದಶಕದಲ್ಲಿ ಸಾಧಿಸುವ ಗುರಿ ...ಕೊಂದಲಾಗಿದೆ. ಇದಕ್ಕಾಗಿ ಮುಖ್ಯವಾಗಿ ...ಪಾರದ ವಾತಾವರಣವನ್ನು ಅನಿಯಂತ್ರಣಕ್ಕೆ ...ವಕಾಶ ಮಾಡುವದರ ಮೂಲಕ ...ಧಿಸಲಾಗುವುದೆಂದು ಕೊಚ್ಚಿಕೊಂಡಿದ್ದಾರೆ.

...ರ್ಮಿಕ ಇಲಾಖೆ ಮುಚ್ಚಲು ಹುನ್ನಾರ

... ಹಿನ್ನಲೆಯಲ್ಲಿ ಕಾರ್ಮಿಕ ಇಲಾಖೆಯನ್ನೇ ...ಚ್ಚಿಬಿಡುವ ದಿಶೆಯಲ್ಲಿ ಹುನ್ನಾರ ನಡೆದಿದೆ. ಇನ್ನು ...ಮುಂದೆ ಉದ್ಯೋಗ ಮಿತ್ರ ಮೂಲಕ ...ಕಗವಾಕ್ಷಿ ವ್ಯವಸ್ಥೆಯಿಂದ ಕಾರ್ಯನಿರ್ವಹಿಸ ...ಾಗುವುದು. ಅಲ್ಲದೇ ರಾಜ್ಯದ ಕಾರ್ಮಿಕ ...ಮಂತ್ರಿಗಳ ಪ್ರಕಾರ ರಾಜ್ಯದಲ್ಲಿ ಕಾರ್ಮಿಕರಿಗೆ ...ಹಳ ತರಬೇತಿ ನೀಡಲಾಗಿದೆ. ಆದ್ದರಿಂದ ...ರ್ಮಿಕರಲ್ಲದ ಕಾರ್ಮಿಕ ಮುಖಂಡರು ಇನ್ನೂ ...ಮುಂದೆ ಸಂಘಗಳ ಮುಖಂಡರಾಗುವುದು ...ಗತ್ಯವಿಲ್ಲ. ಕಾರಣ ವೃತ್ತಿ ಸಂಘಗಳ ಕಾನೂನಿಗೆ ...ದ್ದುಪಡಿ ಮಾಡಲು ಅಪೇಕ್ಷಿಸಿದ್ದಾರೆ. ಮಾಲೀಕರು

9ನೇ ಪುಟಕ್ಕೆ

ಆಳುವವರ ಆಕ್ರಮಣಗಳಿಗೆ ಐಕ್ಯ ಹೋರಾಟವೊಂದೇ ಉತ್ತರ

ಜಾಗತೀಕರಣ-ಖಾಸಗೀಕರಣವನ್ನು ಅಪ್ಪಿಕೊಂಡಿರುವ ಕೇಂದ್ರ-ರಾಜ್ಯ ಸರ್ಕಾರಗಳು ಕಾರ್ಮಿಕವರ್ಗದ ಮೇಲೆ ಇನ್ನೂ ಭಾರೀ ಭೀಕರ ದಾಳಿಯನ್ನು ಯೋಜಿಸಿವೆ. ಇವುಗಳ ವಿರುದ್ಧ ಎಲ್ಲರೂ ಜಾಗೃತರಾಗಿ ಐಕ್ಯ ಹೋರಾಟ ಕಟ್ಟಿ ಬೆಳೆಸುವ ಮಹತ್ವದ ಬಗ್ಗೆ ಇಲ್ಲಿ ಚರ್ಚಿಸುತ್ತಿದ್ದಾರೆ ರಾಜ್ಯದ ಹಿರಿಯ ನಾಯಕರಾದ ಎಸ್.ಸೂರ್ಯನಾರಾಯಣ ರಾವ್‌ರವರು



ಕಳೆದ 10 ವರ್ಷಗಳಿಂದ ಕೇಂದ್ರ ಸರ್ಕಾರದ ಹೊಸ ಆರ್ಥಿಕ ನೀತಿಯ ವಿರುದ್ಧ ಸಿಐಟಿಯು ಹೋರಾಟ ನಡೆಸುತ್ತಲೇ ಬಂದಿದೆ. ಹಲವು ಬಾರಿ ರಾಷ್ಟ್ರವ್ಯಾಪಿ ಮುಷ್ಕರವನ್ನು ನಡೆಸಿದೆ. ಇದಕ್ಕೆ ಇತರೆ ಕಾರ್ಮಿಕ ಸಂಘಟನೆಗಳು, ಸಾಮೂಹಿಕ ಸಂಘಟನೆಗಳು ಬೆಂಬಲಿಸಿವೆ. ಹೋರಾಟದಲ್ಲಿ ಭಾಗವಹಿಸಿವೆ.

ಆದರೆ ಇಂದು ನಡೆಯುತ್ತಿರುವ ಹೋರಾಟ ಹಲವಾರು ಕಾರಣಗಳಿಂದ ಪ್ರಮುಖವಾದುದು. 5500 ಕೋಟಿ ಬೆಲೆ ಬಾಳುವ, ಅತ್ಯಂತ ಲಾಭದಾಯಕವಾಗಿ ಕೆಲಸ ನಿರ್ವಹಿಸುತ್ತಿದ್ದ ಭಾರತ ಅಲ್ಯೂಮಿನಿಯಂ ಕಂಪೆನಿಯನ್ನು ಅಗ್ಗದ ಬೆಲೆ 550 ಕೋಟಿ ರೂ ಗೆ ಖಾಸಗಿ ಮಾರಾಟ ಮಾಡಿದಾಗಲೆ ಐಕ್ಯಹೋರಾಟದ ಕಹಳೆ ಆರಂಭಗೊಂಡಿತ್ತು. ಅಂದು ಬಿ.ಎಂ.ಎಸ್. ಸಿಐಟಿಯು, ಐ.ಎನ್.ಟಿ.ಯು.ಸಿ ಮತ್ತಿತರ ಸಂಘಟನೆಗಳಿಗೆ ಸೇರಿದ ಬಾಲ್ಕೋ ಕಾರ್ಮಿಕ ಸಂಘಟನೆಗಳು 2 ತಿಂಗಳಿಗೂ ಹೆಚ್ಚು ಕಾಲ ಐಕ್ಯ ಹೋರಾಟ ನಡೆಸಿದರು. ಇದಕ್ಕೆ ದೇಶ ವ್ಯಾಪಿ ಬೆಂಬಲ ದೊರೆಯಿತು.

ಕೇಂದ್ರ ಸರಕಾರದ ಆರ್ಥಿಕ ನೀತಿಯಿಂದ ದೊಡ್ಡ ಪ್ರಮಾಣದಲ್ಲಿ ಕೈಗಾರಿಕೆಗಳು ಮುಚ್ಚಿದುದರಿಂದಾಗಿ ಕಾರ್ಮಿಕರನ್ನು ಬೀದಿಗೆ ತಳ್ಳುವುದರ ವಿರುದ್ಧ ಏಪ್ರಿಲ್ 16 ರಂದು ಎಲ್ಲಾ ಕಾರ್ಮಿಕ ಸಂಘಟನೆಗಳು ಗುಜರಾತ್ ಬಂದ್ ನಡೆಸಿದವು. ಏಪ್ರಿಲ್ 25 ರಂದು ಎನ್ರಾನ್ ಒಪ್ಪಂದದ ವಿರುದ್ಧ ಕೇಂದ್ರ ಸರ್ಕಾರದ ಆರ್ಥಿಕ ನೀತಿಯ ವಿರುದ್ಧ ಎಲ್ಲಾ ಕಾರ್ಮಿಕ ಸಂಘಟನೆಗಳು ಶಿವಸೇನೆಯೂ ಸೇರಿದಂತೆ, ಬಂದ್ ನಡೆಸಿದವು. ಸಂಯುಕ್ತ ಮಹಾರಾಷ್ಟ್ರ ಚಳುವಳಿ ನಡೆದಾಗಲೂ ಇಷ್ಟೊಂದು ಯಶಸ್ವಿ ಬಂದ್ ಆಗಿರಲಿಲ್ಲ.

ಇಂತಹ ಐಕ್ಯ ಹೋರಾಟಗಳ ಹಿನ್ನೆಲೆಯಲ್ಲಿ ಕೇಂದ್ರ ಕಾರ್ಮಿಕ ಸಂಘಟನೆಗಳಾದ ಸಿಐಟಿಯು, ಎಐಟಿಯುಸಿ, ಬಿ.ಎಂ.ಎಸ್. ಐಎನ್‌ಟಿಯುಸಿ, ಹೆಚ್.ಎಂ.ಎಸ್., ಹೆಚ್.ಎಂ.ಕೆ.ಪಿ. ಯುಟಿಯುಸಿ, ಎಐಸಿಸಿಟಿಯು ಇತ್ಯಾದಿ, ಸಭೆ ನಡೆಸಿ ಈ ಕೆಳಕಂಡ ಐದು ಅಂಶಗಳ ಮೇಲೆ ಐಕ್ಯ ಚಳುವಳಿ ನಡೆಸಲು ನಿರ್ಧರಿಸಿದವು.

1. ರಕ್ಷಣ ವಲಯವೂ ಸೇರಿದಂತೆ, ಸಾರ್ವಜನಿಕ ಉದ್ದಿಮೆಗಳ ಖಾಸಗೀಕರಣದ ವಿರುದ್ಧ
2. ಮಾಲಿಕರಿಗೆ ಅನುಕೂಲವಾಗುವಂತೆ ಕಾರ್ಮಿಕ ಕಾನೂನುಗಳ ತಿದ್ದುಪಡಿಯ ವಿರುದ್ಧ.
3. ಕೃಷಿ ಕೂಲಿಕಾರರ ಭದ್ರತೆಗಾಗಿ ಸಮಗ್ರ ಕಾಯಿದೆ.
4. ಕೃಷಿ , ಕೈಗಾರಿಕೆ ಮತ್ತು ರಾಷ್ಟ್ರೀಯ ಹಿತಾಸಕ್ತಿಗೆ ಮಾರಕವಾದ ಪ್ರಮಾಣಾತ್ಮಕ ನಿರ್ಭಂಧ (QR) ರದ್ದತಿಗಾಗಿ.
5. ನಿರುದ್ಯೋಗವನ್ನು ಹೆಚ್ಚಿಸುವ ನೀತಿಗಳ ವಿರುದ್ಧ.

ಈ ಚಳುವಳಿಯ ಪ್ರಥಮ ಹಂತವಾಗಿ, ರಾಜ್ಯದ ರಾಜಧಾನಿ ಮತ್ತು ಜಿಲ್ಲಾ ಕೇಂದ್ರಗಳಲ್ಲಿ, ಕೈಗಾರಿಕಾ ಕೇಂದ್ರಗಳಲ್ಲಿ ಸಮಾವೇಶಗಳನ್ನು ನಡೆಸುವುದಲ್ಲದೆ ಪಾರ್ಲಿಮೆಂಟ್ ಅಧಿವೇಶನ ಆರಂಭವಾದ ಎರಡನೇ ದಿನ ದೆಹಲಿಯಲ್ಲಿ ಬೃಹತ್ ರ‍್ಯಾಲಿಯನ್ನು ಸಂಘಟಿಸಲು ನಿರ್ಧರಿಸಿದೆ.

ಕರ್ನಾಟಕ ರಾಜ್ಯದಲ್ಲೂ ಈ ಚಳುವಳಿಯನ್ನು ಯಶಸ್ವಿಗೊಳಿಸಲು, ವಿಸ್ತರಗೊಳಿಸಲು, ಕೇಂದ್ರ ಕಾರ್ಮಿಕ ಸಂಘಗಳ ರಾಜ್ಯ ಘಟಕಗಳು ಸಭೆ ಸೇರಿ ಜಿಲ್ಲಾ ಸಮಾವೇಶಗಳನ್ನು ನಡೆಸುತ್ತಾ ಜುಲೈ 12 ರಂದು ಬೆಂಗಳೂರಿನಲ್ಲಿ ರಾಜ್ಯ ಮಟ್ಟದ ಸಮಾವೇಶಕ್ಕೆ ಕರೆ ನೀಡಿದೆ. ಎಲ್ಲಾ ಕಾರ್ಮಿಕ ಸಂಘಟನೆಗಳು ಒಕ್ಕೊರಲಿನಿಂದ ಒಪ್ಪಿಗೆ ನೀಡಿರುವುದು, ಭಾಗವಹಿಸುತ್ತಿರುವುದು ಚಳುವಳಿಯ ಮಹತ್ವವನ್ನು ಸೂಚಿಸುತ್ತದೆ.

ರಕ್ಷಣಾ ವಲಯ ಖಾಸಗೀಕರಣದ ವಿರುದ್ಧ ಮುಷ್ಕರ

ಈ ವರೆಗೆ ಲಾಭದಾಯಕವಾದ ಸಾರ್ವಜನಿಕ ಉದ್ದಿಮೆಗಳನ್ನು ಮಾತ್ರ ಖಾಸಗಿಕರಣಗೊಳಿಸಲು ಹೊರಟಿದ್ದ ಕೇಂದ್ರಸರಕಾರ ಇದೀಗ ರಕ್ಷಣಾ ಸರಕುಗಳ ಉತ್ಪಾದನೆಯನ್ನು ಖಾಸಗೀಕರಣಗೊಳಿಸಲು ಹೊರಟಿದೆ. ಇನ್ನು ಮುಂದೆ ರಕ್ಷಣಾ ಕೇಂದ್ರಕ್ಕೆ ಬೇಕಾದ ಶಸ್ತ್ರಾಸ್ತ್ರಗಳನ್ನು ತಯಾರಿಸುವ ಕಾರ್ಖಾನೆಗಳಲ್ಲಿ ದೇಶೀಯ ಬಂಡವಾಳಗಾರರು ನೂರಕ್ಕೆ ನೂರರಷ್ಟು ಪಾಲು ಹೊಂದಬಹುದು ಮತ್ತು ವಿದೇಶಿ ಉದ್ದಿಮೆದಾರರು ಶೇ 20 ರಷ್ಟು ಪಾಲು ಹೊಂದಬಹುದು. ಈ ಉದ್ದಿಮೆಗಳನ್ನು ಖಾಸಗೀಕರಣಗೊಳಿಸುವುದಾದರೆ, ದೇಶದ ಭದ್ರತೆಗೆ ಅಪಾಯದ ಅಡಿಪಾಯವನ್ನು ಹಾಕುವುದು ಎಂದರ್ಥ. ಇದೊಂದು ದೇಶದ್ರೋಹಿ ಕೆಲಸವೂ ಹೌದು. ಉತ್ಕೃಷ್ಟವಾದ ರೇಡಾರ್‌ಗಳನ್ನು ಬಿಇಎಲ್ ತಯಾರಿಸುತ್ತಿದ್ದರೂ, ಕೇಂದ್ರ ಸರ್ಕಾರವು ರೇಡಾರ್ ಒದಗಿಸಲು ಇಸ್ರೇಲ್‌ಸರ್ಕಾರಕ್ಕೆ ಕೇಳಿದೆ. ಇದೂ ಉದ್ಯಮಕ್ಕೇ ಭಾರಿ ಹೊಡೆತ. ಆದ್ದರಿಂದಲೇ ರಕ್ಷಣಾ ವಲಯದಲ್ಲಿ ಕಾರ್ಖಾನೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ 5.5 ಲಕ್ಷ ಕಾರ್ಮಿಕರು 3 ಕೇಂದ್ರ ಕಾರ್ಮಿಕ ಸಂಘಟನೆಗಳ ನೇತೃತ್ವದಲ್ಲಿ ಜುಲೈ 23 ಮತ್ತು 24ರಂದು 2 ದಿನಗಳ ಮುಷ್ಕರವನ್ನು ಹಮ್ಮಿಕೊಂಡಿದೆ.

ಈ ಮುಷ್ಕರ ಆರ್ಥಿಕ ಬೇಡಿಕೆಗೆ ಸಂಬಂಧಪಟ್ಟದ್ದಲ್ಲ. ಬದಲಾಗಿ ಸಾರ್ವಜನಿಕ ವಲಯವನ್ನು ರಕ್ಷಿಸುವುದು, ಆ ಮೂಲಕ ದೇಶದ ಭದ್ರತೆಯನ್ನು ಕಾಪಾಡುವುದು ಈ ಮುಷ್ಕರದ ಉದ್ದೇಶ. ಈ ಹೋರಾಟಕ್ಕೆ ಬೆಂಬಲ ನೀಡಲು ಎಲ್ಲಾ ಕಾರ್ಮಿಕ ಸಂಘಟನೆಗಳು ಕರೆ ನೀಡಿವೆ.

ಸರಕಾರಿ ನೌಕರರ ಮುಷ್ಕರ: ದೇಶದಾದ್ಯಂತ ಕೇಂದ್ರ ಮತ್ತು ರಾಜ್ಯ ಸರಕಾರಗಳ ವಿವಿಧ ಇಲಾಖೆಗಳಲ್ಲಿ ಕೆಲಸ ಮಾಡುತ್ತಿರುವ 75 ಲಕ್ಷ ನೌಕರರ ಸಂಘಟನೆಗಳು ಜುಲೈ 25 ರಂದು ಒಂದುದಿನದ ಮುಷ್ಕರಕ್ಕೆ ಕರೆ ನೀಡಿವೆ. ಇದೊಂದು ಐತಿಹಾಸಿಕ ಮುಷ್ಕರವಾಗಲಿದೆ. ಕೇಂದ್ರ ಸರ್ಕಾರವು ನೇಮಿಸಿದ ವೆಚ್ಚ ಸುಧಾರಣಾ ಆಯೋಗವು ಕೆಲವೊಂದು ಸರಕಾರಿ ಇಲಾಖೆಗಳನ್ನು ಖಾಸಗೀಕರಣಕ್ಕೆ ಒಳಪಡಿಸುವುದು, ವಿವಿಧ ಇಲಾಖೆಗಳನ್ನು ಪುನರ್‌ರಚಿಸುವುದು - ಆ ಮೂಲಕ ಸಾವಿರಾರು ನೌಕರರನ್ನು ಹೆಚ್ಚುವರಿ ಎಂದು ಘೋಷಿಸಿ, ಬಲವಂತವಾಗಿ ಸ್ವಯಂ ನಿವೃತ್ತಿ(VRS) ತೆಗೆದುಕೊಳ್ಳುವಂತೆ ಮಾಡುವುದು - ಇತ್ಯಾದಿ ಕ್ರಮಗಳಿಗೆ ಶಿಫಾರಸ್ಸು ಮಾಡಿದೆ. ಅಲ್ಲದೆ ವೆಚ್ಚ ಸುಧಾರಣಾ ಆಯೋಗಕ್ಕೆ ಡಿಪಿಎಆರ್ ಸಲ್ಲಿಸಿದ ಟಿಪ್ಪಣಿಯಲ್ಲಿ ಕೆಳಕಂಡ ಹಲವಾರು ಅಂಶಗಳು ಇವೆ.

1. ಇನ್ನು ಮುಂದೆ ಉದ್ಯೋಗಕ್ಕೆ ಸೇರಿರುವವರು 10 ಸೇವೆಯ ನಂತರ ಯಾವುದೇ ವೇತನವಿಲ್ಲದೇ ಕಡ್ಡಾಯವಾಗಿ 5 ವರ್ಷ ರಜೆಯಲ್ಲಿ ಹೋಗಬೇಕು.
2. 52 ರಿಂದ 55 ವಯಸ್ಸಿನ ಅಧಿಕಾರಿಗಳು ಮತ್ತು ನೌಕರರ ಪೈಕಿ 25 ರಿಂದ 50 ಶೇ. ನೌಕರರಿಗೆ ಕಡ್ಡಾಯ ನಿವೃತ್ತಿ.
3. ಕೆಲವೊಂದು ಇಲಾಖೆಗಳನ್ನು 'ಮರ್ಜ್' ಮಾಡಿ, ಆ ಮೂಲಕ ಗ್ರೇಡ್ ಸಿ ಮತ್ತು ಡಿ ಪೋಸ್ಟ್‌ಗಳನ್ನು ಕಡಿತ ಮಾಡುವುದು.
4. ಮುಂದಿನ 5 ವರ್ಷದಲ್ಲಿ ಯಾವುದೇ ತುಟ್ಟಿಭತ್ಯೆ ಹೆಚ್ಚಳ ಇಲ್ಲ.
5. ಸರಕಾರ ಒದಗಿಸಿದ ಮನೆಗಳಿಗೆ ಕನಿಷ್ಟ ಶೇ 20 ರಷ್ಟು ಬಾಡಿಗೆ.
6. ಇನ್ನು ಮುಂದೆ ವೇತನ ಆಯೋಗಗಳ ರಚನೆ ಇಲ್ಲ.
7. ನೌಕರರು ಹಣ ನೀಡಿದರೆ ಮಾತ್ರ ನಿವೃತ್ತಿ ವೇತನ ಇತ್ಯಾದಿ.

ಮೇಲಿನ ಶಿಫಾರಸ್ಸುಗಳು ಜಾರಿ ಆದದ್ದೇ ಆದಲ್ಲಿ ಸರಕಾರಿ ನೌಕರರು ತಾವು ಹೋರಾಟ ಮಾಡಿ ಗಳಿಸಿದ ಹಕ್ಕುಗಳನ್ನು ಕಳಕೊಳ್ಳಲಾಗುತ್ತದೆ. ಹಲವು ಲಕ್ಷ ನೌಕರರು ಬೀದಿ ಪಾಲಾದರೆ, ಇನ್ನು ಕೆಲವು ಲಕ್ಷ ನೌಕರರ ಜೀವನ ಮಟ್ಟ ಕುಸಿಯಲಿದೆ. ಆದ್ದರಿಂದಲೇ ಜುಲೈ 25 ರ ಮುಷ್ಕರಕ್ಕೆ ಒಕ್ಕೊರಲಿನ ಕರೆ.

ಜುಲೈ ತಿಂಗಳು - ಕಾರ್ಮಿಕರ ನೌಕರರ ಸರಣಿ ಹೋರಾಟ: ಒಟ್ಟಾರೆಯಾಗಿ ಹೇಳುವುದಾದರೆ ಜುಲೈ ತಿಂಗಳಲ್ಲಿ ದೇಶದಾದ್ಯಂತ ಕಾರ್ಮಿಕರು-ನೌಕರರು ಕೇಂದ್ರ ಸರಕಾರದ ಆರ್ಥಿಕ ನೀತಿಯ ವಿರುದ್ಧ, ಕಾರ್ಮಿಕ ಕಾಯಿದೆಗಳ ತಿದ್ದುಪಡಿಗಳ ವಿರುದ್ಧ, ಸರಕಾರಿ ಕಾರ್ಖಾನೆ/ಇಲಾಖೆಗಳನ್ನು ಖಾಸಗೀಕರಣಗೊಳಿಸುವುದರ ವಿರುದ್ಧ ಎಚ್ಚೆತ್ತು ಹೋರಾಟಕ್ಕೆ ಇಳಿದಿದ್ದಾರೆ. ಕರ್ನಾಟಕ ರಾಜ್ಯದಲ್ಲೂ ಈ ಹೋರಾಟಕ್ಕೆ ಸ್ಪಷ್ಟವಾದ ರೂಪ ಕೊಡಲು ಪ್ರಯತ್ನಗಳು ನಡೆಯುತ್ತಿವೆ.

ಕಾರ್ಮಿಕ ವರ್ಗದ ಐಕ್ಯತೆಯಲ್ಲಿ ಅಚಲವಾದ ನಂಬಿಕೆ ಹೊಂದಿರುವ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯಸಮಿತಿ ಈ ಎಲ್ಲಾ ಹೋರಾಟಗಳಿಗೆ ಸಂಪೂರ್ಣ ಬೆಂಬಲ ವ್ಯಕ್ತಪಡಿಸಿದೆ ದೇಶದ ಸಾರ್ವಭೌಮತೆಯ ರಕ್ಷಣೆಗಾಗಿ, ಬಹುರಾಷ್ಟ್ರೀಯ ಸಂಸ್ಥೆಗಳ ಕೊಳ್ಳೆ ಹೊಡೆಯುವ ನೀತಿಯ ವಿರುದ್ಧ, ಐಕ್ಯ ಹೋರಾಟವನ್ನು ಪ್ರತಿಪಾದಿಸುತ್ತಾ ಬಂದಿರುವ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಈ ಐಕ್ಯತೆಯನ್ನು ಉಳಿಸಿ ಇನ್ನಷ್ಟು ವಿಶಾಲವಾದ ಹೋರಾಟಗಳನ್ನು ನಡೆಸಬೇಕೆಂದು ಕರೆ ನೀಡಿದೆ.



ಗ್ಯಾಟ್ ಒಪ್ಪಂದ ವಿರೋಧಿಸಿ 15.4.94 ರಂದು ಸಾಮೂಹಿಕ ಸಂಘಟನೆಯ ಕಾರ್ಯಕರ್ತರು ಬೆಂಗಳೂರಿನ ರಾಜಭವನದ ಮುಂದೆ ಪ್ರತಿಭಟಿಸುತ್ತಿದ್ದಾಗ ಜಲಫಿರಂಗಿ ಪ್ರಯೋಗ

ಅಗಲಿದ ಕ್ರಾಂತಿಕಾರಿ ಎಂ.ಹೆಚ್. ರವರಿಗೆ ದುಃಖಪೂರಿತ ವಿದಾಯ

ವಿಜಯವಾಡದ ಸ್ವರ್ಗಪುರಿಯ ಸಂಜೆಯಲ್ಲಿ ಘೋಷಣೆಗಳು ಮುಗಿಲು ಮುಟ್ಟಿದ್ದವು. ಆಂಧ್ರದ ಕಮ್ಯುನಿಸ್ಟ್ ಚಳುವಳಿಯ ಧ್ರುವತಾರೆ, ಐತಿಹಾಸಿಕ ತೆಲಂಗಾಣ ಹೋರಾಟದ ನಾಯಕ ಕ್ರಾಂತಿಕಾರಿ ಯೋಧ ಕಾಂ. ಮೋಟಾರು ಹನುಮಂತರಾವ್ ರವರಿಗೆ 'ಲಾಲ್ ಸಲಾಂ ಲಾಲ್ ಸಲಾಂ'

ಕಾಂ. ಎಂ.ಹೆಚ್. ರವರು ಅಗಲಿದ ಸುದ್ದಿ ತಿಳಿದೊಡನೆ ಸಹಸ್ರಾರು ಅಭಿಮಾನಿಗಳು, ಪಕ್ಷದ ಕಾರ್ಯಕರ್ತರು, ಹಲವು ಜನ ವಿಭಾಗಗಳು, ವಿಜವಾಡದೆಡೆಗೆ ಧಾವಿಸಿದರು. ತಮ್ಮ ನೆಚ್ಚಿನ ನಾಯಕನಿಗೆ ಅಂತಿಮ ನಮನ ಸಲ್ಲಿಸಿದರು.

ಸುದ್ದಿ ತಿಳಿದೊಡನೆ ಮಾರ್ಕ್ಸ್‌ವಾದಿ ಕಾರ್ಯಾಲಯಕ್ಕೆ ತೆರಳಿದ ಜನಸಾಗರ ಭಾರವಾದ ಹೃದಯಗಳೊಂದಿಗೆ ಅಂತಿಮ ನಮನ ಸಲ್ಲಿಸಿದರು. ಕೆಂಬಾವುಟ, ಹೂಗಳಿಂದ ಅಲಂಕೃತಗೊಂಡಿದ್ದ ವಾಹನ ಮಧ್ಯಾಹ್ನ 3 ಗಂಟೆಗೆ ಕಾಂ. ಎಂ.ಹೆಚ್.ರವರ ಮೃತ ದೇಹವನ್ನು ಹೊತ್ತು ನಗರದ ಪ್ರಮುಖ ಬೀದಿಗಳಲ್ಲಿ ಸಾಗಿತು. ವಾಹನದ ವೇಗ ಅಲ್ಲಿ ನೆರೆದಿದ್ದ ಜನರ ಭಾರವಾದ ಹೃದಯಗಳಿಗೆ ಕನ್ನಡಿಯಂತಿತ್ತು. ಹಲವಾರು ನಾಗರೀಕರು ತಮ್ಮ ಮನೆಗಳ ಮಹಡಿಗಳ ಮೇಲೆ ನಿಂತು ಅಗಲಿದ ನಾಯಕನಿಗೆ ಪುಷ್ಪಾಂಜಲಿ ಅರ್ಪಿಸಿದರು.

ಕಾಂ. ಎಂ.ಹೆಚ್‌ರವರ ಮಕ್ಕಳಾದ ಡಾ|| ತನ್ಯಾ ಮತ್ತು ಡಾ|| ಉಷಾ ಹಾಗೂ ಕುಟುಂಬದ ಇತರೆ ಸದಸ್ಯರೊಂದಿಗೆ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಕಾಂ. ಬಿ.ವಿ.ರಾಘವುಲು ಸ್ಥಳೀಯ ಮುಖಂಡರಾದ ಬಾಬುರಾವ್ ವಾಹನದ ಮುಂಭಾಗದಲ್ಲಿ ನಿಂತಿದ್ದರು. ಮತ್ತೊಂದು ವಾಹನದಲ್ಲಿ ಪಕ್ಷದ ಅಖಿಲ ಭಾರತ ಮುಖಂಡರು, ಟಿಡಿಪಿ ನಾಯಕರಾದ ಡಾ||ಯಲಮಚಿಲ್ಲಿ ಶಿವಾಜಿ ಇದ್ದರು.

ಈ ಸಂದರ್ಭದಲ್ಲಿ **ಕರ್ನಾಟಕ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜಿ.ಎನ್.ನಾಗರಾಜ್‌ರವರು ಪಕ್ಷವನ್ನು ಪ್ರತಿನಿಧಿಸಿ ಭಾಗವಹಿಸಿದ್ದರು.**


ಕಾಂ. ಎಂ.ಹೆಚ್. ರವರ ಅಂತಿಮ ಪಯಣದ ಮುಂಭಾಗದಲ್ಲಿ ಕೆಂಪು ಸಮವಸ್ತ್ರ ಧರಿಸಿದ ಕಾರ್ಯಕರ್ತರು, ದುಡಿಯುವ ಮಹಿಳೆಯರು, ಸಹಸ್ರಾರು ಅಭಿಮಾನಿಗಳು ರಸ್ತೆಯ ಎರಡು ಬದಿಯಲ್ಲಿ ಸಾಗುತ್ತಿದ್ದರು. ವಿವಿಧ ಕಾರ್ಮಿಕ ಸಂಘಗಳ ಕಾರ್ಮಿಕರು, ಸಾಮೂಹಿಕ ಸಂಘಟನೆಗಳ ಕಾರ್ಯಕರ್ತರು ಕಂಬನಿ ಮಿಡಿಯುತ್ತಾ ರ್‍ಯಾಲಿಯಲ್ಲಿ ಸಾಗಿದರು. ಆಂಧ್ರದ ದುಡಿಯುವ ಜನರ ದನಿ ಪ್ರಜಾಶಕ್ತಿಯ ಕಾರ್ಮಿಕರ ಸಂಘದ ಕಾರ್ಯಕರ್ತರು ಶೋಷಣಾ ರಹಿತ ಸಮಾಜಕ್ಕಾಗಿ ಕಾಂ. ಎಂ.ಹೆಚ್. ರವರುತೋರಿಸಿದ ತ್ಯಾಗದ ಪರಂಪರೆಯನ್ನು ಎತ್ತಿ ಹಿಡಿಯುತ್ತೇವೆಂದು ಪ್ರತಿಜ್ಞಾ ಘೋಷಣೆಗಳನ್ನು ಕೂಗುತ್ತಾ ಸಾಗಿದರು. ವಿಜಯವಾಡದ ಬೀದಿಗಳಲ್ಲಿ ಸಂಚಾರವು ಸ್ತಬ್ದಗೊಂಡು ತನ್ನ ನಾಯಕನಿಗೆ ಮೌನ ಶ್ರದ್ಧಾಂಜಲಿ ಅರ್ಪಿಸಿತು. ಕಾಂ. ಎಂ.ಹೆಚ್‌ರವರು ದೀರ್ಘ ಕಾಲದಿಂದಪತ್ರಿಕೆಯ ಸಂಪಾದಕರಾಗಿದ್ದರು.

ಶ್ರದ್ಧಾಂಜಲಿ ಸಭೆ: ಕಾಂ. ಎಂ.ಹೆಚ್. ರವರನ್ನು ಚಿತೆಗೆ ಅರ್ಪಿಸಿದ ನಂತರ ಅವರ ಸ್ಮರಣಾರ್ಥ ಕೃಷ್ಣಾ ನದಿಯ ತೀರದಲ್ಲಿ ಶ್ರದ್ಧಾಂಜಲಿ ಸಭೆ ನಡೆಯಿತು. ಸಭೆಯನ್ನುದ್ದೇಶಿಸಿ ಮಾತನಾಡಿದ ಮುಖಂಡರು ಬಲಿಷ್ಟ ಎಡ ಮತ್ತು ಪ್ರಜಾಸತ್ತಾತ್ಮಕ ಚಳುವಳಿಯನ್ನು ಕಟ್ಟುವುದು ಮಾತ್ರವೇ ಎಂ.ಹೆಚ್.ರವರಿಗೆ ಶ್ರದ್ಧಾಂಜಲಿ ಸಲ್ಲಿಸಲು ಇರುವ ಏಕೈಕ ಮಾರ್ಗ ಎಂದರು. ಅವರ ಸೈದ್ಧಾಂತಿಕ ಬದ್ಧತೆ, ಸ್ಪಷ್ಟತೆ, ಸರಳ ಜೀವನವನ್ನು ಸ್ಮರಿಸಿದರು. ವರ್ಗ ಹೋರಾಟವನ್ನು ಬೆಳೆಸುವುದು ಅವರಿಗೆ ಶ್ರದ್ಧಾಂಜಲಿ ಸಲ್ಲಿಸುವ ಏಕೈಕ ದಾರಿ ಎಂದು ಅಭಿಪ್ರಾಯ ಪಟ್ಟರು.

ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯರಾದ ಕಾಂ. ಸೀತಾರಾಂ ಯೆಚೂರಿ, ವಿ.ಎಸ್ ಅಚ್ಯುತಾನಂದನ್, ಎಸ್.ರಾಮಚಂದ್ರ ಪಿಳ್ಳೈ, ಎಂ.ಎ.ಬೇಬಿ, ಅನಿಲ್ ಬಿಸ್ವಾಸ್, ಕರ್ನಾಟಕ ರಾಜ್ಯ ಕಾರ್ಯದರ್ಶಿ ಮಂಡಳಿ ಜಿ.ಎನ್.ನಾಗರಾಜ್, ತಮಿಳುನಾಡಿನ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಬಿ.ಕೆ.ರಂಗರಾಜನ್, ಸಿಪಿಐ ಕೇಂದ್ರ ಕಾರ್ಯಕಾರಿ ಸಮಿತಿ ಸದಸ್ಯರಾದ ದಾಸರಿ ನಾಗಭೂಷಣ ರಾವ್, ಟಿಡಿಪಿ ಮುಖಂಡರು, ರಾಜ್ಯ ಕೃಷಿ ಮಂತ್ರಿಗಳಾದ ವಿ.ಶೋಭಾ ನಂದೀಶ್ವರರಾವ್, ಎಂಸಿಪಿಐ ಮುಖಂಡರಾದ ಓಂಕಾರ್, ಸಿಪಿಐ (ಎಂಎಲ್) ವಿಮೋಚನಾ ಮುಖಂಡರಾದ ಬಂಗಾರರಾಜು ಮತ್ತಿತರರು ಸಭೆಯಲ್ಲಿ ಭಾಗವಹಿಸಿ ಮಾತನಾಡಿದರು. ಸಭೆಯ ಅಧ್ಯಕ್ಷತೆಯನ್ನು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಬಿ.ವಿ.ರಾಘವಲು ವಹಿಸಿದ್ದರು.



ಅಂತಿಮ ವಿದಾಯದಲ್ಲಿ ಜನಸಾಗರ ಮತ್ತು ಹಿರಿಯ ನಾಯಕರು



ಪ್ರತಿಭಾವಂತ ಕಮ್ಯುನಿಸ್ಟ್ ಪತ್ರಕರ್ತ

ಕಾಂ| ಹನುಮಂತರಾವ್‌ರವರು ಅತ್ಯುತ್ತಮ ಸಂಘಟಕ ಮತ್ತು ಮಾರ್ಕ್ಸ್‌ವಾದಿ ಮಾತ್ರವಲ್ಲ ಪ್ರತಿಭಾವಂತ ಕಮ್ಯುನಿಸ್ಟ್ ಪತ್ರಕರ್ತರಾಗಿ ಅಗಾಧ ಅನುಭವವನ್ನು ಈ ವಿಭಾಗದಲ್ಲಿ ಹೊಂದಿದ್ದರು.

1981ರಿಂದ ದೈನಿಕವಾದ 'ಪ್ರಜಾಶಕ್ತಿ'ಯ ಸಂಪಾದಕರಾಗಿ ಕೆಲಸ ಮಾಡಿದರು. ಇತ್ತೀಚಿನ ಕೆಲವೇ ವಾರಗಳ ಹಿಂದೆ ಅನಾರೋಗ್ಯದ ಕಾರಣದಿಂದ ಆ ಜವಾಬ್ದಾರಿಯಿಂದ ಹೊರ ಬಂದರು. ಈ ಹಿಂದೆ 8 ವರ್ಷಗಳ ಕಾಲ ವಿಶಾಲಾಂಧ್ರ ದಿನಪತ್ರಿಕೆಯ ಸಂಪಾದಕರಾಗಿ ನಂತರ ಪ್ರಜಾಶಕ್ತಿ ಮತ್ತು ಜನಶಕ್ತಿ ಸಾಪ್ತಾಹಿಕಗಳ ಸಂಪಾದಕರಾಗಿ ಕೆಲಸ ನಿರ್ವಹಿಸಿದರು. ಇವರ ಬರಹಗಳು ಯಾವಾಗಲೂ ಸತ್ಯಯುತ ಮತ್ತು ಮೊನಚಾಗಿರುತ್ತಿದ್ದವು. ಶತ್ರುಗಳನ್ನು ಬಡಿಯುವುದರಲ್ಲಿ ಅಂದು ನಿಷ್ಣಾತ ಬರಹಗಾರರಾಗಿದ್ದರು. ಕಮ್ಯುನಿಸ್ಟ್ ಪಕ್ಷವು ಇಬ್ಭಾಗವಾದಂತಹ ಸಂದರ್ಭದಲ್ಲಿ ಪರಿಷ್ಕರಣವಾದಿಗಳು ಮತ್ತು ತೀವ್ರವಾದಿಗಳ ವಿರುದ್ಧ ಹೋರಾಟ ನಡೆಸಲು ಪಕ್ಷದ ಕಾರ್ಯಕರ್ತರಿಗೆ ಇವರ ಬರಹಗಳು ಮಾರ್ಗ ದರ್ಶಕವಾದವು. ಮಾತ್ರವಲ್ಲ ಗೋರ್ಬಚೆವ್‌ರವರು ಸೋವಿಯತ್ ರಷ್ಯಾದಲ್ಲಿ ಜಾರಿಮಾಡಿದ ಪೆರಿಸ್ಟ್ರೋಯ್ಕಾ ಮತ್ತು ಗ್ಲಾಸ್‌ನೋಸ್ಟ್ ನೀತಿ ಗಳು ಮಾಡಬಹುದಾದ ಘೋರ ಪರಿಣಾಮಗಳನ್ನು ಎತ್ತಿ ತೋರಿಸಿದವರಲ್ಲಿ ಹನುಮಂತರಾವ್ ಪ್ರಥಮಲ್ಲಿ ಒಬ್ಬರು ಮತ್ತು ಸೋವಿಯತ್ ವಿಘಟನೆಯಾದ ನಂತರದಲ್ಲೂ ಹಾಳುಗೆಡುವ ಪ್ರವೃತ್ತಿಗಳ ವಿರುದ್ಧ ಪಕ್ಷದೊಳಗೆ ಮಹತ್ವದ ಸೈದ್ಧಾಂತಿಕ ಪ್ರಚಾರವನ್ನು ನೆಡೆಸಿದರು.

ಸಾರ್ವಜನಿಕ ಪ್ರಶ್ನೆಗಳಿಗೆ ಸಂಬಂಧಿಸಿ ಹಲವಾರು ಪತ್ರಿಕೆಗಳನ್ನು ಅವರು ಬರೆದಿದ್ದಾರೆ. ಸೋವಿಯತ್ ಯೂನಿಯನ್, ಚೈನಾ, ರೋಮೆನಿಯಾ, ಯು.ಎಸ್.ಎ., ಗಳಿಗೆ ಭೇಟಿನೀಡಿ ಅಲ್ಲಿನ ಸಾಮಾಜಿಕ ವ್ಯವಸ್ಥೆ ಬಗ್ಗೆ ಅಭ್ಯಾಸ ನಡೆಸಿದ್ದಾರೆ.

ಮೋಟೂರು ಹನುಮಂತರಾವ್ ರವರು ಬಹುಮುಖ ವ್ಯಕ್ತಿತ್ವ ಅವರ ನಿಲುವು ಜನತಾ ಚಳುವಳಿಯ ಹೋರಾಟಗಳಿಗೆ ಭರಿಸಲಾಗದ ನಷ್ಟವಾಗಿದೆ. ಮುಖ್ಯವಾಗಿ ಕಮ್ಯುನಿಸ್ಟ್ ಚಳುವಳಿಗೆ ಆಗಿರುವ ಆ ನಷ್ಟವನ್ನು ಸುಲಭವಾಗಿ ತುಂಬಲು ಸಾಧ್ಯವಿಲ್ಲ. ಪಕ್ಷದ ವಿವಿಧ ರಾಜ್ಯ ಸಮಿತಿಗಳು ಜಿಲ್ಲಾ ಸಮಿತಿಗಳು ಮತ್ತು ಸೌಹಾರ್ದ ಪಕ್ಷಗಳು ಎಂ.ಹೆಚ್.ರವರಿಗೆ ಭಾವಪೂರ್ಣ ಕೆಂಪು ವಂದನೆ ಸಲ್ಲಿಸಿವೆ.

ಕಾಲದ ಸವಾಲುಗಳನ್ನು ಸಮರ್ಥವಾಗಿ ಎದುರಿಸಿದ ಸಮರಧೀರ ಸಂಗಾತಿ ಮೋಟೂರು ಹನುಮಂತರಾವ್

ಸಂಕ್ಷಿಪ್ತ ಪರಿಚಯ

ಮೋಟೂರು ಹನುಮಂತರಾವ್‌ರವರು1917 ಇಸ್ವಿಯಲ್ಲಿ ಆಂಧ್ರದ ಗುಂಟೂರು ಜಿಲ್ಲೆಯ ರೆಪಲ್ಲೆ ತಾಲೂಕಿನ ವೆಲ್ಲತ್ತೂರು ಗ್ರಾಮದ ಮಧ್ಯಮ ವರ್ಗದ ರೈತ ಕುಟುಂಬದಲ್ಲಿ ಜನಿಸಿದರು.

ಶಾಲಾ ದಿನಗಳಲ್ಲಿಯೇ ರಾಷ್ಟ್ರೀಯ ಆಂದೋಲನಕ್ಕೆ ಆಕರ್ಷಿತರಾದ ಅವರು 1930ರ ಹೊತ್ತಿಗೆ ರಾಜಕೀಯದಲ್ಲಿ ಕ್ರಿಯಾಶೀಲರಾದರು. ಆರಂಭದಿಂದಲೇ ರಾಷ್ಟ್ರೀಯ ಮುಖಂಡರು ಭಾಗವಹಿಸುತ್ತಿದ್ದ ಸಭೆಗಳಿಗೆ ಹಾಜರಾಗುತ್ತಿದ್ದ ಅವರು ಕಾಂಗ್ರೆಸ್‌ನೊಳಗಿದ್ದ ಎಡಪಂಥಿಯರ ಸಂಪರ್ಕಕ್ಕೆ ಬಂದರು. ಹೀಗೆ ಕಮ್ಯುನಿಸ್ಟ್ ಚಳುವಳಿಗೆ ಆಕರ್ಷಿತರಾದ ಕಾಂ| ಹನುಮಂತರಾವ್‌ರವರು ಕಮ್ಯುನಿಸ್ಟ್ ಸಾಹಿತ್ಯ ಅಭ್ಯಾಸವನ್ನು ಪ್ರಾರಂಭಿಸಿದರು. ಅದೇ ಸಂದರ್ಭದಲ್ಲೇ ಸಂಪರ್ಕಕ್ಕೆ ಬಂದ ಎಂ. ಬಸವಪುನ್ನಯ್ಯ ಮತ್ತು ಎಲ್.ವಿ. ಗಂಗಾಧರರಾವ್ ಜೊತೆಗೂಡಿ ವಿದ್ಯಾರ್ಥಿ ಚಳುವಳಿಯಲ್ಲಿ ಕೆಲಸ ಮಾಡತೊಡಗಿದರು. ಇವರು ಅಭ್ಯಾಸ ಮಾಡುತ್ತಿದ್ದ ಹಾಸ್ಟಲ್‌ನ ಕೋಣೆ ಮತ್ತು ಗುಂಟೂರಿನ ಎ.ಸಿ. ಕಾಲೇಜು ಎಡಪಂಥಿಯರ ಕ್ರಿಯಾಶೀಲ ಕೇಂದ್ರವಾಗಿತ್ತು. ಅಲ್ಲದೆ 1938ರಲ್ಲಿ ಕಲ್ಕತ್ತದಲ್ಲಿ ನಡೆದ ಎ.ಐ.ಎಸ್.ಎಫ್.ನ ಅಖಿಲ ಭಾರತ ಸಮ್ಮೇಳನದಲ್ಲಿ ಭಾಗವಹಿಸಿದ್ದರು.

ರಾಷ್ಟ್ರ ಮುಖಂಡರಾಗಿ

1937ರಲ್ಲಿ ಕಮ್ಯುನಿಸ್ಟ್ ಪಕ್ಷದ ಸದಸ್ಯರಾದ ಅವರು ಅಸಂಖ್ಯಾತ ಸಂಕಷ್ಟಗಳನ್ನು ಎದುರಿಸಿ ತೀವ್ರರೀತಿಯ ಒತ್ತಡಗಳ ನಡುವೆಯೇ ರಾಷ್ಟ್ರ ಮುಖಂಡರಾಗಿ ಬೆಳೆದರು. 1953ರಲ್ಲಿ ಅವಿಭಾಜಿತ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿಯ ಸದಸ್ಯರಾದ ಅವರು 1964ರಲ್ಲಿ ಸಿಪಿಐ(ಎಂ)ಸ್ಥಾಪನೆಯಾದಾಗ ಆಂಧ್ರ ಪ್ರದೇಶ ರಾಜ್ಯ ಕಾರ್ಯದರ್ಶಿಯಾಗಿ ಆಯ್ಕೆಯಾದರು. 1982ರವರಗೂ ಅದೇ ಹುದ್ದೆಯಲ್ಲಿ ಮುಂದುವರೆದ ಎಂ.ಹೆಚ್.ರವರು 1988ರಲ್ಲಿ ಕಲ್ಕತ್ತ ಅಧಿವೇಶನದಲ್ಲಿ ಪಕ್ಷದ ಪಾಲಿಟ್‌ಬ್ಯೂರೋ ಸದಸ್ಯರಾದರು.

ತೆಲಂಗಾಣದ ವೀರನಾಯಕ

ಐತಿಹಾಸಿಕ ತೆಲಂಗಾಣ ಸಶಸ್ತ್ರ ರೈತ ಹೋರಾಟದಲ್ಲಿ ಕರಾವಳಿ ಆಂಧ್ರದಲ್ಲಿ ಅವರು ಸಂಘಟಿಸಿದ ಮತ್ತು ಕಟ್ಟಿದ ಹೋರಾಟಗಳು ಅತ್ಯಂತ ಪ್ರಖ್ಯಾತವಾದದು ಮಾತ್ರವಲ್ಲ 1948-51ರ ನಡುವೆ ಪಕ್ಷವು ಎದುರಿಸದ ತೀವ್ರರೀತಿಯ ದಬ್ಬಾಳಿಕೆಗಳನ್ನು ಅತ್ಯಂತ ದೈರ್ಯವಾಗಿ ಎದುರಿಸಿ ಪಕ್ಷವನ್ನು ಮುನ್ನಡೆಸಿದರು.

ಭೂಗತರಾಗಿ ಹೋರಾಟ

1949ರಲ್ಲಿ ಭೂಗತರಾಗಿ ಪಕ್ಷವನ್ನು ಮುನ್ನಡೆಸುತ್ತಿದ್ದಾಗಲೇ ಬಂದಿತರಾದ ಎಂ.ಹೆಚ್. ರವರು 29 ತಿಂಗಳುಗಳ ಕಾಲ ಕುದ್ದಲೂರು ಜೈಲಿನಲ್ಲಿದ್ದರು. ಅಲ್ಲಿ ಕಾಂ| ಎ.ಕೆ.ಜಿ ಮತ್ತು ಕಾಂ| ಎಂ.ಆರ್. ವೆಂಕಟರಮಣ್ ಇತರರ ಜೊತೆ ಸೇರಿ ಜೈಲಿನಲ್ಲೇ ಹೋರಾಟಕ್ಕೂ ನೇತೃತ್ವ ನೀಡಿದರು.

ಅದೇ ಸಂದರ್ಭದಲ್ಲಿಯೇ ಎಂ.ಹೆಚ್.ರವರು 28 ದಿನಗಳ ಆಮರಣಾಂತರ ಸತ್ಯಾಗ್ರಹವನ್ನು ಜೈಲಿನಲ್ಲಿ ನೆಡೆಸಿದರು. ಅಲ್ಲದೆ ಜೈಲಿನ ವಾರ್ಡನ್ ಎರಡು ಬಾರಿ ಗುಂಡು ಹಾರಿಸಿದ್ದನ್ನು ಪ್ರತಿಭಟಿಸಿ ಪುನಃ 21 ದಿನಗಳ ಆಮರಣಾಂತರ ಉಪವಾಸವನ್ನು ನಡೆಸಿದರು.

ಶಸ್ತ್ರಾಸ್ತ್ರ ಹೋರಾಟ ತೀವ್ರಗೊಂಡ ಸಂದರ್ಭದಲ್ಲಿ ಎಂ.ಹೆಚ್.ರವರು ಪೂನಾದ ಕಾಡಿನಲ್ಲಿ ಶಸ್ತ್ರಾಸ್ತ್ರಗಳನ್ನು ಬಳಸುವ ಬಗ್ಗೆ ತರಬೇತಿಯನ್ನು ಪಡೆದರು. ಅಲ್ಲದೆ 1948ರಲ್ಲಿಮಹಾತ್ಮ ಗಾಂಧಿಯವರ ಹತ್ಯೆಯಾದ ಸಂದರ್ಭದಲ್ಲಿ ವಿಜಯವಾಡದಲ್ಲಿ ಆರ್.ಎಸ್.ಎಸ್. ವಿರುದ್ಧ ಹೋರಾಟ ರೂಪಿಸುವಲ್ಲಿ ರಾಜೇಶ್ವರರಾವ್ ಜೊತೆ ಸೇರಿ ನಿರ್ಣಾಯಕ ಪಾತ್ರ ವಹಿಸಿದರು.

ತೆಲಂಗಾಣ ಶಸ್ತ್ರಾಸ್ತ್ರ ಹೋರಾಟವನ್ನು ಮುಂದುವರೆಸುವ ಅಗತ್ಯವನ್ನು ಪ್ರತಿಪಾದಿಸಿದ ಎಂ.ಹೆಚ್.ರವರು ಪಕ್ಷದ ಒಳಗೂ ಅಂತರಿಕ ಹೋರಾಟವನ್ನು ಮುಂದುವರೆಸಿದರು. ಅಲ್ಲದೆ 6 ಚಳುವಳಿಯನ್ನು ರಕ್ಷಿಸಿಕೊಂಡು ಹೋಗುವ ಸಲುವಾಗಿ ಎಂ. ಬಸವಪುನ್ನಯ್ಯನವರೊಂದಿಗೆ

(ಮುಂದಿನಪುಟಕ್ಕೆ)

Printed & Published by Communist Party of India(Marxist)...

ದಿಮಾಕಿನ ಕೇಂದ್ರ ಸರ್ಕಾರ: ನಲುಗಿದ ಮಣಿಪುರ

ಕಳೆದ ಹಲವಾರು ದಿನಗಳಿಂದ ಮಣಿಪುರದಲ್ಲಿ ಕರ್ಫ್ಯೂ ವಿಧಿಸಲಾಗಿದೆ. ಮಣಿಪುರದಲ್ಲಿ ಭುಗಿಲೆದ್ದ ಹಿಂಸಾಚಾರದಲ್ಲಿ 15 ಕ್ಕೂ ಹೆಚ್ಚು ಜೀವನಗಳು ಸತ್ತಿದ್ದು, ಕೋಟ್ಯಾಂತರ ರೂ. ಮೌಲ್ಯದ ಆಸ್ತಿ ಪಾಸ್ತಿ ಹಾನಿ ಸಂಭವಿಸಿದೆ. ಶಾಸಕರ ಮನೆಗಳಿಗೆ, ರಾಜ್ಯಪಾಲರ ನಿವಾಸ, ವಿಧಾನಸೌಧಕ್ಕೆ ಉದ್ರಿಕ್ತ ಜನತೆ ಬೆಂಕಿ ಹಚ್ಚಿ ನಾಶಪಡಿಸಿದ್ದಾರೆ.

ವಿಧಾನಸಭೆ ವಿಸರ್ಜಿಸದೆ ತಮ್ಮ ಸ್ವಾರ್ಥಕ್ಕಾಗಿ ಮಣಿಪುರದಲ್ಲಿ ಚುನಾಯಿತ ಸರ್ಕಾರವೊಂದು ಅಸ್ತಿತ್ವಕ್ಕೆ ಬರದಂತೆ ತಡೆದು ರಾಷ್ಟ್ರಪತಿ ಆಡಳಿತ ಹೇರಿದ ಕೇಂದ್ರ ಎನ್‌ಡಿಎ ಸರ್ಕಾರದ ಅಂಗಪಕ್ಷಗಳು ಪ್ರಮುಖವಾಗಿ ಬಿಜೆಪಿ ಈಗ ತಮ್ಮ ಅವಿವೇಕ ತೀರ್ಮಾನದಿಂದ ಇಡೀ ಈಶಾನ್ಯ ಭಾರತವನ್ನು ಆತಂಕಕ್ಕೆ ತಳ್ಳಿ ಮಣಿಪುರಕ್ಕೆ ಬೆಂಕಿ ಹಚ್ಚಿವೆ.

ಮಣಿಪುರದಲ್ಲಿ ಈ ರೀತಿ ಹಿಂಸಾಚಾರ ನಡೆದು, ಗಲಭೆಗಳುಂಟಾಗಿ ಆತಂಕದ ವಾತಾವರಣಕ್ಕೆ ಕಾರಣವಾಗಿದ್ದು, ಕೇಂದ್ರ ಸರ್ಕಾರವು ತೆಗೆದುಕೊಂಡ ತೀರ್ಮಾನ.

'ನಾಗಾ' ಜನಾಂಗ ವಾಸಿಸುತ್ತಿರುವ ಭೂಪ್ರದೇಶವನ್ನೆಲ್ಲ ಸೇರಿಸಿ 'ಮಹಾ ನಾಗಾಲ್ಯಾಂಡ್' ರಚಿಸಬೇಕೆಂದು ಹೋರಾಡುತ್ತಿರುವ 'ನಾಗಾ ರಾಷ್ಟ್ರೀಯ ಸಮಾಜವಾದಿ ಸಂಘ'ದೊಡನೆ ನಾಗಾಲ್ಯಾಂಡಿನೊಳಗೆ ಕಳೆದ ನಾಲ್ಕು ವರ್ಷಗಳಿಂದಿದ್ದ ಕದನ ವಿರಾಮವನ್ನು ಈ ಸಂಘಟನೆಯ ಚಟುವಟಿಕೆಯಿರುವ ನಾಗಲ್ಯಾಂಡಿನ ಹೊರಗಿನ ಪ್ರದೇಶಕ್ಕೂ ವಿಸ್ತರಿಸಿದ್ದು, ಈ ರೀತಿ ಕದನ ವಿರಾಮವನ್ನು ವಿಸ್ತರಿಸಿರುವುದು ನಾಗಾಲ್ಯಾಂಡಿನ ಗಡಿಗೆ ಹೊಂದಿಕೊಂಡಿರುವ ರಾಜ್ಯಗಳಾದ ಅಸ್ಸಾಂ, ಅರುಣಾಚಲ ಪ್ರದೇಶ, ಮೇಘಾಲಯ, ಮಣಿಪುರದ ಜನತೆಗೆ ಆತಂಕವನ್ನುಂಟು ಮಾಡಿದೆ. ಏಕೆಂದರೆ NSCN ಸಂಘಟನೆಯ ಚಟುವಟಿಕೆಗೆ ಮುಕ್ತ ಅವಕಾಶ ಸಿಕ್ಕಿ ನಮ್ಮ ರಾಜ್ಯಗಳಲ್ಲಿ ಉಗ್ರಗಾಮಿ ಚಟುವಟಿಕೆಗಳು ಹೆಚ್ಚಿ ಸಾಮಾನ್ಯ ಜನ ಜೀವನಕ್ಕೆ ಧಕ್ಕೆಯಾಗುತ್ತದೆ ಮತ್ತು ನಮ್ಮ ರಾಜ್ಯಗಳ ಗಡಿಗಳಿಗೆ ಧಕ್ಕೆಯಾಗಿ ಏಕತೆ, ಸಮಗ್ರತೆಗೆ ಧಕ್ಕೆಯಾಗುತ್ತದೆ ಎಂಬ ಭಯ.

ರಾಜ್ಯದೊಂದಿಗೆ ಸಮಾಲೋಚಿಸದ ಕೇಂದ್ರ

ಆದರೆ ಈ ರೀತಿ ಕದನ ವಿರಾಮವನ್ನು ವಿಸ್ತರಿಸುವ ಮುನ್ನ ಸಂಬಂಧಿಸಿದ ರಾಜ್ಯ ಸರ್ಕಾರಗಳೊಡನೆ ಸಮಾಲೋಚಿಸಬೇಕಾದುದು ಒಕ್ಕೂಟ ವ್ಯವಸ್ಥೆಯಲ್ಲಿ ನಂಬಿಕೆಯಿರುವ ಕೇಂದ್ರ ಸರ್ಕಾರ ಮಾಡಬಹುದಾಗಿದ್ದ ಕೆಲಸ. ಎಂದೂ ಒಕ್ಕೂಟ ವ್ಯವಸ್ಥೆಯಲ್ಲಿ ನಂಬಿಕೆ ಇಲ್ಲದ ಬಿಜೆಪಿ ಮತ್ತದರ ನೇತೃತ್ವದ ಕಂದ್ರ ಸರ್ಕಾರ ರಾಜ್ಯ ಸರ್ಕಾರಗಳನ್ನು ಸಮಾಲೋಚಿಸುವ ಕನಿಷ್ಟ ವಿವೇಚನೆಯನ್ನು ತೋರಿಲ್ಲ. ಆದರೆ ರಾಜ್ಯ ಸರ್ಕಾರಗಳೊಡನೆ ಮಾತನಾಡಲಾಗಿದೆ ಎಂದು ಗೃಹಮಂತ್ರಿ ಮತ್ತಿತರರು ಹೇಳುತ್ತಿದ್ದಾರೆ. ಇದನ್ನೆಲ್ಲ ಸಂಬಂಧಿಸಿರುವ ರಾಜ್ಯಗಳು ಸುಳ್ಳೆಂದು ನಿರಾಕರಿಸುತ್ತಿದ್ದಾರೆ.

ಮಣಿಪುರದಲ್ಲಿ ಈರೀತಿ ಹಿಂಸಾಚಾರ ನಡೆದ ನಂತರವೂ ಕೇಂದ್ರ ಸರ್ಕಾರ ದಿವ್ಯ ನಿರ್ಲಕ್ಷ್ಯದಿಂದಿದೆ. ಕೂಡಲೇ ಕೇಂದ್ರ ಸರ್ಕಾರವು ಜನತೆಗೆ ವಿಶ್ವಾಸ ತುಂಬುವ ಕೆಲಸ ಮಾಡಬೇಕಾಗಿದೆ.

ಕೃಷ್ಣೇಗೌಡ.ಟಿ.ಎಲ್.




ಪ್ರತಿಭಟನಕಾರರಿಂದ ಮಣಿಪುರದ ವಿಧಾನಸಭೆಗೆ ಬೆಂಕಿ

ಸಮರಧೀರ ಸಂಗಾತಿ ....

ಸೇರಿ 'ಆಂಧ್ರ ಥೀಸೀಸ್' ರೂಪಿಸಲು ಕಾರಣೀಭೂತರಾದರು. ಅಲ್ಲದೆ 'ಟಿಟ್ ಫಾರ ಟ್ಯಾಟ್' ಎಂಬುದನ್ನು ಸಿದ್ದಪಡಿಸಿದರು. ಅಲ್ಲದೆ ಅದೇ ಸಮಯದಲ್ಲಿ ಹನುಮಂತರಾವ್ ರವರು ಪಕ್ಷದ ಕಾರ್ಯ ದರ್ಶಿ ಮಂಡಳಿಗೆ ಆಯ್ಕೆಯಾದರು.

ವಿಶಾಲಾಂಧ್ರದ ನೇತಾರ

1969 ಮತ್ತು 1973ರ ಅವಧಿಯಲ್ಲಿ ಆಂಧ್ರವನ್ನು ಇಬ್ಭಾಗ ಮಾಡಬೇಕೆನ್ನುವ ಘೋಷಣೆಯೊಂದಿಗೆ ಜೈ ತೆಲಂಗಾಣ ಮತ್ತು ಜೈ ಆಂಧ್ರ ಎನ್ನುವ ಘೋಷಣೆಯೊಂದಿಗೆ ಪ್ರತ್ಯೇಕತಾ ಚಳುವಳಿಗಳು ಪ್ರಾರಂಭಗೊಂಡವು ಆ ಸಂದರ್ಭದಲ್ಲೇ ಬರೆಯಲ್ಪಟ್ಟ "ವಿಶಾಲಾಂಧ್ರಲು'- ವಿಶಾದ ಚಾಯಲು (1972) ಎಂಬ ಪುಸ್ತಕವು ಐಕ್ಯ ಆಂಧ್ರವನ್ನು ಬೆಂಬಲಿಸುವಲ್ಲಿ ಪ್ರಮುಖ ಸಾಧನವಾಯಿತು. ಇದೇ ಸಂದರ್ಭದಲ್ಲಿ ಇಂತಹ ಪ್ರತ್ಯೇಕತೆ ಕೂಗಿನ ವಿರುದ್ಧ ಬೃಹತ್ ಸಭೆಗಳನ್ನು ಸಂಘಟಿಸಿದ ಎಂ.ಹೆಚ್. ರವರು ಸ್ಫೂರ್ತಿದಾಯಕ ಭಾಷಣಗಳನ್ನು ಮಾಡಿದರು. ಅಲ್ಲದೇ ದೈಹಿಕ ಹಲ್ಲೆಗಳಿಗೂ ಒಳಗಾದರು.



ಪತ್ನಿ ಉದಯಂ ರೊಂದಿಗೆ

ಸಿಪಿಐ(ಎಂ) ಸ್ಥಾಪನೆ

ಸಿಪಿಐ(ಎಂ) ಸ್ಥಾಪನೆಯಾದ ತಕ್ಷಣವೇ ಕಾಂಗ್ರೆಸ್ ಸರ್ಕಾರವು ಎಂ.ಹೆಚ್.ರವರನ್ನು ಒಳಗೊಂಡಂತೆ 220 ಸಂಗಾತಿಗಳನ್ನು ಆಂಧ್ರ ಜೈಲಿನಲ್ಲಿಟ್ಟಿತು.

ತುರ್ತು ಪರಿಸ್ಥಿತಿಯಲ್ಲಿ

1975-77 ರಲ್ಲಿ ಆಂತರಿಕ ತುರ್ತು ಪರಿಸ್ಥಿತಿ ಘೋಷಣೆಯಾದಾಗ ಎಂ.ಹೆಚ್.ರವರು ಭೂಗತರಾದರು. ಅದೇ ಸಂದರ್ಭದಲ್ಲಿ ಸರ್ಕಾರದ ಆಡಳಿತದಲ್ಲಿ ಅಸಂವಿಧಾನಿಕವಾಗಿ ಮಧ್ಯಪ್ರವೇಶಿಸಿದ್ದ ಸಂಜಯ್ ಗಾಂಧಿ ಕುರಿತು ಮತ್ತು ಶ್ರೀಮತಿ ಇಂದಿರಾ ಗಾಂಧಿ ಯವರ 20 ಅಂಶಗಳ ಕಾರ್ಯಕ್ರಮಗಳನ್ನು ಬಯಲು ಮಾಡುವ ವಾದಕಾಲು-ಪಾಲಿತಾಲು ಎಂಬ ಪುಸ್ತಕವನ್ನು ಬರೆದರು. ಅಲ್ಲದೆ ಅದೇ ಸಂದರ್ಭದಲ್ಲಿ ಎಂ.ಹೆಚ್.ರವರು ಹಲವಾರು ಲೇಖನಗಳನ್ನು ತಮ್ಮ ಹೆಸರು ಬದಲಿಸಿ ಬರೆದು ತುರ್ತು ಸ್ಥಿತಿಯ ವಿರುದ್ಧದ ಹೋರಾಟಕ್ಕೆ ಸ್ಫೂರ್ತಿ ನೀಡಿದರು. ನಂತರ 1979-83ರ ಅವಧಿಯಲ್ಲಿ ಕಾಂ। ಸುಂದರಯ್ಯನವರ ಜೊತೆ ಸೇರಿ ಸರ್ವ-ಪಕ್ಷಗಳ ಹೋರಾಟಕ್ಕೂ ನೇತೃತ್ವ ನೀಡಿದರು.

ಒಟ್ಟಾರೆ 1940ರ ನಂತರ ಎಂ.ಹೆಚ್.ರವರು ನಾಲ್ಕುವರೆ ವರ್ಷ ಸೆರೆವಾಸ ಅನುಭವಿಸಿದರು ಮತ್ತು 5 ವರ್ಷಗಳ ಕಾಲ ಭೂಗತ ಜೀವನ ನೆಡೆಸಿದರು. ತುರ್ತು ಪರಿಸ್ಥಿತಿ ಸಂದರ್ಭದಲ್ಲಿ 19 ತಿಂಗಳು ಭೂಗತರಾಗಿದ್ದುಕೊಂಡೆ ಪಕ್ಷವನ್ನು ಮುನ್ನೆಡೆಸಿದರು.

ವಿವಾಹ

1937 ಮೇ-5 ರಂದು ಉದಯಮ್ ರೊಂದಿಗೆ ಯುವಜನರಿಗೆ ಮಾದರಿಯಾಗಿ ಸರಳವಾಗಿ ವಿವಾಹವಾದ ಎಂ.ಹೆಚ್.ರವರು ತಮ್ಮ ಜೀವಿತದ ಕೊನೆಯವರೆಗೂ ಜನಚಳುವಳಿ ಯೊಂದಿಗೆ ಸಾಗಿದರು. ಉದಯಮ್‌ರವರು ಸಹಾ ಆಂಧ್ರಪ್ರದೇಶ ಮಹಿಳಾ ಸಂಘದ ಕಾರ್ಯದರ್ಶಿ ಯಾಗಿ ಮತ್ತು ಪಕ್ಷದ ಮುಖಂಡರಾಗಿ ಇತ್ತೀಚಿಗೆ ಅವರ ಆರೋಗ್ಯ ಹದಗೆಡುವವರೆಗೂ ಕ್ರೀಯಾಶೀಲವಾಗಿ ಕಾರ್ಯನಿರ್ವಹಿಸಿದರು. ಅವರು ಇಬ್ಬರು ಹೆಣ್ಣು ಮಕ್ಕಳು ವೈದ್ಯರಾಗಿದ್ದಾರೆ.

1952ರ ಮೊದಲ ವಿಧಾನಸಭಾ ಚುನಾವಣೆಯಲ್ಲಿಯೇ ಎಂ.ಹೆಚ್. ರವರು ಹೆಸರಾಂತ ಕಾಂಗ್ರೆಸ್ ಮುಖಂಡರಾದ ಕಲ್ಲೂರಿ ಚಂದ್ರಮೌಳಿಯವರನ್ನು ಸೋಲಿಸಿ ವಿಧಾನಸಭಾ ಸದಸ್ಯರಾದರು. ಅಲ್ಲದೆ 1978-1984ರವರೆಗೂ ಅವರು ಎಂ.ಎಲ್.ಸಿ.ಯಾಗಿದ್ದರು. 1988-1994ರವರೆಗೂ ರಾಜ್ಯಸಭಾ ಸದಸ್ಯರಾಗಿ ಸೇವೆ ಸಲ್ಲಿಸಿದರು ಮಾತ್ರವಲ್ಲ ಎಂ.ಬಿ. ಭವನದ ವ್ಯವಸ್ಥಾಪಕ ಟ್ರಸ್ಟಿಯಾಗಿ ಕೊನೆಯವರೆಗೂ ಇದ್ದರು.

ಕಾರ್ಮಿಕ ಕಾಯ್ದೆಗಳಿಗೆ ಕರಾಳ ತಿದ್ದುಪಡಿಗಳು......

ಪುಟ 7 ರಿಂದ

ಹಣ ಬಲದಿಂದ ಎಷ್ಟು ಬೇಕಾದರೂ ಕಾನೂನು ಪಂಡಿತರ ಸಹಾಯ ಪಡೆಯಬಹುದು ಆದರೆ ಕಾರ್ಮಿಕರಿಗೆ ಈ ಅವಕಾಶವೂ ಇರಕೂಡದು. ಮತ್ತು ಕಾರ್ಮಿಕ ಇಲಾಖೆಯ ಹೆಸರನ್ನೇ ಬದಲಾಯಿಸಿ ಔದ್ಯಮಿಕ ಸಂಭಂಧಗಳ ಇಲಾಖೆ ಎಂದು ಮಾಡಬೇಕು. ಕಾರ್ಮಿಕನು ತನಗಾದ ಅನ್ಯಾಯದ ವಿರುದ್ಧ ವಿವಾದ ಅರ್ಜಿಸಲ್ಲಿಸಲು ಸಮಯಾವಕಾಶ ಸೀಮಿತಗೊಳಿಸುವ ತಿದ್ದುಪಡಿ ಮತ್ತು ಮುಷ್ಕರದಲ್ಲಿರುವ ಕಾರ್ಮಿಕರನ್ನು ಕೆಲಸಕ್ಕೆ ಪುನಃ ಬರುವಾಗ "ಉತ್ತಮ ನಡುವಳಿಕೆಯಿಂದ ಕೆಲಸಮಾಡುತ್ತೇನೆಂಬ" ಮುಚ್ಚಳಿಕೆಯನ್ನು ನೀಡಬೇಕೆಂದು ಮಾಲೀಕರು ಕೇಳುವುದು ಶಿಕ್ಷಾರ್ಹವೆಂದು ಈಗಿರುವ ಕಾನೂನು ಬದಲಾಯಿಸಿ ಮಾಲೀಕರು ಅಂತಹ ಮುಚ್ಚಳಿಕೆ ಪಡೆಯಲು ಸ್ವಾತಂತ್ರ್ಯವಿರಬೇಕು.

ಮಾಲೀಕರ ಕಪಿಮುಷ್ಟಿಗೆ ಕಾರ್ಮಿಕರು

ಆರ್ಥಿಕ ಪ್ರದೇಶ (SEZ) ಗಳನ್ನೂ ಹಾಸನದಲ್ಲಿ ಆರಂಭಿಸಲು ಉದ್ದೇಶಿಸಿದೆ. ಇಲ್ಲಿ ಯಾವುದೇ ಕಾನೂನು ಅನ್ವಯವಾಗುವುದಿಲ್ಲ. ಹಾಗೂ ಯಾವುದೇ ಕಾರ್ಖಾನೆಯಲ್ಲಿ ಕಾರ್ಮಿಕ ಕಾನೂನುಗಳ ಉಲ್ಲಂಘನೆಗಳ ತಪಾಸಣೆ ಮಾಡುವಂತಿಲ್ಲ ಮಾಲೀಕರಿಗೆ ಮುಂಚಿತವಾಗಿಯೇ ಸೂಚನೆ ನೀಡಿ ಮಂತ್ರಿ, ಕಾರ್ಮಿಕ ನಿರೀಕ್ಷಕರು ಭೇಟಿ ಮಾಡಬೇಕು. ಯಾವುದೇ ಸೂಚನೆಯಿಲ್ಲದೇ ಕಾರ್ಮಿಕರ ಸೇವಾ ಸ್ಥಿತಿಗತಿ ಬದಲು ಮಾಡಬಹುದು ಮುಂತಾದ ತಿದ್ದುಪಡಿಗಳನ್ನು ಮಾಡಿ ಕೇಂದ್ರ ಸರಕಾರಕ್ಕಿಂತ ನಾನೇನು ಕಡಿಮೆ ಅಲ್ಲ ಎಂದು ಧಾಳಿಗೆ ರಾಜ್ಯಸರಕಾರ ಮುಂದಾಗುತ್ತಿದೆ.

ಕೇಂದ್ರ ರಾಜ್ಯ ಸರಕಾರಗಳು ಜಾಗತೀಕರಣದಿಂದ ಭಾರಿ ಅಭಿವೃದ್ಧಿ ಸಾಧಿಸುತ್ತೇವೆಂದು ಹೇಳುತ್ತಿರುವಾಗಲೇ ಕೇಂದ್ರ ಅಂಕಿ ಅಂಶಗಳ ವಿಭಾಗ ದೇಶದ ಬೆಳವಣಿಗೆ ಬಗ್ಗೆ ಪ್ರಕಟಿಸಿದ ಅಂಶಗಳೇ ಈ ಜಾಗತೀಕರಣ ನೀತಿಗಳ ಬೊಗಳೆ ಬೆಳವಣಿಗೆ ವಿನ್ಂಬುದನ್ನು ಬಯಲುಗೊಳಿಸುತ್ತದೆ. ಈ ವರ್ಷ ದೇಶದ ಒಟ್ಟು ಉತ್ಪಾದನೆ (GDP) ಶೇ. 1.2 ರಷ್ಟು ಕುಸಿತವಾಗಿದೆ. ಕಳೆದವರ್ಷ ಶೇ. 6.4ರಷ್ಟು ಇದ್ದ ಬೆಳವಣಿಗೆ ಈ ವರ್ಷ ಶೇ. 5.2ಕ್ಕೆ ಕುಸಿದಿದೆ. ಉತ್ಪಾದನಾ ರಂಗದಲ್ಲಿ ಶೇ. 6.8 ರಿಂದ 5.6ಕ್ಕೆ ಕುಸಿದಿದೆ.

ಈ ಎಲ್ಲಾ ದಾಳಿಗಳನ್ನು ಎದುರಿಸಲು 37ನೇ ಐ.ಎಲ್.ಸಿ. ಸಭೆಯಲ್ಲಿ ಎಲ್ಲ ಕಾರ್ಮಿಕ ಸಂಘಟನೆಗಳು ಐತಿಹಾಸಿಕ ರೀತಿಯಲ್ಲಿ ಸರಕಾರದ ನೀತಿಗಳನ್ನು ಒಂದಾಗಿ ವಿರೋಧಿಸಿವೆ. ಎಐಟಿಯುಸಿ, ಬಿಎಂಎಸ್, ಸಿಐಟಿಯು, ಎನ್‌ಎಂಎಸ್, ಹೆಚ್‌ಎಂಕೆಪಿ, ಯುಟಿಯುಸಿ, ಯುಟಿಯುಸಿ(ಎಲ್‌ಎಸ್) ಮುಂತಾದ ಎಲ್ಲಾ ಸಂಘಟನೆಗಳು ಜುಲೈ 24 ನೇ 2001 ರಂದು ಪಾರ್ಲಿಮೆಂಟಿನ ಮಳೆಗಾಲದ ಎರಡನೇ ದಿನ ಬೃಹತ್ ಪ್ರತಿಭಟನೆ ನಡೆಸಲು ನಿರ್ಣಯಿಸಿವೆ ಹಾಗೂ ಕರ್ನಾಟಕದಲ್ಲಿ 12 ಜುಲೈ 2001 ರಂದು ಎಲ್ಲ ಕಾರ್ಮಿಕ ಸಂಘಟನೆಗಳ ರಾಜ್ಯ ಸಮಾವೇಶ ಬೆಂಗಳೂರಿನ ಟೌನ್‌ಹಾಲ್‌ನಲ್ಲಿ ನಡೆಸಲು ನಿರ್ಣಯಿಸಿದೆ. ಹಾಗೂ ಇದಕ್ಕೂ ಮೊದಲು ಎಲ್ಲಾ ಜಿಲ್ಲಾ / ತಾಲ್ಲೂಕು ಮಟ್ಟದ ಸಮಾವೇಶ ನಡೆಸಲು ಕರೆ ನೀಡಲಾಗಿದೆ.

ಸಮರ ಸಿದ್ಧತೆ

ಸಮಾವೇಶ

ಜುಲೈ 6 ಕೇಂದ್ರ ಮತ್ತು ರಾಜ್ಯ ಸರಕಾರಿ ನೌಕರರ ಸಮಾವೇಶ, ಬೆಂಗಳೂರು

9 ರಕ್ಷಣಾ ವಲಯದ ಕಾರ್ಖಾನೆಗಳ ಕಾರ್ಮಿಕರ ರಾಜ್ಯ ಸಮಾವೇಶ, ಬೆಂಗಳೂರು

12 ಕಾರ್ಮಿಕ ಸಂಘಗಳ ಜಂಟಿ ಕ್ರಿಯಾ ಸಮಿತಿ ಸಮಾವೇಶ

ಪೂರ್ವಭಾವಿಯಾಗಿ ಎಲ್ಲಾ ಜಿಲ್ಲೆಗಳಲ್ಲಿಯೂ ಸಮಾವೇಶಗಳು

ಸೇರಿಕೊಳ್ಳಿ, ಕೂಡಿಕೊಳ್ಳಿ
ಈ ಉತ್ಸಾಹದ ಧಾಳಿಗೆ

ಮುಷ್ಕರ

ಜುಲೈ 23, 24 ದೇಶದಾದ್ಯಂತ ರಕ್ಷಣಾ ವಲಯದ ಕಾರ್ಖಾನೆಗಳಲ್ಲಿನ ಕಾರ್ಮಿಕರ ಮುಷ್ಕರ

24 ಪಾರ್ಲಿಂಮೆಂಟ್ ಮುಂದೆ ಬೃಹತ್ ರ್‍ಯಾಲಿ, ರಾಜ್ಯದ ರಾಜಧಾನಿ, ಜಿಲ್ಲಾ ಕೇಂದ್ರ ಮತ್ತು ಕೈಗಾರಿಕಾ ಕೇಂದ್ರಗಳಲ್ಲಿ ಪ್ರತಿಭಟನೆ - ರ್‍ಯಾಲಿ

25 75 ಲಕ್ಷ ಕೇಂದ್ರ ಮತ್ತು ರಾಜ್ಯ ಸರಕಾರಿ ನೌಕರರ ಐತಿಹಾಸಿಕ ಮುಷ್ಕರ

ವಿಮಾ ನೌಕರರ ಸಂಘಕ್ಕೆ ಐವತ್ತರ ಸಂಭ್ರಮ

ಅಖಿಲ ಭಾರತ ವಿಮಾ ನೌಕರರ ಸಂಘ ಅಥವಾ ಸಂಕ್ಷಿಪ್ತವಾಗಿ ಎಐಐಇಎ ಕಾರ್ಮಿಕರ, ರೈತರ ಮತ್ತು ಇತರ ಜನಸಮೂಹಗಳ ಪ್ರಜಾಪ್ರಭುತ್ವ ಚಳುವಳಿಗಳಲ್ಲಿ ತೊಡಗಿಸಿಕೊಂಡವರಿಗೆ ಒಂದು ಚಿರಪರಿಚಿತ ಹೆಸರು. ಏಕೆಂದರೆ ಕೇವಲ ಜೀವವಿಮಾ ನೌಕರರ ಸಂಬಳ-ಸಾರಿಗೆಗಳ ಸಮಸ್ಯೆಗಳಿಗೇ ಸೀಮಿತಗೊಳ್ಳದೆ ಅವರ ಸರ್ವಾಂಗೀಣ ಉನ್ನತಿಗೆ ದುಡಿಯುವುದರೊಂದಿಗೆ ಅರ್ಥಪೂರ್ಣಗೊಳಿಸಿಕೊಳ್ಳಲು ಸಾರ್ವತ್ರಿಕ ಪ್ರಜಾಪ್ರಭುತ್ವ ಚಳುವಳಿಯೊಂದಿಗೆ ತನ್ನನ್ನು ಬೆಸೆದುಕೊಂಡ ಸಂಘಟನೆ ಇದು.

243 ವಿಮಾ ಕಂಪನಿಗಳು ಒಂದೆಡೆ ಪಾಲಿಸಿದಾರರ ಉಳಿತಾಯವನ್ನು ಲೂಟಿ ಮಾಡುತ್ತಾ ಇನ್ನೊಂದೆಡೆ ನೌಕರರನ್ನು ದಾಸರಂತೆ ಕಾಣುತ್ತಿದ್ದ ದಿನಗಳವು. ಈ ಎರಡೂ ಶೋಷಣೆಗಳ ವಿರುದ್ಧ ಸಂಘಟಿತರಾಗಬೇಕೆಂದು ನಿರ್ಧರಿಸುವ ಮುಂಬೈ, ಕಲ್ಕತ್ತಾ ಮುಂತಾದ ಕೆಲವು ನಗರಗಳಲ್ಲಿದ್ದ ಕೆಲವು ವಿಮಾ ನೌಕರರು ಮುಂಬೈಯಲ್ಲಿ ಸೇರಿ ಜೂನ್ 30, 1951 ರಂದು ಸ್ಥಾಪಿಸಿದ ಅಖಿಲ ಭಾರತ ವಿಮಾ ನೌಕರರ ಸಂಘ ಈಗ ಒಂದು ಲಕ್ಷ ಸದಸ್ಯತ್ವ ಹೊಂದಿರುವ ಬೃಹತ್ ಸಂಘಟನೆಯಾಗಿ ಬೆಳೆದಿದೆ, ಉದಾರೀಕರಣ- ಖಾಸಗೀಕರಣ- ಜಾಗತೀಕರಣ ವಿರೋಧಿ ದೇಶವ್ಯಾಪಿ ಹೋರಾಟದಲ್ಲಿ ಮುಂಚೂಣಿಯಲ್ಲಿವೆ. ಈ ಸಂಘಟನೆಯ ಪ್ರಧಾನ ಕಾರ್ಯದರ್ಶಿಗಳು ಈಗ ಸಾರ್ವಜನಿಕ ಮತ್ತು ಸಂಬಂಧಿತ ನೌಕರರ ಅಂತರ್‍ರಾಷ್ಟ್ರೀಯ ಕಾರ್ಮಿಕ ಸಂಘದ ನಿರ್ದೇಶಕ ಸಮಿತಿಯ ಸದಸ್ಯರಾಗಿದ್ದಾರೆ.

ಸ್ಥಾಪನೆಯೊಂದಿಗೆ ಎಐಐಇಎ ಸಹಜವಾಗಿ ಎತ್ತಿಕೊಂಡ ಪ್ರಶ್ನೆಯೆಂದರೆ ವಿಮೆಯ ರಾಷ್ಟ್ರೀಕರಣ. ಮುಂದಿನ ಐದು ವರ್ಷಗಳು ಈ ಸಂಘದ ನಿರಂತರ ವ್ಯಾಪಕ ಪ್ರಚಾರ-ಪ್ರಕ್ಷೋಭೆಯ ಫಲವಾಗಿ ಮತ್ತು ಆಗ ಆಳುವ ವರ್ಗಗಳ ಅವಶ್ಯಕತೆಯಿಂದಾಗಿಯೂ 1956 ರಲ್ಲಿ ನೆಹರೂ ಸರ್ಕಾರ ಜೀವ ವಿಮೆಯನ್ನು ರಾಷ್ಟ್ರೀಕರಿಸಿತು. ಸೆಪ್ಟೆಂಬರ್ 1, 1956 ರಂದು ಇನ್ನೂರಕ್ಕೂ ಹೆಚ್ಚು ಸಂಖ್ಯೆಯಲ್ಲಿದ್ದ ಜೀವ ವಿಮಾ ಕಂಪನಿಗಳನ್ನು ಸೇರಿಸಿ ಜೀವವಿಮಾ ಕಾರ್ಪೊರೇಷನ್ ಅಥವಾ ಎಲ್.ಐ.ಸಿ. ಅಸ್ತಿತ್ವಕ್ಕೆ ಬಂತು. ಈ ಸಂಸ್ಥೆ ಮುಂದೆ ದೇಶದ ಸ್ವಾವಲಂಬೀ ಆರ್ಥಿಕ ಬೆಳವಣಿಗೆಗೆ ನೀಡಿರುವ ಅಪಾರ ಕೊಡುಗೆ ಈಗ ಎಲ್ಲರಿಗೂ ತಿಳಿದಿರುವ ವಿಷಯ.

ಎಲ್.ಐ.ಸಿ. ಸ್ಥಾಪನೆಯೊಂದಿಗೆ ಜೀವ ವಿಮಾ ನೌಕರರ ಸಮಸ್ಯೆಗಳು ತಂತಾನೇ ಬಗೆಹರಿಯಲಿಲ್ಲ. ಎಐಐಇಎ ನೇತೃತ್ವದಲ್ಲಿ ಹೋರಾಟಗಳ ಮೂಲಕವೇ ಇವನ್ನೆಲ್ಲಾ ಒಂದೊಂದಾಗಿ ಬಗೆಹರಿಸಿ ಮುನ್ನಡೆಯಲು ಸಾಧ್ಯವಾಯಿತು. ರಾಷ್ಟ್ರೀಕರಣದ ನಂತರ ಎಐಐಇಎ ಎತ್ತಿಕೊಂಡ ಮೊದಲ ಪ್ರಶ್ನೆಯೆಂದರೆ ವಿಭಿನ್ನ ವಿಮಾ ಕಂಪನಿಗಳ ವಿಭಿನ್ನ ಸೇವಾ ಶರತ್ತುಗಳನ್ನು ಸುಧಾರಿಸಿ ಏಕಪ್ರಕಾರಗೊಳಿಸುವುದು, ಇದಕ್ಕಾಗಿ ನೌಕರರು ಮುಷ್ಕರಗಳನ್ನೂ ನಡೆಸಬೇಕಾಯಿತು. ಈ ಹೋರಾಟದ ಭಾಗವಾಗಿಯೇ ಮುಂದೂಡಿದ ವೇತನವಾಗಿ ಬೋನಸ್ ಹಾಗೂ ಬೆಲೆಯೇರಿಕೆಯನ್ನು ಸರಿದೂಗಿಸುವ ತುಟ್ಟಿಭತ್ಯೆಯ ಪರಿಕಲ್ಪನೆಗಳನ್ನು ಸಾಕಾರಗೊಳಿಸುವ ಹೋರಾಟವನ್ನು ನಡೆಸಿತು. ಬೋನಸ್ ಹೋರಾಟವಂತೂ 1956 ರಿಂದ ಆರಂಭವಾಗಿ 1980 ರ ದಶಕದ ಆರಂಭದವರೆಗೂ ನಡೆಯಿತು. ಸಾರ್ವಜನಿಕ ವಲಯಕ್ಕೆ ಬೋನಸ್ ಸಲ್ಲದು ಎಂಬ ಸರ್ಕಾರದ ನೀತಿಯನ್ನು 1955 ರಲ್ಲಿ ಬದಲಿಸುವಲ್ಲಿ ಎಐಐಇಎ ಯಶಸ್ವಿಯಾಯಿತು. ಕ್ರಮೇಣ ಈ ಬೋನಸ್ ಪ್ರಮಾಣವನ್ನು 1974 ರ ವೇಳೆಗೆ 15 ಶೇ. ರ ವರೆಗೆ ಏರಿಸುವಲ್ಲಿಯೂ ಯಶಸ್ವಿಯಾಯಿತು. ತುರ್ತು ಪರಿಸ್ಥಿತಿಯ ಕರಾಳ ದಿನಗಳಲ್ಲಿ ಸರಕಾರ ಇದನ್ನು ಪ್ರಜಾಪ್ರಭುತ್ವ-ವಿರೋಧಿ ರೀತಿಯಲ್ಲಿ ಕಸಿದುಕೊಂಡಾಗ ನೌಕರರ ಕಾರ್ಯಾಚರಣೆಯೊಂದಿಗೆ ನ್ಯಾಯಾಲಯದಲ್ಲಿ ಹೋರಾಟವನ್ನು ಅತ್ಯಂತ ಚಾಕಚಕ್ಯತೆಯಿಂದ ಬೆಸೆದದ್ದು ದೇಶದ ಕಾರ್ಮಿಕ ಆಂದೋಲನದ ಇತಿಹಾಸದ ಒಂದು ಪ್ರಮುಖ ಭಾಗ.

ಗಣಕೀಕರಣ-ವಿರೋಧಿ ಹೋರಾಟ

1960-70 ರ ದಶಕದಲ್ಲಿ ಎಐಐಇಎ ನ ನೇತೃತ್ವದಲ್ಲಿ ನಡೆದ ಗಣಕೀಕರಣ-ವಿರೋಧಿ ಹೋರಾಟ ಒಂದು ಅಪೂರ್ವ ಅಧ್ಯಾಯ. 1963 ರಲ್ಲಿ ಎಲ್.ಐ.ಸಿ. ಭಾರಿ ಸಾಮರ್ಥ್ಯ ಹೊಂದಿದ ಗಣಕಯಂತ್ರಗಳನ್ನು ಅಳವಡಿಸಿ, ವಿಭಾಗೀಯ ಕಛೇರಿಗಳನ್ನು ರದ್ದುಪಡಿಸಿ ಪಾಲಿಸಿದಾರರ ಸೇವೆ ಮುಂತಾದ ಎಲ್ಲಾ ವ್ಯವಹಾರಗಳನ್ನು ಕೆಲವೇ ಬೃಹತ್ ನಗರಗಳಲ್ಲಿ ಕೇಂದ್ರೀಕರಿಸುವ ಯೋಚನೆ ರೂಪಿಸಿತು. ಇದು ಸಾವಿರಾರು ನೌಕರರನ್ನು ಕೈಬಿಡುವ ಕ್ರಮವಲ್ಲದೆ ಜೀವ ವಿಮೆಯನ್ನು ದೇಶದ ಮೂಲೆ-ಮೂಲೆಗೆ ಒಯ್ಯಬೇಕೆಂಬ ರಾಷ್ಟ್ರೀಕರಣದ ಧ್ಯೇಯಕ್ಕೂ ವಿರುದ್ಧವಾಗಿತ್ತು. ಎಐಐಇಎ ಕೂಡಲೇ ಇದರ ವಿರುದ್ಧ ಕಾರ್ಯಾಚರಣೆಗಿಳಿಯಿತು. ಒಂದೆಡೆ ನೌಕರರನ್ನು ಅಣಿಗೊಳಿಸುವ, ಹೊರಗಡೆ ಸಾರ್ವಜನಿಕ ಅಭಿಪ್ರಾಯವನ್ನು ರೂಪಿಸುವ ಪ್ರಯತ್ನ ನಡೆಸಿತು. ಇದಕ್ಕೆ ಒಂದೆಡೆ ನೌಕರರು ಮುಷ್ಕರಗಳನ್ನು ನಡೆಸಿದರೆ, ಇನ್ನೊಂದೆಡೆ ದೇಶದ ಎಲ್ಲೆಡೆ ಸಭೆ-ಸಮಾವೇಶಗಳನ್ನು ನಡೆಸಿತು. 'ಗಾಂಧಿನಾಡಿನಲ್ಲಿ ಗಣಕೀಕರಣ ಬೇಡವೇ ಬೇಡ - ಬೇಡವೇ ಬೇಡ' ``Underfed and unemployed we don't want automation' (ಸರಿಯಾಗಿ ಹೊಟ್ಟೆಗಿಲ್ಲದ-ಉದ್ಯೋಗವಿಲ್ಲದ ನಮಗೆ ಗಣಕೀಕರಣ ಬೇಡ) ಎಂಬಿತ್ಯಾದಿ ಘೋಷಣೆಗಳು ಜನಜನಿತಗೊಂಡವು.

ಎಲ್.ಐ.ಸಿ. ಆಡಳಿತ ತೆರೆಯಮರೆಯಲ್ಲಿ ಮುಂಬೈ ಕಚೇರಿಯಲ್ಲಿ ಗಣಕಯಂತ್ರವನ್ನು ಸ್ಥಾಪಿಸಿ, ಕಲ್ಕತ್ತೆಯಲ್ಲಿಯೂ ಅದನ್ನು ನೆಲೆಗೊಳಿಸುವ ಪ್ರಯತ್ನ ಆರಂಭಿಸಿದಾಗ ಈ ಹೋರಾಟ ತುತ್ತತುದಿಗೇರಿತು.

ಕಲ್ಕತ್ತೆಯ 'ಇಲಾಕೋ' ಕಟ್ಟಡದಲ್ಲಿ ಗಣಕಯಂತ್ರವನ್ನು ಸ್ಥಾಪಿಸಿಯೇ ಸ್ಥಾಪಿಸುತ್ತೇವೆ ಎಂದು ಎಲ್.ಐ.ಸಿ.ಯ ಅಧ್ಯಕ್ಷರು ಭುಜ ತಟ್ಟಿಕೊಂಡಾಗ "ಅದು ನಮ್ಮ ಹೆಣಗಳ ಮೇಲಷ್ಟೇ ಕಟ್ಟಡದೊಳಕ್ಕೆ ಹೋಗಲು ಸಾಧ್ಯ" ಎಂದರು ನೌಕರರು. 3.5.67 ರಿಂದ ಆರಂಭವಾಯಿತು. ಇತಿಹಾಸ ಪ್ರಸಿದ್ಧ "ಇಲಾಕೋ ಕಾವಲು" ನೌಕರರು, ಅವರ ಕುಟುಂಬದವರು, ಪ.ಬಂಗಾಳದ ಇತರ ಎಲ್ಲಾ ಕಾರ್ಮಿಕ ಸಂಘಗಳ ಕಾರ್ಯಕರ್ತರು ಈ ಕಟ್ಟಡದ ಸುತ್ತ ಹಗಲು-ರಾತ್ರಿಯೆನ್ನದೆ ಕಾವಲು ಕೂತರು. ಈ ಕಾರ್ಯಕ್ರಮದಲ್ಲಿ ಕಾಂ. ಜ್ಯೋತಿಬಸು, ಕಾಂ. ಜ್ಯೋತಿರ್ಮಯಿ ಬಸು, ಕಾಂ.ಸುದೀನ್ ಕುಮಾರ್, ಕಾಂ.ಜತಿನ್ ಚಕ್ರವರ್ತಿ ಮುಂತಾದವರ ಮುಂದೆ ರೂಪುಗೊಂಡ ಚಳವಳಿಯಲ್ಲಿ ಎಡರಂಗದ ಮುಖಂಡರೂ ಇದ್ದರು. ಹತ್ತೊಂಭತ್ತು ತಿಂಗಳು ಈ 'ಸಾವು ಬದುಕಿನ' ಹೋರಾಟ ನಡೆಯಿತು. ಪ.ಬಂಗಾಳದಲ್ಲಿ ಮತ್ತು ದೇಶಾದ್ಯಂತ ವಿಮಾ ನೌಕರರ ಮೇಲೆ ದಬ್ಬಾಳಿಕೆ ನಡೆಸಿದರೂ ಕೊನೆಗೂ ಎಲ್.ಐ.ಸಿ. ಆಡಳಿತ ಸೋಲೊಪ್ಪಿಕೊಳ್ಳಬೇಕಾಯಿತು.

ಕಲ್ಕತ್ತಾ ಬಂದರಿನಲ್ಲಿ ಹತ್ತೊಂಭತ್ತು ತಿಂಗಳು ಕಾದಿದ್ದ ಗಣಕಯಂತ್ರವನ್ನು ವಾಪಾಸು ಕಳಿಸಬೇಕಾಯಿತು ಹಾಗೂ ಆ ಸಾವಿರಾರು ಯುವ ಜನರ ಉದ್ಯೋಗವನ್ನು ಕಸಿದುಕೊಳ್ಳಲಿದ್ದ ಆ ಗಣಕೀಕರಣ ಯೋಜನೆಯನ್ನೇ ಕೈಬಿಡಬೇಕಾಯಿತು.

ಪ್ರಜಾಪ್ರಭುತ್ವ ಹಕ್ಕುಗಳಿಗಾಗಿ ಹೋರಾಟ

1970 ರ ದಶಕದಲ್ಲಿ ದೇಶದ ಆಳುವ ವರ್ಗಗಳು ತಮ್ಮ ಬಿಕ್ಕಟ್ಟನ್ನು ಪರಿಹರಿಸಿಕೊಳ್ಳಲು ಪ್ರಜಾಪ್ರಭುತ್ವ ಹಕ್ಕುಗಳ ಮೇಲೆ ಧಾಳಿ ಆರಂಭಿಸಿದವು. ಮುಖ್ಯವಾಗಿ ಸಂಘಟಿತ ಕಾರ್ಮಿಕರ ಹಕ್ಕುಗಳ ಮೇಲೆ ಈ ಧಾಳಿ ನಡೆದವು. 1974 ರ ಐತಿಹಾಸಿಕ ರೈಲ್ವೇ ಮುಷ್ಕರ ಈ ಹಿನ್ನೆಲೆಯಲ್ಲಿ ನಡೆಯಿತು. ಈ ಧೀರೋದಾತ್ತ ಹೋರಾಟವನ್ನು ಹತ್ತಿಕ್ಕಲು ಪ್ರಯತ್ನಿಸಿದ ಸರಕಾರ ನಂತ್ರರ ಇಂಡಿಯನ್ ಏರ್‌ಲೈನ್ಸ್ ಹೋರಾಟವನ್ನು ದಮನ ಮಾಡಿತು. ಇದೇ ರೀತಿ ಆಗ ಎಲ್.ಐ.ಸಿ. ನೌಕರರು ತಮ್ಮ ಬೇಡಿಕೆಗಳಿಗಾಗಿ ನಡೆಸುತ್ತಿದ್ದ ಹೋರಾಟವನ್ನು ಹತ್ತಿಕ್ಕಲೂ ಪ್ರಯತ್ನಿಸಿತು. ಎಲ್.ಐ.ಸಿ. ಯ ಆರು ವಿಭಾಗಗಳಲ್ಲಿ ಮೊತ್ತ ಮೊದಲ ಬಾರಿಗೆ ಲಾಕೌಟ್ ಘೋಷಿಸಿತು. ಎಐಐಇಎ ನೇತೃತ್ವದಲ್ಲಿ ವಿಮಾ ನೌಕರರು ಈ ಹೊಸ ಧಾಳಿಯನ್ನು ಯಶಸ್ವಿಯಾಗಿ ಎದುರಿಸಿದರು. ಲಾಕೌಟ್ ತೆರವು ಮಾಡಿ **1974 ರಲ್ಲಿ ಎಲ್.ಐ.ಸಿ. ಆಡಳಿತ ಒಂದು ಉತ್ತಮ ವೇತನ ಒಪ್ಪಂದಕ್ಕೆ ಸಹಿ ಹಾಕಬೇಕಾಯಿತು. ಆದರೆ ದೂರದೃಷ್ಟಿಯ ಎಐಐಇಎ ನಾಯಕತ್ವ ಈ ಹೋರಾಟದ ಫಲಗಳನ್ನು ಉಳಿಸಿಕೊಳ್ಳಲೂ ಹೋರಾಟ ನಡೆಸಬೇಕಾಗುತ್ತದೆ ಎಂದು ಎಚ್ಚರಿಸಿತು.** ಒಂದೇ ವರ್ಷದೊಳಗೆ ಎರಗಿದ ತುರ್ತುಪರಿಸ್ಥಿತಿಯ ಕರಾಳ ದಿನಗಳು ಆ ಎಚ್ಚರಿಕೆಯನ್ನು ನಿಜಗೊಳಿಸಿದವು.

ತುರ್ತು ಪರಿಸ್ಥಿತಿಯಲ್ಲೂ, ತುರ್ತುಪರಿಸ್ಥಿತಿಯ ನಂತರ ಅದನ್ನು ವಿರೋಧಿಸಿ ಅಧಿಕಾರಕ್ಕೆ ಬಂದ ಶಕ್ತಿಗಳು ಅವೇ ಕಾರ್ಮಿಕ-ವಿರೋಧಿ ನೀತಿಗಳನ್ನು ಮುಂದುವರೆಸಿದಾಗಲೂ ದೇಶದ ಕಾರ್ಮಿಕ ವರ್ಗ ನಡೆಸಿದ ಹೋರಾಟಗಳಲ್ಲಿಯೂ ಎಐಐಇಎ ಮುಂಚೂಣಿಯಲ್ಲಿತ್ತು. ಜನತಾ ಸರ್ಕಾರ ತರಬಯಸಿದ ಕೈಗಾರಿಕಾ ವಿವಾದ ಕಾನೂನಿನ ತಿದ್ದುಪಡಿ, ಭೂತಲಿಂಗ ಸಮಿತಿ ವರದಿ ಇತ್ಯಾದಿಗಳ ವಿರುದ್ಧ ಇಡಿ ದೇಶದ ನೌಕರರನ್ನು ಅಣಿನೆರೆಸುವಲ್ಲಿ ಎಐಐಇಎ ಕೂಡಾ ಮುಖ್ಯ ಪಾತ್ರವಹಿಸಿತು.

ಖಾಸಗೀಕರಣ-ವಿರುದ್ಧ ಹೋರಾಟ

ರಾಷ್ಟ್ರೀಕರಣದ ಘೋಷಣೆಯೊಂದಿಗೆ ಹೋರಾಟ ಆರಂಭಿಸಿದ ಎಐಐಇಎ ಈಗ ಕಳೆದ ಒಂದು ದಶಕದಿಂದ ಖಾಸಗೀಕರಣದ ವಿರುದ್ಧ ಹೋರಾಟದ ಮುಂಚೂಣಿಯಲ್ಲಿದೆ. ದೇಶದ ಇತರ ಕಾರ್ಮಿಕ ಸಂಘಟನೆಗಳು 1991 ರಲ್ಲಿ ನರಸಿಂಹರಾವ್ ಸರಕಾರ 'ಹೊಸ ಆರ್ಥಿಕ ನೀತಿ'ಯನ್ನು ಜಾರಿಗೆ ತಂದುದಿನಿಂದ ಆರಂಭಿಸಿದರೆ, ಎಐಐಇಎ ಅದಕ್ಕೂ ಎರಡು ವರ್ಷಗಳ ಮೊದಲೇ ಅಂದರೆ 1989 ರಲ್ಲಿಯೇ ಆರಂಭಿಸಿತು - ಅಮೆರಿಕಾ ಸಂಯುಕ್ತ ಸಂಸ್ಥಾನ ನಮ್ಮ ದೇಶದ ವಿಮಾ ರಂಗವನ್ನು ಪಡೆಯಲು ತನ್ನ ದೇಶದ ಕಾನೂನಾದ ಸೂಪರ್ 301 ರನ್ನು ಬಳಸುವ ಬೆದರಿಕೆ ಹಾಕಿದಾಗ. ಐಎಂಎಫ್-ವಿಶ್ವಬ್ಯಾಂಕ್ ಹೇರಿದ ನೀತಿಗಳನ್ನು ನಮ್ಮ ಕೇಂದ್ರ ಸರಕಾರ ಅನುಸರಿಸಲಾರಂಭಿಸಿದ ಮೇಲೆ ಎಐಐಇಎ ಆರಂಭಿಸಿದ ಈ ಚಳುವಳಿ ಹೊಸ - ಹೊಸ ಆಯಾಮಗಳನ್ನು ಪಡೆದು ಒಂದು ಜನಾಂದೋಲನವಾಗಿ ರೂಪುಗೊಳ್ಳುವಂತಾಯಿತು.

ದೇಶದ ಉದ್ದಗಲಕ್ಕೂ ವಿಮಾ ನೌಕರರು ವಿಮೆಯ ಖಾಸಗೀಕರಣ, ಸಾಮ್ರಾಜ್ಯಶಾಹಿ ಪ್ರೇರಿತ ಜಾಗತೀಕರಣದ ದುಷ್ಪರಿಣಾಮಗಳು ಇತ್ಯಾದಿಗಳ ಕುರಿತು ಸಮಾವೇಶಗಳನ್ನು ನಡೆಸಿದರು. ಜಾಥಾಗಳನ್ನು ನಡೆಸಿದರು. ಜನರ ಬಳಿಗೆ ಹೋಗಿ ದೇಶದ ಸ್ವಾವಲಂಬನೆ, ಸಾರ್ವಭೌಮತೆಗೆ, ಆ ಮೂಲಕ ಜನರ ಬದುಕಿಗೆ ಬಂದೊದಗಿರುವ ಆಪತ್ತನ್ನು ವಿವರಿಸಿದರು. ಜನರಿಂದ ಪತ್ರ ಚಳುವಳಿ ನಡೆಸಿದರು; ಪ್ರಜ್ಞಾವಂತ ಬುದ್ಧಿಜೀವಿಗಳು, ಚಿಂತಕರ ಬಳಿ ಸಾರಿ ಅವರು ಸರಕಾರಕ್ಕೆ ಮನವಿ ಪತ್ರಗಳನ್ನು ಸಲ್ಲಿಸುವಂತೆ ಮಾಡಿದರು.


ಒಂದೂವರೆ ಕೋಟಿ ಜನಾಭಿಪ್ರಾಯ ಸಂಗ್ರಹ

ಕೆಲವೇ ಕೆಲವು ಪಟ್ಟಭದ್ರ ಹಿತಾಸಕ್ತಿಗಳ ಅಭಿಪ್ರಾಯವನ್ನು ರಾಷ್ಟ್ರೀಯ ಒಮ್ಮತವೆಂದು ಬಿಂಬಿಸುವ ಸರಕಾರದ ಪ್ರಯತ್ನಗಳನ್ನು ಬಯಲುಗೊಳಿಸಲು 65 ಲಕ್ಷ ಸಹಿ ಸಂಗ್ರಹಿಸಿ ನಿಜವಾದ ರಾಷ್ಟ್ರೀಯ ಒಮ್ಮತ ಯಾವುದು ಎಂದು ತೋರಿಸಿಕೊಟ್ಟರು. ಈ ಚಳುವಳಿಯನ್ನು ಇನ್ನಷ್ಟು ತೀವ್ರಗೊಳಿಸಿ 1999 ರಲ್ಲಿ ಮತ್ತೆ ಕರಪತ್ರಗಳನ್ನು ಹಿಡಿದ ಸಾವಿರಾರು ವಿಮಾ ನೌಕರರು ಬೀದಿಗಿಳಿದರು. ಮನೆ-ಮನೆಗಳಲ್ಲಿ, ಮದುವೆ, ಸಮಾರಂಭಗಳು, ರಿಸೆಪ್ಷನ್, ಬಸ್ ನಿಲ್ದಾಣಗಳಲ್ಲಿ, ಚಲಿಸುವ ರೈಲಿನಲ್ಲಿ, ಶಾಲಾ ಕಾಲೇಜುಗಳಲ್ಲಿ, ಕಚೇರಿ-ಕಾರ್ಖಾನೆಗಳಲ್ಲಿ, ಸಂತೆ-ಜಾತ್ರೆಗಳಲ್ಲಿ, ಎಲ್ಲಿ ಜನ ಸೇರುತ್ತಾರೋ ಅಲ್ಲೆಲ್ಲಾ ವಿಮಾ ಖಾಸಗೀಕರಣದ ವಿರುದ್ಧ ಸಹಿ ಸಂಗ್ರಹಿಸಿದರು. **ಎಐಐಇಎ ನೇ 17ನೇ ಸಮ್ಮೇಳನದ ಒಂದು ಕೋಟಿ ಸಹಿ ಸಂಗ್ರಹಕ್ಕೆ ಕರೆ ನೀಡಿದರೆ ಅದಕ್ಕೆ ಓಗೊಟ್ಟು ವಿಮಾ ನೌಕರರು ಒಂದೂವರೆ ಕೋಟಿಗೂ ಹೆಚ್ಚು ಸಹಿಗಳನ್ನು ಸಂಗ್ರಹಿಸಿ ಸಂಸತ್ತಿಗೆ ಸಾದರಪಡಿಸಿದರು.** ಅಷ್ಟಕ್ಕೇ ನಿಲ್ಲದೆ ಜನಪ್ರತಿನಿಧಿಗಳನ್ನು, ಸಂಸತ್ ಸದಸ್ಯರನ್ನು ಎಲ್ಲಾ ರಾಜಕೀಯ ಪಕ್ಷಗಳನ್ನು ಭೇಟಿಯಾದರು. ಕಾಂಗ್ರೆಸ್ ಮತ್ತು ಬಿಜೆಪಿಯಂತಹ ಆಳುವ ವರ್ಗಗಳ ಪಕ್ಷಗಳೊಳಗೂ ಈ ಬಗ್ಗೆ ವಾದ-ವಿವಾದ ನಡೆಯುವಂತಾಯಿತು. ಆದರೂ ಬಿಜೆಪಿ ನೇತೃತ್ವದ ಸರಕಾರದ ಪ್ರಜಾಪ್ರಭುತ್ವ ವಿಧಿವಿಧಾನಗಳನ್ನೆಲ್ಲಾ ಬದಿಗೊತ್ತಿ, ತಾನೇ ಹಿಂದೊಮ್ಮೆ ವಿರೋಧಿಸಿದ ಐ.ಆರ್.ಡಿ.ಎ. ಮಸೂದೆಯನ್ನು ಪಾಸು ಮಾಡಿಸಿಕೊಂಡಿತು. ವಿಮಾ ರಂಗದಲ್ಲಿ ಮತ್ತೊಮ್ಮೆ ಖಾಸಗಿಯವರ ಲೂಟಿಗೆ ಈಗ ಅವಕಾಶ ಮಾಡಿಕೊಟ್ಟಿದೆ.

ಹೊಸ ಹಂತದಲ್ಲಿ ಹೋರಾಟ

ಆದರೂ ಎಐಐಇಎ ತನ್ನ ಖಾಸಗೀಕರಣ-ವಿರೋಧಿ ಚಳುವಳಿಯನ್ನು ನಿಲ್ಲಿಸಿಲ್ಲ. ಹೋರಾಟ ಹೊಸ ಹಂತ ತಲುಪಿದೆ ಎನ್ನುತ್ತದೆ ಎಐಐಇಎ. **ಈಗ ಖಾಸಗಿಯವರಿಗೆ ವಿಮಾ ರಂಗದಲ್ಲಿ ಅವಕಾಶವನ್ನೇನೋ ಕೊಡಲಾಗಿದೆ. ಆದರೆ ಎಲ್.ಐ.ಸಿ. ಮತ್ತು ಜಿ.ಐ.ಸಿ. ಯನ್ನು ಸಾರ್ವಜನಿಕ ರಂಗದಲ್ಲೇ ಉಳಿಸಿಕೊಳ್ಳಲು ಸಾಧ್ಯವಾಗಿದೆ. ಇದು ಸಾಧ್ಯವಾಗಿರುವುದು ಈ ಜನಾಂದೋಲನದಿಂದಾಗಿಯೇ.** ನರಸಿಂಹರಾವ್

ಮುಂದಿನ ಪುಟಕ್ಕೆ



1982 ರಲ್ಲಿ ಬೆಂಗಳೂರಿನಲ್ಲಿ ನಡೆದ 11ನೇ ಅಖಿಲ ಭಾರತ ಸಮ್ಮೇಳನದಲ್ಲಿ ಸುನೀಲ್ ಮೈತ್ರ ಮಾತನಾಡುತ್ತಿದ್ದಾರೆ. ವೇದಿಕೆಯಲ್ಲಿ ಮುಖಂಡರುಗಳಾದ ಸರೋಜ್ ಚೌಧರಿ, ಚಂದ್ರಶೇಖರ್ ಬೋಸ್, ಎಂ.ಎನ್.ಸುಂದರಂ ಮುಂತಾದವರು

ಗೂತೆನ್‌ಬರ್ಗ್ ಶೃಂಗಸಭೆ ಪ್ರತಿಭಟನೆಯಲ್ಲಿ ಗೋಳಿಬಾರು

ಅಮೆರಿಕದ ಅಧ್ಯಕ್ಷ ಬುಶ್‌ರ ಯುರೋಪು ಭೇಟಿ, ಹಿಂದಿನ ಯಾವುದೇ ಇಂತರ ಭೇಟಿಗಿಂತ ದುರಂತಮಯವಾಗಿ ಕೊನೆಗೊಂಡಿತು. ಬುಶ್‌ರ ಐದು ದೇಶಗಳ ಭೇಟಿಯಲ್ಲಿ ಎಲ್ಲೆಲ್ಲೂ ಅವರು ಪ್ರತಿಭಟನಾಕಾರನರನ್ನು ಎದುರಿಸ ಬೇಕಾಯಿತು. ಸ್ವೀಡನ್‌ನ ಗೂತೆನ್‌ಬರ್ಗ್‌ನಲ್ಲಿ ಯುರೋಪಿಯನ್ ಒಕ್ಕೂಟದ ಶೃಂಗಸಭೆಯಲ್ಲಿ ಬುಶ್ ವಿರುದ್ಧ ನಡೆದ ಪ್ರತಿಭಟನೆಯಲ್ಲಂತೂ ಗೋಳಿಬಾರು ನಡೆದು ಮೂವರು ಜನ ಸತ್ತರು. ಜಗತ್ತಿನ ನಾಶಕ್ಕೆಡೆಕೊಡಬಹುದಾದ 'ಓಜೋನ್ ರಂಧ್ರ' ಕ್ಕೆ ಕಾರಣವಾದ ರಾಸಾಯನಿಕ ಅನಿಲಗಳನ್ನು ಕಡಿಮೆ ಮಾಡುವ ಒಪ್ಪಂದವಾದ 'ಕ್ಯೋಟೋ ಒಪ್ಪಂದ' ವನ್ನು ಒಪ್ಪಲು ನಿರಾಕರಿಸಿದ್ದು, ಯುರೋಪಿನ ಭದ್ರತೆಗೆ ಅಗತ್ಯವಾದ ಅಮೆರಿಕ-ರಶ್ಯಾ ಕ್ಷಿಪಣಿ-ನಿಷೇಧ ಒಪ್ಪಂದವನ್ನು ಏಕಪಕ್ಷೀಯವಾಗಿ ರದ್ದು ಮಾಡುವ ಬುಶ್ ನಿರ್ಧಾರದ ವಿರುದ್ಧ ತೀವ್ರ ಪ್ರತಿಭಟನೆ ವ್ಯಕ್ತವಾಯಿತು. ಇದರ ಜತೆ ಬಂಡವಾಳಶಾಹಿ-ಜಾಗತೀಕರಣದ ಪ್ರತಿನಿಧಿಯಾಗಿ ಸಹ ಬುಶ್ ವಿರುದ್ಧ ಪ್ರತಿಭಟನೆ ಭೇಟಿಯ ಕಾಲದಲ್ಲಿ ನಡೆಯಿತು. ಬುಶ್‌ರ ಅಧಿಕೃತ ಮಾತುಕತೆಗಳಲ್ಲೂ ಯುರೋಪಿಯನ್ ನಾಯಕರಿಂದ ತೀವ್ರ ವಿರೋಧ ಎದುರಿಸಬೇಕಾಯಿತು. ಪರಾಮರ್ಶೆ ನಡೆಸದೆ ಏಕಪಕ್ಷೀಯ ನಿರ್ಧಾರವನ್ನು ತೆಗೆದುಕೊಂಡಿರುವುದನ್ನು ಹಲವು ನಾಯಕರು ಸಾರ್ವಜನಿಕವಾಗಿಯೇ ಖಂಡಿಸಿದರು. ಬುಶ್‌ಭೇಟಿ ನಂತರ ಅಮೆರಿಕ ಯುರೋಪು ಸಂಬಂಧ ಅತ್ಯಂತ ಹದಗೆಟ್ಟ ಪರಿಸ್ಥಿತಿಗೆ ತಲುಪಿದೆ.



ಯುರೋಪಿನಲ್ಲಿ ಬುಶ್‌ಗೆ ಹೋದಲ್ಲೆಲ್ಲ 'ಮಂಗಳಾರತಿ'!

ಸಾಮಾನ್ಯವಾಗಿ ಅಮೆರಿಕದ ಅಧ್ಯಕ್ಷರು ಆಯ್ಕೆಯಾದ ಮೇಲಿನ ಮೊದಲ ಯುರೋಪು ಭೇಟಿಯಲ್ಲಿ ಹಾರ್ದಿಕ ಸ್ವಾಗತ ಸಿಗಬೇಕಾಗಿತ್ತು. ಆದರೆ ಅಧ್ಯಕ್ಷ ಬುಶ್‌ರ ಮೊದಲ ಯುರೋಪಿಯನ್ ಭೇಟಿಯಲ್ಲಿ ಅವರಿಗೆ ಹೋದಲ್ಲೆಲ್ಲಾ 'ಮಂಗಳಾರತಿ' ಯಾಯಿತು. ಅವರು ಹೋದಲ್ಲೆಲ್ಲಾ ದೊಡ್ಡ ಪ್ರಮಾಣದಲ್ಲಿ ತೀವ್ರ ಪ್ರತಿಭಟನಾ ಪ್ರದರ್ಶನಗಳನ್ನು ಎದುರಿಸಬೇಕಾಯಿತು. ಅವರ ಅಧಿಕೃತ ಭೇಟಿಯೂ ಸಮರ್ಪಕವಾಗಿ ನಡೆಯಲಿಲ್ಲ. ಹಲವು ಹಿರಿಯ ಯುರೋಪಿಯನ್ ನಾಯಕರೂ, ಪತ್ರಿಕೆಗಳು ಬುಶ್‌ಗೆ ವಿರುದ್ಧವಾಗಿ ಸಾರ್ವಜನಿಕ ಹೇಳಿಕೆಗಳನ್ನು ನೀಡಿದವು.

ಬುಶ್ ಅವರ ಭೇಟಿಯಲ್ಲಿ ಸ್ಪೈನ್, ಬೆಲ್ಜಿಯಂ, ಸ್ವೀಡನ್, ಪೋಲೆಂಡ್ ಮತ್ತು ಸ್ಲೋವೇನಿಯಕ್ಕೆ ಭೇಟಿ ನೀಡಿದರು. ಬೆಲ್ಜಿಯಂ ಬ್ರಸ್ಸೆಲ್ಸ್‌ನಲ್ಲಿ ಬುಶ್ ನಾಟೋ ಪ್ರಧಾನ ಕಛೇರಿಗೆ ಭೇಟಿ ನೀಡಿದರೆ, ಸ್ವೀಡನ್ಸ್ ಗೂತೆನ್‌ಬರ್ಗ್‌ನಲ್ಲಿ ಯುರೋಪಿಯನ್ ಒಕ್ಕೂಟದ ಶೃಂಗಸಭೆಯಲ್ಲಿ ಹಾಜರಾದರು. ಸ್ಲೋವೇನಿಯಾದ ರಶ್ಯನ್‌ಅಧ್ಯಕ್ಷ ಪುಟಿನ್ ಜತೆ ಮಾತುಕತೆ ನಡೆಸಿದರು.

'ಪರಿಸರ, ಶಾಂತಿ-ವಿರೋಧಿ ಬುಶ್ ವಾಪಸು ಹೋಗು'

ಅಧ್ಯಕ್ಷ ಬುಶ್ ಯುರೋಪಿಯನ್ನರ ಜತೆ ಪರಾಮರ್ಶೆ ಮಾಡದೆ ತೆಗೆದುಕೊಂಡ ಹಲವು ಏಕಪಕ್ಷೀಯ ಉದ್ಧಟತನದ ನಿರ್ಧಾರಗಳು ಅವರ ವಿರುದ್ಧ ವ್ಯಾಪಕ ಪ್ರತಿಭಟನೆಗೆ ಮುಖ್ಯ ಕಾರಣಗಳಾಗಿದ್ದವು. ಕ್ಯೋಟೋ ಒಪ್ಪಂದ (ಓಝೋನ್ ರಂಧ್ರ ಮಾಡಿ ಹಾನಿಕಾರಕವಾಗಬಲ್ಲ ಒಪ್ಪಂದ) ವನ್ನು ಮನ್ನಿಸದಿರುವ ಬುಶ್ ನೀತಿ ಪರಿಸರವಾದಿಗಳು ಹಾಗೂ ಜನಪರ ಸಂಘಟನೆಗಳ ಕೋಪಕ್ಕೆ ಗುರಿಯಾಯಿತು. ಅದೇ ರೀತಿ ಯುರೋಪಿಗೆ 50ವರ್ಷಗಳಿಗಿಂತಲೂ ಹೆಚ್ಚುಕಾಲ ಶಾಂತಿ ತಂದ ಅಮೆರಿಕ-ರಶ್ಯ ಕ್ಷಿಪಣಿ ನಿಷೇಧ ಒಪ್ಪಂದ (1972) ವನ್ನು ರದ್ದು ಮಾಡುವ ಬುಶ್ ನೀತಿಗೂ ತೀವ್ರ ವಿರೋಧ ಕಂಡುಬಂತು. ಯುರೋಪಿನ ಭದ್ರತೆಗೆ ಮಾರಕವಾಗಬಲ್ಲ ಇಂತಹ ಪ್ರಮುಖ ನಿರ್ಧಾರದಲ್ಲಿ ಯುರೋಪಿನ ನಾಯಕರ ಜೊತೆ ಚರ್ಚೆ ಮಾಡದೆ ಏಕಪಕ್ಷೀಯವಾಗಿ ನಿರ್ಧರಿಸಿದ್ದು ಇನ್ನಷ್ಟು ಆಕ್ರೋಶಕ್ಕೆ ಕಾರಣವಾಯಿತು. ಬುಶ್‌ರ ಹೊಸ ತಾರಾ-ಸಮರದ ಪ್ರಸ್ತಾವವಂತೂ ಇಡೀ ಯುರೋಪನ್ನು ರೊಚ್ಚಿಗೊಬ್ಬಿಸಿದೆ. ಇದರ ಜತೆಗೆ ಬುಶ್ ಜನ-ವಿರೋಧಿ ಬಂಡವಾಳಶಾಹಿ- ಜಾಗತೀಕರಣದ ಪ್ರತೀಕವಾಗಿರುವುದರಿಂದ ಅದರ ವಿರುದ್ಧ ಪ್ರತಿಭಟನೆ ಬುಶ್-ವಿರೋಧಿ ಪ್ರದರ್ಶನಗಳಾದವು. ಇದಲ್ಲದೆ ಅಮೆರಿಕದಲ್ಲಿ ಮರಣದಂಡನೆ ಬಗ್ಗೆ ಮಾನವ ಹಕ್ಕು ಪ್ರತಿಪಾದಕರು ಪ್ರತಿಭಟಿಸಿದರು. ಇತ್ತೀಚೆಗೆ ಅಮೆರಿಕದಲ್ಲಿ ಮರಣದಂಡನೆಗೆ ಕಾದಿದ್ದು ನಿರಪರಾಧಿ ಎಂದು ಬಿಡುಗಡೆಯಾದ ಒಬ್ಬನ ಪ್ರಕರಣ ಬಯಲಾಗಿದ್ದು, ಇಂತಹ ಹಲವಾರು ಪ್ರಕರಣಗಳಿವೆ ಎಂಬ ವರದಿಯ ಹಿನ್ನೆಲೆಯಲ್ಲಿ ಅವರು ಪ್ರತಿಭಟಿಸುತ್ತಿದ್ದರು. ಹೀಗೆ ಯುರೋಪಿನ ರಾಜಕೀಯ-ಸಾಮಾಜಿಕ ಪ್ರಜ್ಞೆ ಇರುವ ಎಲ್ಲಾ ಜನವಿಭಾಗಗಳು ಬುಶ್ ಭೇಟಿ ಸಮಯ ಪ್ರತಿಭಟಿಸಿದರು.

'ಬುಶ್-ತಾಲಿಬಾನ್ ವಾಪಸು ಹೋಗು'

ಎಲ್ಲಾ ಕಡೆ ಸಾವಿರಾರು ಪ್ರತಿಭಟನಾಕಾರರು ಇದ್ದರು. 'ತಾರಾಸಮರ ಬೇಡ' 'ಬುಶ್ ತಾಲಿಬಾನ್' 'ಬುಶ್ ಟೆಕ್ಸಾಸ್ ಕೌಬಾಯ್ ಗಿರಿ ಇಲ್ಲಿ ಬೇಡ' 'ಬುಶ್-ವಾಪಸು ಹೋಗು' 'ಮರಣದಂಡನೆ-ಕಾನೂನುಬದ್ಧ ಕೊಲೆ' ಇತ್ಯಾದಿ ಬ್ಯಾನರ್‌ಗಳಿಂದ ಪ್ರತಿಭಟನಾಕಾರರು ಬುಶ್‌ಗೆ 'ಮಂಗಳಾರತಿ' ಎತ್ತಿದರು ಎಲ್ಲೆಡೆ. ಅತ್ಯಂತ ದೊಡ್ಡ ಪ್ರತಿಭಟನೆ ಸ್ವೀಡನ್‌ನ ಗೋತೆನ್‌ಬರ್ಗ್ ಪಟ್ಟಣದಲ್ಲಿ ನಡೆಯಿತು. 20 ರಿಂದ 25 ಸಾವಿರ ಜನ ಈ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ಯುರೋಪಿನ ಶೃಂಗಸಭೆ ನಡೆಯುತ್ತಿದ್ದ ಸ್ಥಳದ ಹತ್ತಿರ ಈ ಭಾರಿ ಪ್ರದರ್ಶನ ನಡೆಯಿತು. ಈ ಪ್ರತಿಭಟನೆಯಲ್ಲಿ ಪಾಲುಗೊಳ್ಳಲು ಯುರೋಪಿನಾದ್ಯಂತ ಅಲ್ಲದೆ, ಅಮೆರಿಕದಿಂದಲೂ ಪ್ರತಿಭಟನಾಕಾರರು



ಭಂದಿದ್ದರು. ಪ್ರತಿಭಟನೆ ಶಾಂತಿಯುತವಾಗೇ ಇತ್ತು. ಪ್ರತಿಭಟನಾಕಾರರು ಮೊದಲೇ ನೋಟೀಸ್ ಕೊಟ್ಟಿದ್ದು, ಅವರಿಗೆ ಪ್ರತಿಭಟನೆ ಜಾಗದ ಬಳಿ ಒಂದು ಸ್ಕೂಲ್‌ನಲ್ಲಿ ತಂಗಲು ವ್ಯವಸ್ಥೆಯಾಗಿತ್ತು. ಪ್ರತಿಭಟನಾಕಾರರು ತಂಗಿದ್ದ ಜಾಗದಿಂದ ಅವರನ್ನು ಖಾಲಿ ಮಾಡಲು ಪ್ರಯತ್ನಿಸಿದ್ದರಿಂದ ಮತ್ತು ಶಾಂತಿಯುತ ಪ್ರತಿಭಟನಾಕಾರರನ್ನು ಪ್ರಚೋದಿಸಿದ್ದರಿಂದ ಹಿಂಸಾಚಾರ ಆರಂಭವಾಯಿತು. ಶೃಂಗಸಭೆಯ ಜಾಗದ ಬಳಿ ಶಾಂತಿಯುತ ಪ್ರತಿಭಟನಾಕಾರರ ಮೇಲೆ ಕುದುರೆ ಸವಾರ ಪೋಲೀಸರ ಚಾಟಿ, ಬೇಟೆ ನಾಯಿಗಳೊಂದಿಗೆ ದಾಳಿ ಮಾಡಿದರು. ಆಮೇಲೆ ನಡೆದ ಹಿಂಸಾಚಾರ, ಗೋಳಿಬಾರಿನಲ್ಲಿ 3 ಜನ ಸತ್ತರು. 70 ಜನ ತೀವ್ರವಾಗಿ ಗಾಯಗೊಂಡರು. 500 ಜನ ರನ್ನು ಬಂಧಿಸಲಾಯಿತು. ಪೋಲೀಸರು ಈ ಹಿಂಸಾಚಾರ ತೀವ್ರ ಖಂಡನೆಗೆ ಒಳಗಾಯಿತು. ಸ್ವೀಡನ್‌ನ ಇತ್ತೀಚಿನ ಅತ್ಯಂತ ದೊಡ್ಡ ಪ್ರತಿಭಟನಾ ಪ್ರದರ್ಶನ ಇದಾಗಿತ್ತು. ಹಲವು ದಶಕಗಳಲ್ಲಿ ಪೋಲೀಸರು ಪ್ರತಿಭಟನಾಕಾರರ ಮೇಲೆ ಗೋಳಿಬಾರು ಮಾಡಿದ್ದೂ ಮೊದಲನೆಯ ಬಾರಿಯಾಗಿತ್ತು. ಆಮೇಲೆ ನಡೆದ ಹಿಂಸಾಚಾರದಲ್ಲಿ ಮಾಕ್‌ಡೋನಾಲ್ಡ್ (ಜಾಗತೀಕರಣದ ಪ್ರತೀಕವಾಗಿ ಹೊಮ್ಮುತ್ತಿರುವ ಅಮೆರಿಕನ್ ದೈತ್ಯ 'ದರ್ಶಿನಿ' ಚೈನ್) ನಾಶವಾದವು.

ಪತ್ರಿಕೆ, ನಾಯಕರಿಂದಲೂ ಟೀಕೆ

ಹೋದಲ್ಲೆಲ್ಲಾ ಪತ್ರಿಕಾ ಸಮ್ಮೇಳನಗಳಲ್ಲೂ ಕ್ಯೋಟೋ ಒಪ್ಪಂದ, ಕ್ಷಿಪಣಿ ನಿಷೇಧ ಒಪ್ಪಂದ, ಜಾಗತೀಕರಣ, ತಾರಾಸಮರ, ಮರಣದಂಡನೆ ಬಗ್ಗೆ ತೀಕ್ಷ್ಣ ಪ್ರಶ್ನೆ, ಟೀಕೆ, ಅವಹೇಳನ ಎದುರಿಸಬೇಕಾಯಿತು. ಯುರೋಪ್ ಪತ್ರಿಕೆಗಳು ಬುಶ್‌ಗೆ 'ಮಂಗಳಾರತಿ' ಎತ್ತಿದವು. ಪತ್ರಿಕೆಗಳು ಬುಶ್‌ರ ಅಮೆರಿಕದ ಯುರೋಪ್-ವಿರೋಧಿ, ಶಾಂತಿ ವಿರೋಧಿ ಏಕಪಕ್ಷೀಯ ನಿಲುವುಗಳನ್ನು ಕಟುವಾಗಿ ಟೀಕಿಸಿದವು.

ಅಧಿಕೃತ ಸಭೆಗಳಲ್ಲೂ ಬುಶ್ ಈ ವಿಷಯಗಳ ಬಗ್ಗೆ ನಾಯಕರಿಂದಲೇ ಟೀಕೆ ಎದುರಿಸಬೇಕಾಯಿತು. ಸ್ವೀಡನ್ ಮತ್ತು ಸ್ಪೈನ್ ಪ್ರಧಾನಮಂತ್ರಿಗಳು ಕ್ಯೋಟೋ ಒಪ್ಪಂದದ ಬಗ್ಗೆ ಅಮೆರಿಕದ ಏಕಪಕ್ಷೀಯ ನಿರ್ಧಾರವನ್ನು ಬುಶ್ ಸಮ್ಮುಖದಲ್ಲೇ ಸಾರ್ವಜನಿಕವಾಗಿ ಟೀಕಿಸಿದರು. ಯುರೋಪು ಶೃಂಗಸಭೆಯಲ್ಲೂ ಮೇಲೆ ಹೇಳಿದ ಎಲ್ಲಾ ವಿಷಯಗಳ ಬಗ್ಗೆ ಅಮೆರಿಕದ ಏಕಪಕ್ಷೀಯ ನಿಲುವುಗಳನ್ನು ಟೀಕಿಸಲಾಯಿತು. ಬುಶ್ ಯುರೋಪ್ ಭೇಟಿಯ ಒಂದು ಉದ್ದೇಶ ತನ್ನ ಏಕ-ಪಕ್ಷೀಯ ಉದ್ಧಟತನದ ನಿಲುವಿಗೆ ಯುರೋಪಿನ ದೇಶಗಳ ಸರ್ಕಾರಗಳನ್ನು ಮಣಿಸುವುದು ಆಗಿತ್ತು. ಆದರೆ ಆ ಉದ್ದೇಶ ಪೂರ್ಣವಾಗಿ ವಿಫಲವಾಯಿತು. ಯುರೋಪಿಯನ್ ಶೃಂಗಸಭೆ ಬುಶ್ ಸಮ್ಮುಖದಲ್ಲೇ ನಾಟೋ ಬದಲಾಗಿ ಯುರೋಪಿನ ಭದ್ರತೆಗೆ 'ಕ್ಷಿಪ್ರ ಕಾರ್ಯಾಚರಣೆ ಪಡೆ' ವಿಸ್ತರಿಸಲು ನಿರ್ಧರಿಸಲಾಯಿತು.

ರಶ್ಯನ್ ಅಧ್ಯಕ್ಷ ಪುಟಿನ್ ಜತೆ ಶೃಂಗಸಭೆ ಹೊರನೋಟಕ್ಕೆ ಹಾರ್ದಿಕ ವಾತಾವರಣದಲ್ಲಿ ನಡೆದರೂ, ಅಮೆರಿಕದ ತಾರಾಸಮರದ ಬಗ್ಗೆ ತಮ್ಮ ನಿರ್ಧಾರವನ್ನು ಸ್ಪಷ್ಟವಾಗಿ ಹೇಳಲು ಪುಟಿನ್ ಮರೆಯಲಿಲ್ಲ. ಇದಲ್ಲದೆ ಪುಟಿನ್ ಚೀನಾ ಮತ್ತು ಇತರ 5 ಮಾಜಿ ಸೋವಿಯತ್ ಕೇಂದ್ರ - ಏಶ್ಯಾ ಗಣರಾಜ್ಯಗಳ ಜತೆ ಶೃಂಗಸಭೆಯಿಂದ ನೇರವಾಗಿ ಬಂದಿದ್ದರು. ಅದೇ ಬುಶ್‌ಗೆ ಅಗತ್ಯವಾದ ಸಂದೇಶವನ್ನು ಕೊಟ್ಟಿತ್ತು. ರಶ್ಯಾ, ಚೀನಾ, ಕೇಂದ್ರ-ರಶ್ಯಾ ಗಣರಾಜ್ಯಗಳ ಶೃಂಗಸಭೆಯಲ್ಲಿ ಆರ್ಥಿಕ-ಮಿಲಿಟರಿ ಸಹಕಾರದ ಒಪ್ಪಂದಕ್ಕೆ ಸಹಿ ಹಾಕಲಾಗಿತ್ತು.

ಒಟ್ಟಾರೆಯಾಗಿ ಬುಶ್‌ರ ಹೊಸ ಆಕ್ರಾಮಕ, ಉದ್ಧಟತನದ ವಿದೇಶಿ ನೀತಿಗೆ ಯುರೋಪಿನಾದ್ಯಂತ ಸ್ಪಷ್ಟ ಪ್ರತಿಭಟನೆ ವ್ಯಕ್ತವಾಯಿತು. ಅಮೆರಿಕ-ಯುರೋಪು ಸಂಬಂಧ ಪಾತಾಳಕ್ಕೆ ಇಳಿದಿದೆ. ಬುಶ್‌ರ ನೀತಿ ಹೀಗೆ ಮುಂದುವರೆದರೆ ಸಂಬಂಧ ತೀರಾ ಹದಗೆಟ್ಟರೆ ಆಶ್ಚರ್ಯವೇನಿಲ್ಲ.

- ಶರತ್ ಚಂದ್ರ

..............ಎಐಐಇ ಗೆ ಐವತ್ತು ವರ್ಷ

ಸರಕಾರ ನೇಮಿಸಿದ ಮಲ್ಹೋತ್ರ ಸಮಿತಿ ಈ ಎರಡು ಸಾರ್ವಜನಿಕ ವಲಯದ ಹಣಕಾಸು ಸಂಸ್ಥೆಗಳನ್ನೂ ಖಾಸಗೀಕರಿಸಬೇಕು ಎಂದು ಶಿಫಾರಸು ಮಾಡಿತ್ತು ಎಂಬುದನ್ನು ಗಮನಿಸಬೇಕು. ಏಕೆಂದರೆ ಎಲ್.ಐ.ಸಿ. ಸಾರ್ವಜನಿಕ ರಂಗದಲ್ಲಿ ಇದುವರೆಗೆ ಖಾಸಗಿ ವಿಮಾ ಕಂಪನಿಗಳು ತಮ್ಮ ಲೂಟಿ ನಡೆಸಲು ಸಾಧ್ಯವಾಗುವುದಿಲ್ಲ ಎಂಬುದು ಎಲ್ಲರಿಗೂ ತಿಳಿದಿರುವ ಸಂಗತಿ. ತಮ್ಮ ಉಳಿತಾಯದ ಹಣ ಎಲ್ಲಿ ಭದ್ರವಾಗಿರುತ್ತದೆ, ಸಮಾಜಕ್ಕೆ ಉಪಯೋಗವಾಗಿರುತ್ತದೆ ಎಂಬುದನ್ನು ಜನರಿಗೆ ಮನಗಾಣಿಸುವಲ್ಲಿ ಎಐಐಇಎ ಪ್ರಚಾರ-ಪ್ರಕ್ಷೋಭೆ ಸಾಕಷ್ಟು ಯಶಸ್ವಿಯಾಗಿದೆ. ಆದ್ದರಿಂದಲೇ ಈ ವರ್ಷ ಎಲ್.ಐ.ಸಿ.ಯ ವ್ಯವಹಾರದಲ್ಲಿ ಅಭೂತಪೂರ್ವ ಪ್ರಗತಿ ದಾಖಲಾಗಿದೆ.

ಎಐಐಇಎ ತನ್ನ ಸುವರ್ಣಮಹೋತ್ಸವವನ್ನು ಕೂಡಾ ಖಾಸಗೀಕರಣ-ವಿರೋಧಿ ಚಳುವಳಿಯ ಭಾಗವಾಗಿಯೇ ರೂಪಿಸಿದೆ. ಹಲವು ಕೇಂದ್ರಗಳಲ್ಲಿ ಸಮಾವೇಶಗಳನ್ನು ನಡೆಸಲಾಗಿದೆ. ಮುಖ್ಯವಾಗಿ ಆರ್ಥಿಕ ಬೆಳವಣಿಗೆಯ ಪರ್ಯಾಯ ದಾರಿಯ ಬಗ್ಗೆ ಜನರಲ್ಲಿ ಅರಿವು ಮೂಡಿಸಲು ಪ್ರಯತ್ನಿಸುತ್ತದೆ.

ಈ ಮೇಲೆ ನೋಡಿದಂತೆ ಕಳೆದ ಐವತ್ತು ವರ್ಷಗಳಲ್ಲಿ ಎಐಐಇಎ **'ಜೀವನವೇ ಹೋರಾಟ, ಹೋರಾಟವೇ ಜೀವನ' ಎಂಬ ತತ್ವವನ್ನು ತನ್ನ ಸದಸ್ಯರಲ್ಲಿ ಮೈಗೂಡಿಸಿದೆ. ತನ್ನ ಸುವರ್ಣ ಮಹೋತ್ಸವದ ಸಂದರ್ಭದಲ್ಲೂ ಹೋರಾಟದ ಹಾದಿಗೆ ತನ್ನನ್ನು ಮತ್ತೆ ಸಮರ್ಪಿಸಿಕೊಳ್ಳುತ್ತಿದೆ.** ಏಕೆಂದರೆ "ನಮ್ಮ ಈ ಹಾದಿಯ ಕೊನೆಯಲ್ಲಿದೆ ನಮ್ಮ ಕನಸಿನ ಸಮಾಜ. ಅಲ್ಲಿ ಮುದ್ದು ಮಕ್ಕಳು ಹಸಿವ ಹಿಂಗಿಸಲು ಭಿಕ್ಷೆಗೆ ಕೈಚಾಚುವುದಿಲ್ಲ. ಮಹಿಳೆಯರು ದೇಹ ಮಾರಾಟಕ್ಕಿಳಿಯುವುದಿಲ್ಲ. ತಂದೆ ತನ್ನ ಮಕ್ಕಳನ್ನು ನಡು ನೀರಿನಲ್ಲಿ ಕೈಬಿಡುವುದಿಲ್ಲ. ಬದುಕಿನ ದಿಗಂತ ಸಾವಿರ ಕಾಮನಬಿಲ್ಲುಗಳಿಂದ ವರ್ಣಮಯ ವಾಗಿರುವ ಸಮಾಜ ಅದು. ಮಕ್ಕಳು ಆಡುವ, ನಲಿಯುವ, ವಯಸ್ಕರು ಶ್ರದ್ಧೆಯಿಂದ ದುಡಿಯುವ, ಮಹಿಳೆಯರು ಜೀವನಗೀತೆಯನ್ನು ಗುನುಗುವ, ಬದುಕು ಉದಯ ಸೂರ್ಯನ ಮೊದಲ ಕಿರಣಗಳಲ್ಲಿ ಹೊಳೆವ ಇಬ್ಬನಿಯಲ್ಲಿ ಮಿಂದ ಗುಲಾಬಿಯ ಪಕಳೆಗಳಂತಿರುವ ಸಮಾಜ ಅದು" ಎಂದು ಅಖಿಲ ಭಾರತ ವಿಮಾ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಕಾಂ. ಸರೋಜ್ ಚೌಧರಿಯವರ ಉದ್ಗಾರ ಎಐಐಇಎ ಸದಸ್ಯರಿಗೆ ಸದಾ ಮಾರ್ಗದರ್ಶಕ ಸೂತ್ರ.

- ಕೆ.ವೇದರಾಜ್

ನಿರ್ಲಕ್ಷಿತ ಕಥಾವಸ್ತುವಿನ ಅದ್ಭುತ ಸಿನಿಮಾ

ಸಿನಿಮಾ

"ಶ್ರದ್ಧೆಯಿಂದ, ಧೃಡ ಮನಸ್ಸಿನಿಂದ ಮಾಡುವ ಎಲ್ಲ ಕೆಲಸವೂ ನಿರೀಕ್ಷಿತ ಫಲಿತಾಂಶ ನೀಡಿಯೇ ನೀಡುತ್ತದೆ. ಈ ಭೂಮಿ ನಮ್ಮದು, ಇದರ ಮೇಲಿನ ಹಕ್ಕು ನಿಮ್ಮದು. ಬನ್ನಿ ಒಂದಾಗಿ ಹೋಗೋಣ, ಪಂದ್ಯ ಗೆಲ್ಲೋಣ.." ನಮ್ಮ ಮಧ್ಯೆ ಸದಾ ಕೇಳುವ ಈ ಮಾತುಗಳು ಬೆಳ್ಳಿ ಪರದೆಯ ಮೇಲೆ ಭವನ್ (ಅಮೀರ್ ಖಾನ್) ಲಗಾನ್ ಸಿನಿಮಾದಲ್ಲಿ ಆಡುವ ಮಾತುಗಳಿವು.

200 ವರ್ಷದ ಬ್ರಿಟಿಷರ ದಾಸ್ಯದ ವಿರುದ್ಧದ ಹೋರಾಟದ ಹಲವು ರೋಮಾಂಚನಗೊಳಿಸುವ ವೀರಗಾಥೆಗಳನ್ನು ನಾವು ಕೇಳಿದ್ದೇವೆ. ಚರಿತ್ರೆಯ ಪುಟಗಳಲ್ಲಿ ಬರುವ ಸಾಮಾನ್ಯವಾಗಿ ಎಲ್ಲರಿಗೂ ಗೊತ್ತಿರುವ ದೊಡ್ಡವರ ಕಥೆಗಳು ನಮಗೆ ಹೇಳಲಾಗುತ್ತವೆ. ಆದರೆ ಭಾರತದ ಅತ್ಯಂತ ಮೂಲೆಯ ಹಳ್ಳಿ ಹಳ್ಳಿಗಳಲ್ಲಿ ಪರಕೀಯರ ದಬ್ಬಾಳಿಕೆಯನ್ನು ಸಹಿಸದೇ ಸಿಡಿದೆದ್ದ ಲಕ್ಷಾಂತರ ಎಲೆ ಮರೆಯ ಕಾಯಿಗಳ ಕಥೆಗಳಿವೆ. ಯಾವುದೇ ರಾಜಕೀಯ ಪಕ್ಷದ ಭಾಗವಾಗದೇ, ತಮ್ಮ ಹಳ್ಳಿಗಷ್ಟೇ ಸೀಮಿತವಾಗಿಯೇ ಆದರೂ ಬ್ರಿಟಿಷ್ ಸಾಮ್ರಾಜ್ಯಶಾಹಿಗೆ ಸವಾಲೆಸೆದ ನೂರಾರು ಘಟನೆಗಳು ಚರಿತ್ರೆ ಕಾದಂಬರಿಕಾರರಿಗೆ ಕಂಡಿಲ್ಲ. ಅಂತಹ ಒಂದು ಘಟನೆಯೇ ಈ ಚಿತ್ರದ ವಸ್ತು. ಮೇಲ್ನೋಟಕ್ಕೆ ಇಡೀ ಚಿತ್ರ ಒಂದು ಕ್ರಿಕೆಟ್ ಮ್ಯಾಚ್ ಎನಿಸುವಂತಿದೆ. ಆದರೆ "ಹನ್ನೊಂದು ಜನ ಮೂರ್ಖರು ಆಡಿ ಹನ್ನೊಂದು ಸಾವಿರ ಮೂರ್ಖರು ವೀಕ್ಷಿಸುವ" ಆಟವೆಂದೇ ಕೆಲವರಿಂದ ಹೇಳಿಸಿಕೊಳ್ಳುವ ಕ್ರಿಕೇಟ್ ಕೂಡ ಬ್ರಿಟಿಷ್ ಸಾಮ್ರಾಜ್ಯವನ್ನೊಮ್ಮೆ ಕಂಗೆಡಿಸಿತ್ತು. ಸ್ವಾತಂತ್ರ್ಯದ ಹೆಬ್ಬಯಕೆಯನ್ನು ಬಿತ್ತಿತ್ತು ಎನ್ನುವುದು ಕಥಾ ವಸ್ತು.



ಇತ್ತೀಚಿಗಷ್ಟೇ ಭೀಕರ ಭೂಕಂಪಕ್ಕೆ ತುತ್ತಾದ ಗುಜರಾತಿನ ಭುಜ್ ಸಿನಿಮಾ ಚಿತ್ರೀಕರಣಗೊಂಡ ಸ್ಥಳ. ಎರಡು ವರ್ಷಗಳ ಸತತ ಪರಿಶ್ರಮದಿಂದ 25 ಕೋಟಿ ವೆಚ್ಚದಲ್ಲಿ ನಿರ್ಮಾಣವಾದ ಸಿನಿಮಾವಿದು. ಒಟ್ಟು ಸಿನಿಮಾ ಅವಧಿ 3 ಗಂಟೆ 40 ನಿಮಿಷಗಳು

ಗುಜರಾತಿನ ಮೂಲೆಯ ಹಳ್ಳಿ ಚಂಪಾರಣ ಭೀಕರ ಬರಗಾಲಕ್ಕೆ ತುತ್ತಾಗಿ ಜನ ಕಂಗಾಲಾಗಿರುತ್ತಾರೆ. ಬ್ರಿಟಿಷ್ ಆಡಳಿತಗಾರರಿಗೆ ಸಲ್ಲಿಸಬೇಕಾದ ಕರ (ಧಾನ್ಯರೂಪದಲ್ಲಿ)ವನ್ನು ಸಲ್ಲಿಸಲಾಗದ ಪರಿಸ್ಥಿತಿಯನ್ನು ಪ್ರಾಂತದ ಕ್ಯಾಪ್ಟನ್‌ಗೆ ಅರಿಕೆ ಮಾಡಲೆಂದು ಪ್ರಜಾ ಪ್ರತಿನಿಧಿಯಾಗಿ ಬಂದ ಮಹಾರಾಜನಿಗೆ ಕ್ಯಾಪ್ಟನ್ ಕರ ಮನ್ನಾ ಮಾಡಲು ಒಪ್ಪಲು ಒಂದು ಷರತ್ತು ವಿಧಿಸುತ್ತಾನೆ. ಅದೆಂದರೆ ತನ್ನ ಜೊತೆ ರಾಜ 'ಮಾಂಸದೂಟ' ತಿನ್ನಬೇಕು' ಎಂದು. ಮಹಾರಾಜ ನಿರಾಕರಿಸುತ್ತಾನೆ ಯಾವುದೇ ಕಾರಣಕ್ಕೂ ಶಾಖಾಹಾರಿಯಾದ ತಾನು ಮಾಂಸಾಹಾರ ಮಾಡಲು ಸಾಧ್ಯವಿಲ್ಲ ಎಂದು ವಿನಂತಿಸುತ್ತಾನೆ. ಕುಹಕಿ ಕ್ಯಾಪ್ಟನ್ ಹಾಗಾದರೆ ಈ ಬಾರಿ ದುಪ್ಪಟ್ಟು ಧಾನ್ಯ ನೀಡಬೇಕೆಂದು ಆದೇಶ ಹೊರಡಿಸುತ್ತಾನೆ. ಇಡೀ ಪ್ರಾಂತಕ್ಕೆ ಈ ಸಂದೇಶ ಸಾರಲ್ಪಡುತ್ತದೆ. ಹೀಗೆ ಹೇರಿದ ಕೃಷಿ ತೆರಿಗೆಯೇ 'ಲಗಾನ್'.

ಸಿನಿಮಾದ ನಾಯಕನ ಊರಾದ ಚಂಪಾರಣದಲ್ಲಿ ಜನ ಭಯ ಭೀತರಾಗುತ್ತಾರೆ. ತಿನ್ನಲು ಗತಿ ಇಲ್ಲದ ಪರಿಸ್ಥಿತಿಯಲ್ಲಿ ದುಪ್ಪಟ್ಟು ಕರ! ಬಿಸಿ ರಕ್ತದ ಯುವಕ ಭವನ್ ಇದನ್ನು ವಿರೋಧಿಸುತ್ತಾನೆ. ಊರಿನ ಎಲ್ಲರನ್ನೂ ಹುರಿದುಂಬಿಸಿ ರಾಜನ ಬಳಿ ಮನವಿ ಸಲ್ಲಿಸಲು ಒಪ್ಪಿಸುತ್ತಾನೆ. ರಾಜನ ಭೇಟಿಗೆ ತೆರಳಿದಾಗ ಪ್ರಾಂತದ ಅಧಿಕಾರಿಯ ಚಟಗಳಲ್ಲಿ ಒಂದಾದ ಕ್ರಿಕೆಟ್ ಮ್ಯಾಚ್ ನಡೆಯುತ್ತಿರುತ್ತದೆ. ರಾಜ ವೀಕ್ಷಿಸುತ್ತಿರುತ್ತಾನೆ. ರಾಜನಿಗಾಗಿ ಕಾಯುತ್ತ ತಮ್ಮೂರಿನ ಚಿನ್ನಿ ದಾಂಡು ಹೋಲುವ ಪದೇ ಪದೇ ಒಬ್ಬ ವ್ಯಕ್ತಿ ಮೇಲೆ ಕೈ ತೋರುವುದು, ಆಚೆಯವ ಮರದ ಹಲಗೆಯಂತದೊಂದನ್ನು ಹೆಗಲ ಮೇಲಿಟ್ಟು ಆಚೀಚೆನಡೆಯುವುದು ಒಂದು ವಿಚಿತ್ರವೆನ್ನುವಂತೆ ನೋಡುತ್ತಿರುತ್ತಾರೆ. ಆಗ ದಾಂಡಿಗ ಬಾರಿಸಿದ ಚೆಂಡು ಬೌಂಡರಿ ದಾಟಿ ಒಂದು ಗುಂಪಿನ ಮೇಲೆ ಬೀಳುತ್ತದೆ. ಅದನ್ನು ವಿಚಿತ್ರವೆಂಬಂತೆ ಹಿಡಿದು ನೋಡುವಾಗ 'ಭುವನ್' ಚೆಂಡಿನ ಕುರಿತು ಆಡುವ ಒಂದು ಮಾತು ಚೆಂಡು ತೆಗೆಯಲು ಬಂದ ಆಟಗಾರನನ್ನು ಸಿಟ್ಟಿಗೇಳಿಸುತ್ತದೆ. ಇಡೀ ಸಿನಿಮಾ ತನ್ನ ತಿರುವನ್ನು ಅಲ್ಲಿ ಪಡೆಯುತ್ತದೆ.

ಶಾಖಾಹಾರಿ ರಾಜನನ್ನು ಮಾಂಸಾಹಾರಕ್ಕೆ ಧೂತ್ಕರಿಸಿದಂತೆ ಕುಹಕಿ ಕ್ಯಾಪ್ಟನ್ ಭುವನ್‌ಗೆ ತನ್ನನ್ನು ಕ್ರಿಕೆಟ್‌ನಲ್ಲಿ ಸೋಲಿಸುವಂತೆ ಸವಾಲೊಡ್ಡುತ್ತಾನೆ. ಆ ಮೂಲಕ 3 ವರ್ಷಗಳ ಕಾಲ "ಕರ ಮನ್ನಾ" ಇಡೀ ಪ್ರಾಂತಕ್ಕೆ ಪಡೆದುಕೊ ಎಂದು ವ್ಯಂಗ್ಯವಾಡುತ್ತಾನೆ. ಆ ಕ್ಷಣದಲ್ಲಿ ಇಡೀ ಹಳ್ಳಿಯ ಜನತೆ ದಿಕ್ಕು ಗೆಟ್ಟಂತಾಗುತ್ತಾರೆ. ಅವರೆಲ್ಲರ ಮನಸ್ಸಿನಲ್ಲಿ "ಎತ್ತಣ ಮಾಮರ ಎತ್ತಣ ಕೋಗಿಲೆ" ಪರಂಗೀಯರ ಬಿಳಿ ಉದ್ದ ಪೈಜಾಮದವರ ಜೊತೆ ಅವರ ಆಟ ನಾವು ಆಡುವುದು ಹೇಗೆ?

ಪ್ರಾಥಮಿಕವಾಗಿ ಎಲ್ಲರ ವಿರೋಧ, ಆದರೆ - ನಾಯಕನ ನಿರಂತರ ಚಲಬಿಡದ ಪ್ರಯತ್ನ ಇಡೀ ಹಳ್ಳಿಯವರ ಮನಸ್ಸನ್ನು ಗೆಲ್ಲಲು ಸಹಾಯಕವಾಗುತ್ತದೆ. ಮೀರ್ ಸಾಧಕರು ಎಲ್ಲೆಡೆಯೂ ಇರುತ್ತಾರೆ. ಅಂತೆಯೇ ಬ್ರಿಟಿಷ್ ಸಾಮ್ರಾಜ್ಯದ ಪ್ರಜೆಗಳಲ್ಲಿ ಯೂ ನಿರಂಕುಶ ಪ್ರಭುತ್ವ ನಡೆಸುವ ಅನ್ಯಾಯ, ದಬ್ಬಾಳಿಕೆಗಳನ್ನು ವಿರೋಧಿಸುವ ಮುಗ್ಧ ಭಾರತೀಯರ ಪರವಾದ ಅನುಕಂಪದ ಭಾವನೆ ಹೊಂದಿದ ಜನರಿದ್ದರು ಎಂಬುದನ್ನೂ ಚಿತ್ರದಲ್ಲಿ ತೋರಿಸುತ್ತಾರೆ. ಕ್ಯಾಪ್ಟನ್‌ನ ತಂಗಿ ಹಳ್ಳಿಗರಿಗೆ ಸಹಾಯಕಳಾಗಿ ನಿಂತು ಆಟ ಕಲಿಸುತ್ತಾಳೆ. ಎಲ್ಲ ಇತಿ ಮಿತಿಗಳ ನಡುವೆಯೇ ಬ್ರಿಟಿಷ್ ತಂಡದ ಮೋಸದಾಟದ ನಡುವೆಯೂ ಹಳ್ಳಿಗರ ತಂಡ ಕೊನೆಯ ಕ್ಷಣದ ಚೆಂಡಿನಿಂದ ಗೆಲ್ಲುತ್ತದೆ. ಹಳ್ಳಿಗರ ತಂಡದಲ್ಲಿ ನಾಯಕಿಯನ್ನು ಆಸೆಪಡುವ ವ್ಯಕ್ತಿ ಮೀರ್ ಸಾದಕನಾಗಿ ಸೇರಿಕೊಂಡು ಎರಡು ಬಗೆಯಲು ಪ್ರಯತ್ನಿಸುತ್ತಾನೆ ಅದನ್ನೂ ಕಂಡು ಹಿಡಿದು ಅವನಿಗೆ ಅವನು ಮಾಡುತ್ತಿರುವ ತಪ್ಪು ತಿಳಿಸಿ ಸರಿ ಆಡುವಂತೆ ಮನ ಒಲಿಸಲಾಗುತ್ತದೆ.

ಬ್ರಿಟಿಷ್ ಸಾಮ್ರಾಜ್ಯದ ಅಧಿಕಾರಿಗಳು ಪಂಥಕೇಳಿಯೇ ಕುಪಿತರಾಗಿ ಕ್ಯಾಪ್ಟನ್‌ನಿಗೆ ಎಚ್ಚರಿಕೆ ಕೊಟ್ಟಿರುತ್ತಾರೆ. ಪಂದ್ಯ ಸೋತ ದ.ಆಫ್ರಿಕಾಕ್ಕೆ ರವಾನೆ ಮತ್ತು ಹಳ್ಳಿಗರಿಂದ ಬರಬೇಕಾದ "ಕರ" ಅವನಿಂದ ವಸೂಲು ಮಾಡಲ್ಪಡುತ್ತದೆ. ಒಟ್ಟು ಸಿನಿಮಾ ಕ್ರಿಕೆಟ್ ಮೂಲಕವೇ ನೋಡುವಂತಾದರೂ ಇಡೀ ಚಿತ್ರದಲ್ಲಿ ಬರುವ ಪ್ರೇಮ ಪ್ರೀತಿಗಳು ಎಲ್ಲಿಯೂ ಮೂಲ ವಸ್ತುವಿನಿಂದ ಹೊರ ಹೋಗುವುದಿಲ್ಲ. ಜೊತೆಗೆ ಸ್ವಾತಂತ್ರಗಂಗೆಗೆ ಸಾವಿರ ತೊರೆಗಳು ಎನ್ನುವಂತೆ ಮತ್ತು ನಾಯಕನೊಬ್ಬನೇ ಎಲ್ಲವನ್ನೂ ಮಾಡಿಬಿಡಬಲ್ಲ ಎಂದು ಸಾಮಾನ್ಯವಾಗಿ ಎಲ್ಲ ಸಿನಿಮಾಗಳಲ್ಲಿ ತೋರಿಸುವ ಪ್ರವೃತ್ತಿಗೆ ವ್ಯತಿರಿಕ್ತವಾಗಿ ಸಂಘಟನೆಯ ಪ್ರಾಮುಖ್ಯತೆಯನ್ನು ತೋರಿಸಿದ್ದಾರೆ. ಸಾಮಾ, ದಾನ, ಬೇದ ಗಳಿಲ್ಲದ ಮೂಲಕ ಇಡೀ ಹಳ್ಳಿಯನ್ನು ಸಂಘಟಿಸುವ ರೀತಿ ಮಾದರಿಯಾಗಿದೆ. ಸಿನಿಮಾದ ಒಟಕ್ಕೆ ಯಾವುದೇ ಚ್ಯುತಿ ಭಾರದಂತೆ ಅಸ್ಪೃಶ್ಯತೆಯ ವಿರುದ್ಧ ಕೂಡ ಧ್ವನಿ ಎತ್ತುತ್ತಾನೆ. ಮನುಷ್ಯರನ್ನು ಮನುಷ್ಯರನ್ನಾಗಿ ಕಾಣುವ ಅವಶ್ಯಕತೆಯನ್ನು ಬಿಂಬಿಸುತ್ತಾನೆ. ಇಡೀ ಹಳ್ಳಿಯಲ್ಲಿ ಅಸ್ಪೃಶ್ಯವಾಗಿದ್ದ ಅಂಗವಿಕಲ ವ್ಯಕ್ತಿ ಸಾಮ್ರಾಜ್ಯಶಾಹಿಯ ವಿರುದ್ಧದ ಹೋರಾಟದಲ್ಲಿ ಕೈ ಜೋಡಿಸಿದ್ದನ್ನು ತೋರಿಸುವ ಮೂಲಕ ಸ್ವಾತಂತ್ರ ಕೇವಲ ಕೆಲವರಿಂದ ಬಂದುದಲ್ಲಿ. ಭಾರತದ ಜನ ಸಮೂಹ ಇದಕ್ಕಾಗಿ ಹೋರಾಟ ಮಾಡಿದೆ ಎಂಬುದನ್ನು ತೋರಿಸಿದೆ. ಒಟ್ಟು ಸಿನಿಮಾದ ಅರ್ಧಭಾಗ ಕ್ರಿಕೆಟ್ ಮ್ಯಾಚ್. ಆದರೆ ನನ್ನಂತಹ ಕ್ರಿಕೆಟ್ ಪ್ರಿಯರಲ್ಲದವರನ್ನೂ ತುದಿಗಾಲಲ್ಲಿ ನಿಲ್ಲಿಸುವಂತೆ ಸಿನಿಮಾ ಇತ್ತು. ಚಿತ್ರೀಕರಣ, ಸಂಗೀತ ಎಲ್ಲಿಯೂ ಅತಿರೇಕವೆನಿಸದು. ಹೀಗೆ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಹಲವಾರು ಜನ ಘಟನೆಗಳು ಸ್ವಾತಂತ್ರ ಹೋರಾಟದ ಪ್ರಮುಖ ಅಂಶಗಳಾದರೂ ದೊಡ್ಡವರ ಕಥೆಗಳ ಮುಂದೆ ಇವೆಲ್ಲ ಎಂದೂ ಬೆಳಕಿಗೆ ಬಂದೇ ಇಲ್ಲ ಎಂಬ ಅಮಿತಾಬ್ ಬಚ್ಚನ್‌ರವರ ಹಿನ್ನೆಲೆಯ ಮಾತುಗಳು. ಸ್ವಾತಂತ್ರ ಹೋರಾಟದಲ್ಲಿ ದುಡಿಯುವ ವರ್ಗದ ಪಾತ್ರವನ್ನು ನಗಣ್ಯವೆನಿಸಿದ ಚರಿತ್ರೆಯ ಅರಿವಿರುವ ನಮಗೆ ಅಕ್ಷರಶಃ ಸತ್ಯವೆನಿಸುತ್ತದೆ.

ಈಗ ಎರಡನೇ ಸ್ವಾತಂತ್ರ ಸಮರಕ್ಕೆ ದೇಶ ಸಜ್ಜಾಗಿರುವಾಗ ಜನರಿಗೆ ಭುವನ್ ಚಂಪಾರಣ ಒಂದು ಉದಾಹರಣೆಯಾಗಬೇಕು. ಇದೆಲ್ಲದರ ಜೊತೆ ಪತ್ರಿಕೆಗಳಲ್ಲಿ ವರದಿಯಾದಂತೆ ಚಿತ್ರದ ನಿರ್ಮಾಪಕನೂ ಆದ ನಾಯಕ ಅಮೀರ್‌ಖಾನ್ ಈ ಸಿನಿಮಾ ಚಿತ್ರಿಕರಿಸಿದ ಕೆಲವೇ ದಿನಗಳಲ್ಲಿ ಭಿಕರ ಭೂಕಂಪಕ್ಕೆ ತುತ್ತಾದ ಭುಜ್ ಪ್ರದೇಶದ ಕೆಲವು ಹಳ್ಳಿಗಳ ಪುನರ್ ನಿರ್ಮಾಣಕ್ಕೆ ಈ ಚಿತ್ರ ಪ್ರದರ್ಶನದ ಮೂಲಕ ಬಂದ ಹಣ ವಿನಿಯೋಗಿಸುವುದಾಗಿ ಹೇಳಿದ್ದಾರೆ. ಇದು ನಿಜಕ್ಕೂ ಪ್ರಶಂಸನಾರ್ಹ. ಪ್ರವಾಹದೋಪಾದಿಯಲ್ಲಿ ಹರಿದು ಬಂದ ನೆರವಿನ ಸಾಮಗ್ರಿಗಳನ್ನು ನಿರ್ಲಕ್ಷದಿಂದ ನೋಡಿದ ಗುಜರಾತ್ ಸರ್ಕಾರಕ್ಕೆ ಇದೊಂದು ಮಾದರಿಯಾಗಬೇಕು.

- ವಿಮಲಾ ಕೆ.ಎಸ್.

ಚಂದನಚಿಗುರು ಮತ್ತು ಪ್ರಶಸ್ತಿ ವಿವಾದ

ಕಳೆದ ಸಾಲಿನ ರಾಜ್ಯ ಚಲನಚಿತ್ರ ಪ್ರಶಸ್ತಿ ಪ್ರಕಟಗೊಂಡಾಗ ಹಲವಾರು ವಿವಾದಗಳು ಕೇಳಿಬಂದವು. ಪ್ರತಿಸಲವೂ ವಿವಾದ ತಪ್ಪುವುದಿಲ್ಲ. ಆದರೆ ಈ ಸಲದ ವಿವಾದಗಳು ತೀರಾ ಗಮನಾರ್ಹವಾದವುಗಳಾಗಿವೆ. ಆಯ್ಕೆ ಸಮಿತಿ ಅಧ್ಯಕ್ಷರಾಗಿದ್ದ ಎಂ.ಎಸ್.ಸತ್ಯುರವರೇ ವಿವಾದದ ಕೇಂದ್ರಬಿಂದುವಾಗಿದ್ದಾರೆ. ಮಕ್ಕಳ ವಿಭಾಗದಲ್ಲಿ ಭಾಗವಹಿಸಿದ್ದ 'ಚಂದನಚಿಗುರು' ಚಿತ್ರವನ್ನು ಅದೊಂದು ಮಕ್ಕಳ ಚಿತ್ರ ಅಲ್ಲವೇ ಅಲ್ಲ ಎಂದು ಹೀಯಾಳಿಸಿದ್ದರು. ಆ ಚಿತ್ರವನ್ನು ನೋಡಿದಾಗ ಅವರ ಅಭಿಪ್ರಾಯವನ್ನು ಒಪ್ಪಬಹುದಾದರೂ ಕನ್ನಡ ಚಿತ್ರಗಳ ಗುಣಮಟ್ಟದ ಬಗ್ಗೆ ಮಾತನಾಡುವ ಸತ್ಯುರವರು ಅತ್ಯಂತ ಕೀಳು ಅಭಿರುಚಿಯಿಂದ ಕೂಡಿರುವ 'ಕುರಿಗಳು ಸಾರ್ ಕುರಿಗಳು' ಚಿತ್ರಕ್ಕೆ ಮೂರನೇ ಉತ್ತಮ ಚಿತ್ರವೆಂದು ಪ್ರಶಸ್ತಿ ನೀಡಿರುವುದು ಯಾರೂ ಒಪ್ಪುವಂತಹದ್ದಲ್ಲ. 'ಚಂದನ ಚಿಗುರು' ಆ ಚಿತ್ರದಷ್ಟು ಅದ್ವಾನವಾಗಿಲ್ಲ.

ಇಂದಿನ ಮಕ್ಕಳೇ ನಾಳಿನ ಪ್ರಜೆಗಳು. ಆ ಮಕ್ಕಳು ಮುಂದಿನ ಉತ್ತಮ ಪ್ರಜೆಗಳಾಗಿ ರೂಪಿತವಾಗುವ ಹಂತವೇ ಪ್ರಾಥಮಿಕ ಹಂತ. ಈ ಹಂತದಲ್ಲಿ ಅವರಿಗೆ ಉತ್ತಮ ಮಾರ್ಗದರ್ಶನ ನೀಡುವ ಧ್ಯೇಯ ಹೊತ್ತ ಸುಧಾರಾಣಿ ಸ್ವಯಂಇಚ್ಛೆಯಿಂದ ಶಿಕ್ಷಕಿಯಾಗಿ ತನ್ನ ಜೀವನದಲ್ಲಿ ಸಾರ್ಥಕತೆಯನ್ನು ಕಂಡುಕೊಳ್ಳುತ್ತಾಳೆ. ತನ್ನ ಮುಂದೆ ವಿಪುಲವಾದ ಅವಕಾಶಗಳಿದ್ದರೂ ಅವನ್ನೆಲ್ಲಾ ಕಡೆಗಣಿಸುತ್ತಾಳೆ. ತಾನು ಮದುವೆಯಾಗಲಿರುವ ಹುಡುಗ(ಕುಮಾರ್ ಗೋವಿಂದ್) ಸಾಫ್ಟ್‌ವೇರ್ ಇಂಜಿನಿಯರ್ ಆಗಿ ಅಮೇರಿಕಕ್ಕೆ ಹೊರಟಾಗ ತಾನು ಅವನೊಂದಿಗೆ ಹೋಗಲು ನಿರಾಕರಿಸಿ ಅವನನ್ನೇ ತ್ಯಜಿಸುತ್ತಾಳೆ. ಇಲ್ಲಿ ವಿದ್ಯೆ ಕಲಿತ ಯುವಕರು ಈ ದೇಶದ ಆಸ್ತಿಯಾಗದೆ ಪರದೇಶಕ್ಕೆ ಹಾರುವ ಜಾಯಮಾನ ಕಂಡು ಮರುಗುತ್ತಾಳೆ ಮತ್ತು ಶಿಕ್ಷಕಿ ವೃತ್ತಿಯನ್ನು ಅಭಿಮಾನದಿಂದ ಸ್ವೀಕರಿಸುತ್ತಾಳೆ.

ತನ್ನ ಅಕ್ಕರೆಯ ನಡವಳಿಕೆಯಿಂದ ಮತ್ತು ಮನಸೆಳೆವ ಪಾಠ ಪ್ರವಚನಗಳಿಂದ ಮಕ್ಕಳ ಮನ ಗೆಲ್ಲುವುದೇ ಅಲ್ಲದೆ ಅವರಲ್ಲಿ ಸಾಕಷ್ಟು ಬದಲಾವಣೆಗಳನ್ನು ತರುತ್ತಾಳೆ. ಇದು 'ಚಂದನಚಿಗುರು' ಚಿತ್ರದ ಕಥೆ.

ಚಿತ್ರದಲ್ಲಿ ಸಾಕಷ್ಟು ಜನ ಮಕ್ಕಳು ಅಭಿನಯಿಸಿದ್ದಾರೆ. ಅಂದ ಮಾತ್ರಕ್ಕೆ ಇದು ಮಕ್ಕಳ ಚಿತ್ರ ಎಂದು ಹೇಳಲು ಸಾಧ್ಯವಿಲ್ಲ. ಏಕೆಂದರೆ ಇದರಲ್ಲಿ ಮಕ್ಕಳಿಗೆ ಸ್ಪೂರ್ತಿಕೊಡುವಂತಹ ಅಂಶಗಳೇನೂ ಇಲ್ಲ. ಇದು ಶಿಕ್ಷಕ-ಶಿಕ್ಷಕಿಯರ ಚಿತ್ರ. ಇತ್ತೀಚಿನ ದಿನಗಳಲ್ಲಿ ಮಕ್ಕಳನ್ನು ಬಹಳ ಹೀನಾಯವಾಗಿ ಕಾಣುವ, ಸಣ್ಣಪುಟ್ಟ ತಪ್ಪಿಗೆಲ್ಲಾ ಶಿಕ್ಷೆ ನೀಡುವ ಮತ್ತು ಹೆಣ್ಣು ಮಕ್ಕಳ ಮೇಲೆ ಅತ್ಯಾಚಾರಕ್ಕೂ ಹೇಸದ ಪರಿಸ್ಥಿತಿ



ಇರುವ ಸಂದರ್ಭದಲ್ಲಿ ಶಿಕ್ಷಕರು ಮಕ್ಕಳನ್ನು ಹೇಗೆ ತಿದ್ದಿತೀಡಬೇಕೆಂಬ ಸಂದೇಶ ಸಾರುವ ಚಿತ್ರ ಇದು.

ಚಿತ್ರದ ನಿರ್ದೇಶಕರಾದ ಅಬ್ದುಲ್ ರೆಹಮಾನ್ ಚಿತ್ರದ ನಿರೂಪಣೆಯಲ್ಲಿ ಎಡವಿರುವುದರಿಂದ ಪ್ರೇಕ್ಷಕರ ಗಮನ ಸೆಳೆಯುವಲ್ಲಿ ವಿಫಲವಾಗಿದೆ. ಬಿಡುಗಡೆಗೊಂಡ ಮೊದಲವಾರದಲ್ಲೇ ಚಿತ್ರಮಂದಿರದಲ್ಲಿ ಹತ್ತಿಪ್ಪತ್ತು ತಲೆಗಳು ಮಾತ್ರ ಕಾಣುವುದು ಚಿತ್ರದ ವಿಫಲತೆಗೆ ಹಿಡಿದ ಕನ್ನಡಿಯಾಗಿದೆ.

ಇದನ್ನರಿತುಕೊಳ್ಳದ ಚಿತ್ರದ ನಿರ್ದೇಶಕ - ನಿರ್ಮಾಪಕರು ಪ್ರಶಸ್ತಿ ನೀಡಿಕೆಯನ್ನು ಮರುಪರಿಶೀಲಿಸಲು ಸರ್ಕಾರಕ್ಕೆ ಆಗ್ರಹಿಸಿದ್ದಾರೆ. ಒಮ್ಮೆ ಪ್ರಕಟಿಸಿದ ಪ್ರಶಸ್ತಿಯನ್ನು ಮರುಶೀಲಿಸುವುದಾಗಲೀ, ಅತ್ತೂ ಕರೆದು ಪ್ರಶಸ್ತಿ ಗಿಟ್ಟಿಸುವುದಾಗಲೀ ಒಳ್ಳೆಯ ಲಕ್ಷಣಗಳಲ್ಲ. ತಮ್ಮದು ಶ್ರೇಷ್ಠ ಚಿತ್ರ ಎಂಬ ಭ್ರಮೆ ಬೇಡ. ಚಿತ್ರದಲ್ಲಿ ಮಕ್ಕಳಿದ್ದ ಮಾತ್ರಕ್ಕೆ ಅದು ಮಕ್ಕಳ ಚಿತ್ರವಾಗಲು ಸಾಧ್ಯವಿಲ್ಲ ಎನ್ನುವುದನ್ನು ಅವರು ಅರಿತುಕೊಳ್ಳಬೇಕು. ಅಗತ್ಯ ಬಿದ್ದರೆ ತಾವು ಕೋರ್ಟ್ ಮೆಟ್ಟಿಲ ಕೂಡ ಹತ್ತುವೆವೆಂದು ನಿರ್ದೇಶಕ-ನಿರ್ಮಾಪಕರು ಹೇಳಿರುವುದು ಕೂಡ ಖಂಡನೀಯವಾದುದು.

- ರಾಮು.ಎ

PRBDECR 319-79/79 AIKYARANGA WEEKLY Reg. No. 17015/64 KRNM/BGS-405 MAG (2)

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್ ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462, ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1

Printed & Published by Communist Party of India(Marxist), Karnataka State Committee. Editor : S.Y.GURUSHANTH